ದೆಹಲಿ ಕರ್ನಾಟಕ ಸಂಘದ

# ಅಭಿಮತ

ನವೆಂಬರ್ 2011 ಬೆಲೆ ರೂ. 1.



ವಿಶ್ವಭಾರತಿಗೆ ಕನ್ನಡದಾರತಿ–ಮೊಳಗುತಿರಲಿ ಕನ್ನಡ ಜಯಭೇರಿ

# ಈಗ ಇಪ್ಪತ್ತೆರಡರ ಪ್ರಬುದ್ಧೆ – ನಮ್ಮ ಹೆಮ್ಮೆಯ ಅಭಿಮತ

ಅಕ್ಟೋಬರ್ 9, ದೆಹಲಿ ಕರ್ನಾಟಕ ಸಂಘದ ಮುಖಪತ್ರಿಕೆ 'ಅಭಿಮತ' ಇಪ್ಪತ್ತೊಂದು ವಸಂತಗಳನ್ನು ಸಾಗಿಬಂದ ಯಶಸ್ಸನ್ನು ದೆಹಲಿ ಕನ್ನಡಿಗರು ಸಾಹಿತ್ಯ ಸಂಜೆಯ ಪುಟ್ಟ ಕಾರ್ಯಕ್ರಮದಲ್ಲಿ ಆಚರಿಸಿ ಸಂಭ್ರಮಿಸಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ, ಡಾ.ವೆಂಕಟಾಚಲ ಹೆಗಡೆ ಅವರು ಈ ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಗಳಾಗಿ ಆಗಮಿಸಿದ್ದ ರಾಷ್ಟ್ರದ ಸನ್ಮಾನ್ಯ ಪ್ರಧಾನಿಗಳ ಜಂಟಿ ಕಾರ್ಯದರ್ಶಿ ಹಾಗೂ ಐಎಎಸ್ ಅಧಿಕಾರಿಗಳಾಗಿರುವ ಹೆಮ್ಮೆಯ ಕನ್ನಡಿಗ, ಕವಿ ಎಲ್.ಕೆ.ಅತೀಕ್ ಅವರನ್ನು ಹೂಗುಚ್ಛ ನೀಡಿ ಸ್ವಾಗತಿಸಿದರು. ಜಂಟಿ ಕಾರ್ಯದರ್ಶಿ ರೇಣುಕಾ ನಿಡಗುಂದಿ ಅವರು ಬೆಂಗಳೂರು ಕಾಲೇಜಿನ ಇಂಗ್ಲೀಷ್ ಪ್ರಾಧ್ಯಾಪಕಿ, ಲೇಖಕಿ ಹಾಗೂ ಪತ್ರಕರ್ತೆ ಸುಕನ್ಯ ಕಾನರಳ್ಳಿ ಅವರನ್ನು ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು.



ಡಾ.ವೆಂಕಟಾಚಲ ಹೆಗಡೆಯವರು ಮಾತನಾಡುತ್ತ ಅಕ್ಟೋಬರ 2, 1990 ರಲ್ಲಿ ಪುಟ್ಟ ಪ್ರಯತ್ನ, ಪುಟ್ಟ ಹೆಜ್ಜೆಯೊಂದಿಗೆ ಪ್ರಾರಂಭವಾದ 'ಅಭಿಮತ' ಇಂದು ಪ್ರಬುದ್ಧವಾಗಿ ಬೆಳೆದು ಬಂದಿರುವ ಕಾಲಘಟ್ಟದ ಏಳು–ಬೀಳುಗಳನ್ನು ಮೆಲುಕುಹಾಕಿದರು. ಕಂಪ್ಯೂಟರ್ ಯುಗವಿನ್ನೂ ಆರಂಭವಾಗದ ಕಾಲದಲ್ಲಿ ಅಭಿಮತಕ್ಕಾಗಿ ಸೇವೆ ಸಲ್ಲಿಸಿದ ದಿವಂಗತ ಬಿ.ಎಸ್.ಚಂದ್ರಶೇಖರ್, ಚೆನ್ನು ಎಸ್. ಮಠದ, ಟಿ.ಎಸ್. ಸತ್ಯನಾಥ್, ಎನ್.ಪಿ.ಭಟ್, ಸಿ.ವಿ.ಗೋಪಿನಾಥ್ ಮುಂತಾದ ನೂರಾರು ಕನ್ನಡಿಗರ ಶ್ರಮವಿದೆ. ಈಗ ಅಭಿಮತ ಇಪ್ಪತ್ತೊಂದು ವರ್ಷಗಳಲ್ಲಿ ತನ್ನ ಕಾಲ ಮೇಲೆ ತಾನು ನಿಲ್ಲಬೇಕಾದ ಸ್ವಂತಿಕೆ ಆಗಲೇಬೇಕಾಗಿದೆ. 'ಅಭಿಮತ' ದೆಹಲಿ ಕನ್ನಡಿಗರ ಚಟುವಟಿಕೆಗಳನ್ನು, ಆಗು–ಹೋಗುಗಳನ್ನು ದಾಖಲಿಸುವುದರ ಮೂಲಕ ಇಪ್ಪತ್ತೊಂದು ವರ್ಷಗಳ ದೆಹಲಿ ಕನ್ನಡಿಗರ ಇತಿಹಾಸವನ್ನು ದಾಖಲಿಸುವಲ್ಲಿ ಯಶಸ್ವಿಯಾಗಿದೆಯೆಂದು ಹೆಮ್ಮೆಯಿಂದ ನುಡಿದರು.

ಅಭಿಮತದ ಇಪ್ಪತ್ತೆರಡನೇ ಸಂಪುಟದ ಮೊದಲ ಸಂಚಿಕೆಯನ್ನು ಬಿಡುಗಡೆಮಾಡಿ ಮಾತನಾಡಿದ ಎಲ್.ಕೆ.ಅತೀಕ್ ಅವರು 2007 ರಲ್ಲಿ ಕರ್ನಾಟಕದಿಂದ ರಾಜಧಾನಿಗೆ ಬಂದ ತಮ್ಮ ಬದುಕು. ಅದಕ್ಕೂ ಮೊದಲು ಹಾಸನ ಮತ್ತು ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ ಅವಧಿಯನ್ನು ನೆನೆದರು. ಪ್ರವೃತ್ತಿಯಿಂದ ಕವಿ ಹೃದಯದ ಅತೀಕ್ ತಮ್ಮ ನೆಚ್ಚಿನ ಉರ್ದು ಕವಿ ಫೈಝ್ ಅಹಮದ್ ಫೈಝ್ ಅವರನ್ನು ಕನ್ನಡಿಗರಿಗೆ ಪರಿಚಯಿಸುವ ಹಂಬಲದಿಂದ ಅವರ ಕವಿತೆಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದರು. ಅವರ ಅನುವಾದಿತ ಕೃತಿಯನ್ನು ಕವಿ ಜಿ.ಎಸ್.ಎಸ್. ಅವರು ಬಿಡುಗಡೆ ಮಾಡಿದ್ದಾರೆ. 1911 ರಲ್ಲಿ ಜನಿಸಿದ ಫೈಝ್ ಪ್ರಗತಿಪರ ಹಾಗೂ ಕ್ರಾಂತಿಕಾರಿ ಕವಿ. ಫೈಝ್ ಅವರ ದನಿ ಯಾವ ಗಡಿಗೂ ಸೀಮಿತವಾಗಿದ್ದಿಲ್ಲ– ಎಂದು ವಿವರಿಸಿದ ಅತೀಕ್ ತಾವು ಅನುವಾದಿಸಿದ–'ಫೈಝ್ ಅಹ್ಮದ್ ಫೈಝ್' ಕವನ ಸಂಕಲನದಿಂದ 'ಸ್ವಾತಂತ್ರ್ಯದ ಮುಂಜಾವು ಅಗಸ್ಟ್ 1947' ; ಪ್ರಾರ್ಥನೆ, ; ಮಾತನಾಡು, ಮುಂತಾದ ಕೆಲವು ಕವಿತೆಗಳನ್ನು ಭಾವಪೂರ್ಣವಾಗಿ ವಾಚಿಸಿದರು.

ಸುಕನ್ಯಾ ಕನರಳ್ಳಿ ತಾವು ಇತ್ತೀಚೆಗೆ ಸಂಶೋಧಿಸುತ್ತಿರುವ ಹಾಗೂ ಗ್ರಂಥರೂಪದಲ್ಲಿ ಹೊರತರಲಿರುವ "ಹೆಣ್ಣಿನ ಆತ್ಮಕಥನಗಳು–ಗತವೆದ್ದು ಕೂತು ಮಾತನಾಡಿದಾಗ"–ಎಂಬ ವಿಷಯದ ಕುರಿತು ವಿದ್ವತ್ತಪೂರ್ಣವಾಗಿ ಮಾತನಾಡಿದರು. 'ಅವನ' ಆತ್ಮಕಥೆಗಿಂತ 'ಅವಳ' ಆತ್ಮಕಥೆ ಹೇಗೆ ಭಿನ್ನವಾಗಿರುತ್ತದೆ ಮತ್ತು ಜಗತ್ತಿನ ವಿಮರ್ಶಕರು ಹೇಗೆ ಹೆಣ್ಣಿನ ಆತ್ಮಕಥೆಗಳನ್ನು ಅನಿರ್ಣಾಯಕ ಚೌಕಟ್ಟಿಗೆ ಸೀಮಿತಗೊಳಿಸಿದ್ದಾರೆಂಬ ವಿಷಯವನ್ನು ಮಂಡಿಸಿದರು.

ಕಾರ್ಯಕ್ರಮವನ್ನು ನಿರ್ವಹಿಸಿದ ಅಭಿಮತ ಸಂಪಾದಕಿ, ಉಷಾ ಭರತಾದ್ರಿ ಅವರು ಅಭಿಮತಕ್ಕಾಗಿ ತಮ್ಮ ಅಮೂಲ್ಯ ಸಮಯ ನೀಡಿ ಸೇವೆ ಸಲ್ಲಿಸಿದ ಹಾಗೂ ಸಹಕರಿಸುತ್ತಿರುವ ಎಲ್ಲ ಬರಹಗಾರ ಕನ್ನಡಿಗರನ್ನು ನೆನೆಯುತ್ತಾ ಮನಃಪೂರ್ವಕವಾಗಿ ಧನ್ಯವಾದಗಳನ್ನು ಅರ್ಪಿಸಿದರು. ವಂದನಾರ್ಪಣೆಯೊಂದಿಗೆ ಮುಗಿದ ಮುಸ್ಸಂಜೆಗೆ ಕಾಫಿ– ಲಘು ಉಪಹಾರದ ಹರಟೆ ಕಳೆಕಟ್ಟಿತ್ತು.

❑ *ರೇಣುಕಾ ನಿಡಗುಂದಿ*

# ಅಂಟಾರ್ಟಿಕ ಐಸ್ ಮ್ಯಾರಥಾನ್‌ಗೆ ಮಾಲಾ ಹೊನ್ನತ್ತಿ




ಎಲ್ಸ್‌ವರ್ತ್ ಪರ್ವತದ ಬಳಿಯ ದಕ್ಷಿಣ ಧೃವದ ಸಮೀಪದಲ್ಲಿ ನವೆಂಬರ್ 30, 2011ರಂದು 7ನೆಯ ಅಂಟಾರ್ಟಿಕ ಐಸ್ ಮ್ಯಾರಥಾನ್ ನಡೆಯಲಿದೆ. 3000 ಅಡಿ ಎತ್ತರದಲ್ಲಿ ಮಂಜು ಹಾಗೂ ಹಿಮಗಡ್ಡೆ ಆವೃತವಾದ–20ಡಿಗ್ರಿ ಸೆಂಟಿಗ್ರೇಡ್ ತಾಪಮಾನವಿರುವ ಅಂಟಾರ್ಟಿಕದ ಮ್ಯಾರಥಾನ್ ಸಾಹಸ ಪ್ರಿಯರಿಗೆ, ಮ್ಯಾರಥಾನ್ ಸ್ಪರ್ಧಿಗಳಿಗೆ ನಿಜಕ್ಕೂ ಒಂದು ಸವಾಲು. ಇಂತಹ ಸಾಹಸಕ್ಕೆ ಮುಂದಾಗಿದ್ದಾರೆ ದೆಹಲಿ ಕನ್ನಡತಿ 58ರ ಹರೆಯದ ಮಾಲಾ ಹೊನ್ನತ್ತಿ. ಕಳೆದ 20 ವರ್ಷಗಳಿಂದ ದೆಹಲಿಯಲ್ಲೇ ವಾಸವಾಗಿರುವ ಹಾವೇರಿ ಮೂಲದ ಮಾಲಾ 1985ರಿಂದಲೂ ಮ್ಯಾರಥಾನ್ ಓಟಗಾರ್ತಿ ಹಾಗೂ ಪರ್ವತಾರೋಹಿಯಾಗಿ ವಿಶ್ವದೆಲ್ಲೆಡೆ ಹಲವಾರು ಮ್ಯಾರಥಾನ್‌ನಲ್ಲಿ ಸ್ಪರ್ಧಿಸಿ ವಿಜೇತರಾಗಿದ್ದಾರೆ. ಸಿಂಗಾಪುರ್, ಜಪಾನ್, ನ್ಯೂಯಾರ್ಕ್, ಸ್ಯಾನ್‌ಫ್ರಾನ್ಸಿಸ್ಕೋ ಮೊದಲಾದ 12 ಮ್ಯಾರಥಾನ್‌ನಲ್ಲಿ ಭಾಗವಹಿಸಿದ ಖ್ಯಾತಿ ಮಾಲಾ ಅವರದ್ದು, ಇತ್ತೀಚೆಗೆಷ್ಟೇ ಭಾರತೀಯ ಸೇನಾ ಪಡೆ ಆಯೋಜಿಸಿದ್ದ ಸಿಯಾಚಿನ್ ಪರ್ವತಾರೋಹಣದಲ್ಲಿ ಮಾಲಾ ಯಶಸ್ವಿಯಾಗಿ ಪಾಲ್ಗೊಂಡಿದ್ದಾರೆ. ಇದೀಗ ನವೆಂಬರ್ 30ರಂದು ನಡೆಯಲಿರುವ ಅಂಟಾರ್ಟಿಕ ಐಸ್ ಮ್ಯಾರಥಾನ್‌ನಲ್ಲಿ ಭಾಗವಹಿಸುತ್ತಿರುವ ಮಾಲಾ ಅವರು ಕರ್ನಾಟಕ ಮೊದಲ ಮಹಿಳೆ ಹಾಗೂ ಭಾರತದ ಎರಡನೇ ಮಹಿಳೆ ಎನ್ನುವುದು ಕನ್ನಡಿಗರಿಗೆ ಅತ್ಯಂತ ಹೆಮ್ಮೆಯ ವಿಷಯ. ಮಾಲಾ ಅವರ ಅದಮ್ಯ ಉತ್ಸಾಹ ನಿಜಕ್ಕೂ ಇಂದಿನ ಯುವ ಪೀಳಿಗೆಗೆ ಆದರ್ಶಪ್ರಾಯವಾದದ್ದು. ದೆಹಲಿ ಕರ್ನಾಟಕ ಸಂಘದ ಮಾಜಿ ಜಂಟಿ ಕಾರ್ಯದರ್ಶಿ, ಉತ್ಸಾಹಿ ಮಹಿಳೆ ಮಾಲಾ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು. ಅಂಟಾರ್ಟಿಕ ಐಸ್ ಮ್ಯಾರಥಾನ್ ಸ್ಪರ್ಧೆಯನ್ನು ಮಾಲಾ ಯಶಸ್ವಿಯಾಗಿ ಪೂರೈಸಲಿ, ಕನ್ನಡದ ಕೀರ್ತಿ ಪತಾಕೆ ಬೆಳಗಿಸಲಿ ಎಂದು ಶುಭ ಹಾರೈಸುತ್ತೇವೆ.

❑ *ಉಷಾ ಭರತಾದ್ರಿ*

ಸಂಪುಟ 22   ಸಂಚಿಕೆ 2
ನವೆಂಬರ್ 2011,   ಬೆಲೆ ರೂ. 1

ಪ್ರಧಾನ ಸಂಪಾದಕರು
ಉಷಾ ಭರತಾದ್ರಿ

ಸಂಪಾದಕ ಮಂಡಳಿ
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ
ಚಂದ್ರಶೇಖರ ಎನ್.ಪಿ.

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಖಜಾಂಚಿ
ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಜಿ. ಹೆಗಡೆ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

# ಮನದ ಮಾತು

ಕನ್ನಡದ ಪ್ರಸಿದ್ಧ ಕವಿ, ಚಿಂತಕ ಎ.ಕೆ. ರಾಮಾನುಜನ್ ವಿಶ್ವಮಾನ್ಯತೆ ಗಳಿಸಿದ ಪ್ರಕಾಂಡ ಪಂಡಿತರು ಹಾಗೂ ವಿದ್ವಾಂಸರು. ಅಮೆರಿಕೆಯ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ರಾಮಾನುಜನ್ ಕನ್ನಡದ ಜತೆ ಜೀವಂತ ಸಂಪರ್ಕ ಹೊಂದಿದ್ದರಲ್ಲದೆ ನಮ್ಮ ನೆಲದ ಜಾನಪದ ಐಸಿರಿಯನ್ನು ಗಾಢವಾಗಿ ಅಧ್ಯಯನ ಮಾಡಿದ್ದವರು. ಜನಮಾನಸದಲ್ಲಿ ಸುಪ್ತವಾಗಿರುವ ಸಾಗರದಂತಹ ವಿರಾಟ್ ಪ್ರತಿಭೆಯನ್ನು ಅಗಾಧವಾಗಿ ಗೌರವಿಸಿದ್ದವರು. ಹನ್ನೆರಡನೇ ಶತಮಾನದಲ್ಲಿ ಇಡೀ ಜಗತ್ತು ಬರ್ಬರ ಸ್ಥಿತಿಯಲ್ಲಿದ್ದಾಗ ಅಪೂರ್ವ ವಿಚಾರಧಾರೆಯನ್ನು ವಚನಗಳ ಮೂಲಕ ದಾಖಲಿಸಿದ್ದ ಶರಣರ ಅಪ್ರತಿಮ ಜೀವಪರ ನಿಲುವನ್ನು ಮೊತ್ತಮೊದಲ ಸಲ ಅಧಿಕೃತವಾಗಿ ತಮ್ಮ 'Speaking of Shiva' ಎಂಬ ಭಾಷಾಂತರದ ಮೂಲಕ ಪರಿಚಯಿಸಿದ್ದವರು ಶ್ರೀ ರಾಮಾನುಜನ್. ಇವರ ಪ್ರಸಿದ್ಧ ನಿಬಂಧ 'Three hundred Ramayanas ; Five Examples and Three Thoughts' ಇಡೀ ಜಗತ್ತಿನ ವಿದ್ವಾಂಸರಿಗೆ ಭಾರತದ ಸೃಜನಶೀಲತೆಯ ವೈವಿಧ್ಯವನ್ನು ಪರಿಚಯಿಸಿತು. ದೆಹಲಿ ವಿಶ್ವವಿದ್ಯಾಲಯ ಪದವಿ ತರಗತಿಗಳಲ್ಲಿ ಈ ಮೂವತ್ತು ಪುಟಗಳ ನಿಬಂಧವನ್ನು ಪಠ್ಯವನ್ನಾಗಿಸಿ ರಾಮಾನುಜನ್ ಅವರ ವಿದ್ವತ್ಪೂರ್ಣ ವ್ಯಕ್ತಿತ್ವಕ್ಕೆ ಗೌರವ ಸಲ್ಲಿಸಿತ್ತು. ಆದರೆ ಇತ್ತೀಚೆಗೆ ಉಗ್ರವಿಚಾರಧಾರೆಯ ಕೆಲವರಿಗೆ ಮರ್ಯಾದಾ ಪುರುಷೋತ್ತಮ ರಾಮ ಕೇವಲ ಪುರುಷೋತ್ತಮನಾಗಿ ಉಳಿಯಕೂಡದು, ಅವನು ಜನ ಆರಾಧಿಸುವ ದೇವರಾಗಬೇಕು ಅನ್ನಿಸಿತು. ಅವರ ಕೆಂಗಣ್ಣಿಗೆ ಮೊದಲು ಬಿದ್ದದ್ದು–ರಾಮಾನುಜನ್ ಅವರ ವಸ್ತುನಿಷ್ಠ ಅವಲೋಕನದ ಈ ನಿಬಂಧ. ಯಾವ ಒತ್ತಡ ತಂದರೋ ಗೊತ್ತಿಲ್ಲ, ದೆಹಲಿ ವಿಶ್ವವಿದ್ಯಾಲಯ ಚರಿತ್ರೆಯ ಪಠ್ಯಗಳಲ್ಲಿ ಒಂದಾಗಿದ್ದ ಈ ನಿಬಂಧವನ್ನು ಕೈ ಬಿಟ್ಟಿದೆ. ಇದಕ್ಕಾಗಿ ಪ್ರತಿಭಟನೆಗಳೂ ನಡೆಯುತ್ತಿವೆ. ಇದು ನಿಜಕ್ಕೂ ವಿಷಾದನೀಯ. ಧರ್ಮ ಮತ್ತು ಇತಿಹಾಸ, ಕಲ್ಪನೆ ಮತ್ತು ವಾಸ್ತವ ಹಾಗೂ ಆರಾಧನೆ ಮತ್ತು ವಿಶ್ಲೇಷಣೆಗಳ ಸಂಘರ್ಷ ನಮ್ಮ ಶಿಕ್ಷಣ ಕ್ಷೇತ್ರವನ್ನು ಕಲುಷಿತಗೊಳಿಸಿತಲ್ಲಾ ಎಂಬುದು ಖೇದದ ಸಂಗತಿ. ದೆಹಲಿ ವಿಶ್ವವಿದ್ಯಾಲಯದ ಬೃಂದಾ ಬೋಸ್ ಅವರು ಹೇಳಿದಂತೆ– 'ರಾಮಾನುಜನ್ ಅವರ ನಿಬಂಧ ಒಂದು ಬೌದ್ಧಿಕ ಕಸರತ್ತು; ಧರ್ಮದ ಪಾಠ ಹೇಳುವುದು ಅದರ ಉದ್ದೇಶವಲ್ಲ. ಈ ನಿಬಂಧವನ್ನು ಕೈ ಬಿಡಬೇಕೆಂಬ ನಿರ್ಧಾರ ನಮ್ಮ ಶೈಕ್ಷಣಿಕ ಸಾಮರ್ಥ್ಯವನ್ನು ಲೇವಡಿ ಮಾಡುವಂತಿದೆ'. ನಮ್ಮ ನಾಡಿನವರು, ನಮ್ಮ ಭಾಷೆಯ ಕವಿಗಳಾದ ರಾಮಾನುಜನ್ ಅವರ ಕೃತಿಗೆ ಮೂಲಭೂತವಾದಿಗಳ ವಿರೋಧದಿಂದ ಆಗಿರುವ ಅವಮಾನ ಖಂಡನೀಯ. ಬಯಲಾಟ, ಯಕ್ಷಗಾನ, ಸೂತ್ರದ ಬೊಂಬೆಯಾಟ ಹೀಗೆ ಹತ್ತು ಹಲವು ಪ್ರಕಾರಗಳಲ್ಲಿ ಹತ್ತು ಹಲವು ರೀತಿಯ ರಾಮಾಯಣಗಳನ್ನು ಕಟ್ಟಿ ಆಡುವ ಕನ್ನಡಿಗರ ಪ್ರತಿಭೆಯನ್ನು ಈ ಜನರಿಗೆ ಪರಿಚಯಿಸಬೇಕು. ಸೃಜನಶೀಲತೆಯನ್ನು ನಿಶ್ಚಿತ ಧಾರ್ಮಿಕ ಅಳತೆಗೋಲುಗಳಿಂದ ಅಳೆಯುವುದನ್ನು ಖಂಡಿಸಲೇ ಬೇಕು.

ಅತ್ತ ನಮ್ಮ ನಾಡಿನಲ್ಲಿ ದೀಪಾವಳಿಯ ಕೊಡುಗೆಯೆಂಬಂತೆ ಮೆಟ್ರೊ ಸೇವೆ ಆರಂಭವಾಗಿದೆ. ದೆಹಲಿ, ಕೊಲ್ಕತ್ತಗಳ ನಂತರ ಮೆಟ್ರೊ ಸವಲತ್ತು ಪಡೆದ ದೇಶದ ತೃತೀಯ ನಗರ ಬೆಂಗಳೂರು ಎಂಬ ಹೆಮ್ಮೆ ನಮ್ಮದು. ಸದ್ಯಕ್ಕೆ 6.7 ಕಿ.ಮೀ ಅಂತರದ ಬೈಯಪ್ಪನ ಹಳ್ಳಿ–ಮಹಾತ್ಮ ಗಾಂಧಿ ರಸ್ತೆ ನಡುವಣ ಮೆಟ್ರೊ ಸಂಚಾರ ಆರಂಭಗೊಂಡಿದೆ. ಮೆಟ್ರೊ ಕ್ರಮೇಣ ದೆಹಲಿಯಲ್ಲಿರುವಂತೆ ನಗರದ ದಿಕ್ಕು ದಿಕ್ಕುಗಳನ್ನೂ ಸಂಪರ್ಕಿಸುವಂತಾಗಲಿ, ತನ್ಮೂಲಕ ವಾಹನ ದಟ್ಟಣೆಯಿಂದ ಆಗುತ್ತಿದ್ದ ಟ್ರಾಫಿಕ್ ಜಾಮ್‌ಗಳು ಕಡಿಮೆಯಾಗಲಿ, ಪರಿಸರ ಮಾಲಿನ್ಯ ನಾಶವಾಗಲಿ ಎಂಬುದು ನಮ್ಮ ಅಭಿಲಾಷೆ. ಆದರೆ ಇದು ಈಡೇರುವುದು ಎಂದು? 2006ನೇ ಇಸವಿಯಲ್ಲಿ ಅಂದಿನ ಪ್ರಧಾನಿಗಳಿಂದ ಉದ್ಘಾಟಿತವಾದ 'ನಮ್ಮ ಮೆಟ್ರೊ' ಯೋಜನೆ ಈತನಕ ತನ್ನ ಉದ್ದೇಶಿತ 43 ಕಿ.ಮೀ ಮಾರ್ಗದಲ್ಲಿ ಸಾಧಿಸಿದ್ದು ಹಾಗೂ ಕ್ರಮಿಸಿದ್ದು ಕೇವಲ 6.7 ಕಿ.ಮೀ. ಮಾತ್ರ. ಈ ಮಂದಗತಿ ಹೀಗೇ ಸಾಗಿದರೆ ಎರಡನೇ ಹಂತದ ಮೆಟ್ರೊ 200 ಕಿ.ಮೀ ಉದ್ದೇಶಿತ ದೂರ ಸಾಗುವುದಾದರೂ ಹೇಗೆ ಎಂಬ ಚಿಂತೆ ಕಾಡದೇ ಇರದು. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಗಳ ಬದ್ಧತೆ, ದೆಹಲಿ ಮೆಟ್ರೊದ ಕನಸನ್ನು ನನಸಾಗಿಸಿದ ಶ್ರೀಧರನ್ ಅವರಂತಹ ನಿಷ್ಠುರ ನೇತೃತ್ವ ಹಾಗೂ ಸಾರ್ವಜನಿಕ ಸಹಕಾರ ಮಾತ್ರ 'ನಮ್ಮ ಮೆಟ್ರೊ'ದ ಯಶಸ್ಸಿಗೆ ಅಡಿಪಾಯ ಹಾಕಬಲ್ಲವು. ಅಲ್ಲಿಯವರೆಗೆ ಆಶೆ ಮತ್ತು ನಿರೀಕ್ಷೆ ನಮ್ಮ ಪಾಲಿಗೆ ಕಟ್ಟಿಟ್ಟ ಬುತ್ತಿ.

ಶಾಸ್ತ್ರೀಯ ಸ್ಥಾನಮಾನ ಗಳಿಸಿದ ನಮ್ಮ ಕನ್ನಡ ಭಾಷೆಯ ಶ್ರೇಷ್ಠತೆಯ ಚಿಂತನ ಮಂಥನ, ಅಧ್ಯಯನ, ವಿವೇಚನೆ, ವಿಶ್ಲೇಷಣೆಗಳಿಗೆ ಈ ರಾಜ್ಯೋತ್ಸವದ ತಿಂಗಳಲ್ಲೇ ಶುಭಾರಂಭ ಆಗಿರುವುದು ಸಂತಸದ ಸಂಗತಿ. ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯಲ್ಲಿ ಶಾಸ್ತ್ರೀಯ ಕನ್ನಡದ ಅತ್ಯುನ್ನತ ಅಧ್ಯಯನ ಕೇಂದ್ರದ ಉದ್ಘಾಟನೆ ನವೆಂಬರ್ 8ರಂದು ನೆರವೇರಿದೆ. ಜಗತ್ತಿಗೆ ಕನ್ನಡದ ಪ್ರಾಚೀನತೆ, ಅತೀವಶಕ್ತಿ, ಜ್ಞಾನವನ್ನು ಸಂವಹನಿಸಿದ ರೀತಿ ಇತ್ಯಾದಿಗಳನ್ನು ಈ ಸಂಸ್ಥೆ ವಿದ್ವತ್ಪೂರ್ಣವಾಗಿ ನಿರ್ವಹಿಸಲಿ ಎಂಬುದು ನಮ್ಮ ಹಾರೈಕೆ.

❑ ಉಷಾ ಭರತಾದ್ರಿ

# ರಾಮಾನುಜನ್ ರಾಮಾಯಣ

ಇತ್ತೀಚೆಗೆ ದೆಹಲಿಯಲ್ಲಿ ನಿಧಾನವಾಗಿ ಏರುತ್ತಿರುವ ಚುಮುಚುಮು ಚಳಿಯೊಂದಿಗೆ ರಾಮಾಯಣದ ಕುರಿತಾಗಿ ಹಲವಾರು ಬಿಸಿಬಿಸಿ ಸುದ್ದಿಗಳು. ದೀಪಾವಳಿಯ ಸಂದರ್ಭದಲ್ಲಿ ರಾವಣನನ್ನು ಸುಡುವುದು ಇಲ್ಲಿನ ಒಂದು ಸಂಪ್ರದಾಯ. ದೆಹಲಿಯ ಮೂಲೆಮೂಲೆಗಳಲ್ಲಿ ಈ ಸುಡುವ ಕಾರ್ಯಕ್ರಮಗಳು ನಡೆಯುತ್ತವೆ. ಯಾರು ಯಾವ ರೀತಿಯಲ್ಲಿ ಸುಟ್ಟರು; ಯಾವ ಬಗೆಯ ಹೊಸ ವಿಧಾನಗಳನ್ನು ಅನುಸರಿಸಿದರು; ಯಾರೆಲ್ಲ ಬಂದಿದ್ದರು, ಹೇಗೆ ಬಾಣ ಬಿಟ್ಟರು ಎಂಬುದೇ ದೊಡ್ಡ ಸುದ್ದಿಯಾಗಿ ಬಿಡುತ್ತದೆ. ಇವೆಲ್ಲವನ್ನೂ ಬಿಟ್ಟು ಇನ್ನೊಂದು ಕಾರಣಕ್ಕಾಗಿ ರಾಮಾಯಣ ದೆಹಲಿಯಲ್ಲಿ ಸುದ್ದಿ ಮಾಡಿದೆ. ಅದರಲ್ಲಿ ಕನ್ನಡಿಗರೊಬ್ಬರ ಪಾಲು ಇದೆ ಎಂಬುದೇ ವಿಶೇಷ.

ಸಂಕ್ಷಿಪ್ತವಾಗಿ ಹೇಳುವುದಾದರೆ ದೆಹಲಿ ವಿಶ್ವವಿದ್ಯಾಲಯದವರು ದಿ. ಶ್ರೀ ಎ.ಕೆ. ರಾಮಾನುಜನ್‌ರವರು ರಾಮಾಯಣದ ಮೇಲೆ ಹಲವಾರು ವರ್ಷಗಳ ಹಿಂದೆ ಇಂಗ್ಲಿಷ್‌ನಲ್ಲಿ ಬರೆದ ಅಪೂರ್ವವಾದ ಲೇಖನವೊಂದನ್ನು ವಿಧ್ಯಾರ್ಥಿಗಳ ಓದಿನ ಪಟ್ಟಿಯಿಂದ ತೆಗೆದು ಹಾಕಿದ್ದು ಈ ಸುದ್ದಿಗೆ ಕಾರಣವಾಗಿದೆ. ಈ ಲೇಖನದಲ್ಲಿ ಶ್ರೀ ರಾಮಾನುಜನ್‌ರು ನಮ್ಮ ಹಾಗೂ ನೆರೆಹೊರೆಯ ದೇಶಗಳಲ್ಲಿ ಪ್ರಚಲಿತವಿರುವ ರಾಮಾಯಣದ ಕತೆಯ ವಿವಿಧತೆಯ ಬಗ್ಗೆ ಬರೆದಿದ್ದರು. ಈ ಬಗೆಯ ಧೋರಣೆಯ ಲೇಖನ ಕೆಲವರಿಗೆ ಹಿಡಿಸದೆ ದೆಹಲಿ ವಿಶ್ವವಿದ್ಯಾಲಯದಲ್ಲಿ ಗಲಾಟೆ ಎಬ್ಬಿಸಿದ್ದರು. ತದನಂತರ ವಿಶ್ವವಿದ್ಯಾಲಯದ ಅಕಾಡೆಮಿಕ್ ಸಮಿತಿ ಈ ಲೇಖನವನ್ನು ಓದಿನ ಪಟ್ಟಿಯಿಂದ ಕೈಬಿಡಲು ಶಿಫಾರಸ್ಸು ಮಾಡಿತ್ತು. ಈ ಬಗೆಯ ಶಿಫಾರಸ್ಸಿನಿಂದ ಈ ಘಟನೆಗೆ ಇನ್ನೊಂದು ಬಗೆಯ ಆಯಾಮ ಬಂದು ಈ ಲೇಖನ ಮತ್ತೆ ಪ್ರಸಿದ್ಧಿಯನ್ನು ಪಡೆಯುವಂತಾಯಿತು. ಈ ಬಗೆಯ ಅಕಾಡೆಮಿಕ್ ಸಮಿತಿಯ ಶಿಫಾರಸ್ಸನ್ನು ವಿರೋಧಿಸಿ ಮತ್ತೊಂದು ಸಮುದಾಯ ಚಳುವಳಿ ಆರಂಭಿಸಿದೆ. ಒಟ್ಟಾರೆ ನಮ್ಮ ಕನ್ನಡದ ರಾಮಾನುಜನ್ ಈಗಲೂ ಚಾಲ್ತಿಯಲ್ಲಿದ್ದಾರೆ. ಲೇಖನ ಕೈಬಿಡಿ ಎಂದರೆ ಜನಕ್ಕೆ ಇನ್ನೂ ಕುತೂಹಲ. ರಾಮಾನುಜನ್ ರವರು ಹಾಗೂ ಅವರ ಲೇಖನವನ್ನು ಓದಲು ಎಲ್ಲರಿಗೂ ಕಾತುರ.

ಇದೆಲ್ಲ ಏನೇ ಇದ್ದರೂ ರಾಮಾನುಜನ್‌ರವರು ಕನ್ನಡದ ಅಪ್ರತಿಮ ಕವಿ ಹಾಗೂ ಸಂಶೋಧಕರಾಗಿದ್ದರು. ಬರೀ ಕನ್ನಡವೊಂದೇ ಅಲ್ಲ, ತಮಿಳು ಹಾಗೂ ಇಂಗ್ಲಿಷ್‌ನಲ್ಲೂ ಕೂಡಾ ಅವರು ದೊಡ್ಡ ವಿದ್ವಾಂಸರಾಗಿದ್ದರು. ಅವರ ಬರವಣಿಗೆಯ ಹರವು ಈ ಎಲ್ಲ ಭಾಷೆಗಳಿಗೂ ದಟ್ಟವಾಗಿ ಹರಡಿತ್ತು. ಅಮೆರಿಕೆಯ ಚಿಕಾಗೊ ವಿಶ್ವವಿದ್ಯಾಲಯದಲ್ಲಿ ದಕ್ಷಿಣ ಏಶಿಯಾದ ಪ್ರಾಧ್ಯಾಪಕರಾಗಿ ತುಂಬಾ ಹೆಸರು ಮಾಡಿದವರು. 1960ರ ದಶಕದಲ್ಲಿ ಚಿಕಾಗೊಗೆ ತೆರಳುವ ಮುನ್ನ ಅವರು ಕರ್ನಾಟಕದ ಬೆಳಗಾವಿಯ ಕಾಲೇಜಿನಲ್ಲಿ ಕಲಿಸುತ್ತಿದ್ದರು. ಉನ್ನತ ಅಧ್ಯಯನಕ್ಕೆಂದು ಅಮೆರಿಕೆಗೆ ಹೋದವರನ್ನು ಅಲ್ಲಿನವರು ಬಿಡಲೇ ಇಲ್ಲ. ಅಲ್ಲೇ ಉಳಿದು ಪ್ರಾಧ್ಯಾಪಕರಾದರು.

ಅವರು 1991ರಲ್ಲಿ ದೆಹಲಿ ಕರ್ನಾಟಕ ಸಂಘಕ್ಕೂ ಬಂದಿದ್ದರು. ಆ ನೆನಪು ನನಗೆ ಇನ್ನೂ ಹಸಿಯಾಗಿದೆ. ಆಗಿನ್ನೂ ನಾವು ಶ್ರೀ ರಾಮಾನುಜನ್ ರವರ ಕೆಲ ಕವಿತೆಗಳನ್ನು ಹಾಗೂ ಬರಹಗಳನ್ನು ಓದಿದ್ದೆವು. ಆಗಿನ ಸಂಘದ ನೆಲಮಾಳಿಗೆಯಲ್ಲಿ (ಗ್ರಂಥ ಭಂಡಾರದಲ್ಲಿ) ಸರಳವಾದ ಆತ್ಮೀಯವಾದ ಸಂವಾದ ಸಮಾರಂಭವೊಂದನ್ನು ಏರ್ಪಡಿಸಲಾಗಿತ್ತು. ಈ ಸಂವಾದದಲ್ಲಿ ನಾನು ಕೇಳಿದ ಪ್ರಶ್ನೆಯ ತುಣುಕಿನ ಭಾಗದ ನೆನಪು ನನಗೆ ಈಗಲೂ ಇದೆ. ಅದು ಹೀಗಿತ್ತು. 'ತಾವು ಕನ್ನಡ, ತಮಿಳು ಹಾಗೂ ಆಂಗ್ಲ ಭಾಷೆಯಲ್ಲಿ ಅಷ್ಟೊಂದು ಸಮರ್ಥವಾಗಿ ಹೇಗೆ ಬರೆಯುತ್ತೀರಿ? ಹೀಗೆ ಬರೆಯುವಾಗ ಈ ಭಾಷೆಗಳು ನಿಮ್ಮ ಮನದಲ್ಲಿ ಒಂದಕ್ಕೊಂದು ಥಳಕು ಹಾಕಿಕೊಳ್ಳುವುದಿಲ್ಲವೇ' ಅವರ ಉತ್ತರವೂ ಅಷ್ಟೇ ಸರಳವಾಗಿತ್ತು. 'ನನ್ನ ಮನದೊಳಗೆ ಮೂರು ಕಿಂಡಿಗಳವೆ...ಕನ್ನಡದ ಕಿಂಡಿ, ತಮಿಳು ಕಿಂಡಿ ಹಾಗೂ ಇಂಗ್ಲಿಷ್‌ನ ಕಿಂಡಿ. ಕನ್ನಡದ ಕಿಂಡಿ ತೆರೆದಾಗ ಬಾಕಿ ಎರಡು ಕಿಂಡಿಗಳು ಮುಚ್ಚಿರುತ್ತವೆ. ತಮಿಳು ಕಿಂಡಿ ತೆರೆದಾಗ ಉಳಿದ ಕಿಂಡಿಗಳು ಮುಚ್ಚಿರುತ್ತವೆ' ಎಂದರು. ಹೀಗೆ ಹಲವಾರು ಪ್ರಶ್ನೆಗಳು...ಉತ್ತರಗಳು ರಾಮಾನುಜನ್‌ರವರಿಂದ.

ದಿ. ಶ್ರೀ ರಾಮಾನುಜನ್‌ರ ಭೇಟಿಯ ಮತ್ತು ಈ ಸಂವಾದದ ವಿವರಗಳು ಅಭಿಮತದ ಪುಟಗಳಲ್ಲಿ ಎಲ್ಲೋ ನಮೂದಿತವಾಗಿದೆ. ಹೀಗಾಗಿ ಇದೊಂದು ಅಭಿಮತದ ಚಾರಿತ್ರಿಕ ದಾಖಲೆ. ಆಗ...ನಂತರದಲ್ಲಿ ಕೆಲ ವರುಷಗಳ ಬಳಿಕ ಅವರು ನಮ್ಮನ್ನೆಲ್ಲ ಬಿಟ್ಟು ಅಗಲುವರೆಂಬ ಭಾವನೆಯೇ ಇರಲಿಲ್ಲ. ಅವರು ಕನ್ನಡದ ಹಾಗೂ ಭಾರತದ ಸಾಂಸ್ಕೃತಿಕ ಲೋಕವನ್ನು ಕಂಡ ಬಗೆಯೇ ವಿಶಿಷ್ಟವಾದದ್ದು. ಭಾರತದ ಸಾಂಸ್ಕೃತಿಕ ಲೋಕದಲ್ಲಿ ಅವರು ಅಗಾಧವಾದ ವಿವಿಧತೆಯನ್ನು ಕಂಡರು. ಜನಮನದಲ್ಲಿ ಅಳಿದುಳಿದ ಸಾವಿರಾರು ಬಗೆಯ ಕತೆಗಳನ್ನು–ಕನಸುಗಳನ್ನು ಸಂಗ್ರಹಿಸಿ ಅದರ ಬಗ್ಗೆ ಬರೆದರು. ಅವರ ಈ ಬಗೆಯ ಸಂಶೋಧನೆಗಳು ಹಲವು ಬಗೆಯ ಆಯಾಮಗಳನ್ನು, ಸ್ಪಂದನಗಳನ್ನು ಹುಟ್ಟುಹಾಕಿವೆ. ಅದರ ರೂಪಗಳನ್ನು, ಜನಸಮುದಾಯ ಅದಕ್ಕೆ ನೀಡುವ ಪ್ರತಿಕ್ರಿಯೆಯ ಅಲೆಗಳನ್ನು ನಾವು ಈಗಲೂ ಕಾಣುತ್ತಿದ್ದೇವೆ. ಭಾರತವೆಂಬ ವಿಸ್ಮಯ ಲೋಕದ ಒಂದು ಪುಟ್ಟ ಬೀಗದ ಕೀಲಿಕೈ ಅವರ ಬಳಿಯಿತ್ತು. ಅದನ್ನು ತೆರೆಯಲು ಅವರು ನಿರಂತರವಾಗಿ ಪ್ರಯತ್ನಿಸಿದ್ದರು. ಈಗ ಅದಕ್ಕೆ ನಾವು ಮತ್ತೆ ಬೀಗ ಹಾಕುವ ಪ್ರಯತ್ನ ಮಾಡಿದರೆ ಆಗುವ ನಷ್ಟ ಯಾರಿಗೆ ಎಂಬುದು ದೊಡ್ಡ ಪ್ರಶ್ನೆ. ಈ ಬಾಗಿಲುಗಳನ್ನು ನಾವು ತೆರೆಯಲು ಅನುವು ಮಾಡಿಕೊಟ್ಟರೆ ಎಷ್ಟೊಂದು ವಿಸ್ಮಯಲೋಕಗಳನ್ನು ನಾವು ಕಾಣಬಹುದು !

❑ *ಡಾ. ವೆಂಕಟಾಚಲ ಹೆಗಡೆ*



ನವೆಂಬರ್ 1 ರಂದು ದೆಹಲಿ ಕರ್ನಾಟಕ ಸಂಘದಲ್ಲಿ ರಾಜ್ಯೋತ್ಸವದ ಅಂಗವಾಗಿ ಧ್ವಜಾರೋಹಣ


**ದೆಹಲಿ ಕರ್ನಾಟಕ ಸಂಘ**

**ದಿ. ಯು. ಪ್ರಭಾಕರ ರಾವ್ ಸ್ಮರಣಾರ್ಥ ಏಕಾಂಕ ನಾಟಕ ಸ್ಪರ್ಧೆ**

**ನವೆಂಬರ್ 13**

ಸಂಜೆ : 5.00ಗಂಟೆಗೆ ನಾಟಕ : **ಯುಗಾಂತರ ಸತ್ಯ**

**ನಿರ್ದೇಶನ :** ಎಂ.ವಿ. ವೆಂಕಟೇಶ್

ಪ್ರಸ್ತುತಪಡಿಸುವವರು : **ಜನಕಪುರಿ ಕನ್ನಡ ಕೂಟ(ರಿ)**

ಸಂಜೆ : 6.30ಕ್ಕೆ ನಾಟಕ–**ಮೆಸೇಜ್ ಬಂತು**

**ರಚನೆ ಮತ್ತು ನಿರ್ದೇಶನ:** ಬಾಲಕೃಷ್ಣ ನಾಯ್ಕ್ ಡಿ.

ಪ್ರಸ್ತುತಪಡಿಸುವವರು : **ಕೆಂಪುಕೋಟೆ ತಂಡ**

**ಸ್ಥಳ : ಸಂಘದ ಸಭಾಂಗಣ**

**ಎಲ್ಲರಿಗೂ ಆದರದ ಸ್ವಾಗತ**

**ಡಾ. ವೆಂಕಟಾಚಲ ಹೆಗಡೆ**
**ಅಧ್ಯಕ್ಷರು**

**ಸಿ.ಎಂ. ನಾಗರಾಜ**
**ಪ್ರಧಾನ ಕಾರ್ಯದರ್ಶಿ**

**ಮುನ್ನೋಟ**

*ಸಮಸ್ತ ಕನ್ನಡಿಗರಿಗೆ ರಾಜ್ಯೋತ್ಸವದ ಶುಭಾಶಯಗಳು,*

ದೀಪಾವಳಿಯ ಸಡಗರ-ಸಂಭ್ರಮದ ಸಂತೋಷ-ಉಲ್ಲಾಸದ ಜೊತೆಗೆ ಕರ್ನಾಟಕ ರಾಜ್ಯೋತ್ಸವದ ತಯಾರಿಯಲ್ಲಿ ಇರುವ ಹೊತ್ತಿಗೆ ದೆಹಲಿ ಕನ್ನಡಿಗರಿಗೆ ಹೆಮ್ಮೆಯ ಸುದ್ದಿಗಳು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಎರಡು ಅವಧಿಗೆ ಸೇವೆ ಸಲ್ಲಿಸಿ ಸಂಘದ ಕಟ್ಟಡ ನಿರ್ಮಾಣದ ರೂವಾರಿ, ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ ಲಭಿಸಿರುವುದು ನಮಗೆ ಹೆಮ್ಮೆ. ಇದು ಸಂಘಕ್ಕೆ ಸಂದ ಗೌರವ ಕೂಡಾ. ಅವರಿಗೆ ನಮ್ಮ ಅಭಿನಂದನೆಗಳು.

ಸಂಘದಲ್ಲಿ ನವೆಂಬರ್ ಒಂದರಂದು ಧ್ವಜಾರೋಹಣದ ಜೊತೆಗೆ ರಾಜ್ಯೋತ್ಸವ ಆಚರಣೆ ಆರಂಭಗೊಂಡು 5 ಮತ್ತು 6ರಂದು "ರಾಜಧಾನಿಯಲ್ಲಿ ವರಕವಿ ದ.ರಾ. ಬೇಂದ್ರೆ ನೆನಪು" ಕಾರ್ಯಕ್ರಮ ಯಶಸ್ವಿಯಾಗಿ ಜರುಗಿದೆ. ಹಲವು ಗಣ್ಯ ವಿದ್ವಾಂಸರು ಪಾಲ್ಗೊಳ್ಳುವ ಉಪನ್ಯಾಸದ ಜೊತೆಗೆ ಶ್ರೀ ಎಚ್. ಚಂದ್ರಶೇಖರ ಕೆದಿಲಾಯ ಮತ್ತು ರೂಪಶ್ರೀ-ಶಿಲ್ಪಶ್ರೀಯವರಿಂದ ಬೇಂದ್ರೆ ಗೀತೆಗಾಯನ ಕಾರ್ಯಕ್ರಮ ಮೆರಗು ತಂದಿತು.

13ರಂದು ಪ್ರಖ್ಯಾತ ರಂಗಕರ್ಮಿ, ಕನ್ನಡ ಭಾರತಿಯ ಬೆನ್ನೆಲುಬು ಶ್ರೀ ಯು. ಪ್ರಭಾಕರ ರಾವ್ ನೆನಪಿನಲ್ಲಿ ನಾಟಕೋತ್ಸವ ಆಯೋಜಿಸಲಾಗಿದ್ದು 'ಯುಗಾಂತರ ಸತ್ಯ' ಮತ್ತು 'ಮೆಸೇಜ್ ಬಂತು' ನಾಟಕಗಳು ಪ್ರದರ್ಶನಗೊಳ್ಳಲಿವೆ.

19 ಮತ್ತು 20ರಂದು ದೆಹಲಿಯ ಕನ್ನಡದ ಕಲಾವಿದರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ವಿವಿಧ ಪ್ರಕಾರಗಳ ನೃತ್ಯ, ನಾಡಗೀತೆ, ಜಾನಪದಗೀತೆ ಹಾಗೂ ಭಾವಗೀತೆಗಳ ತರಬೇತಿಯನ್ನು ಕರ್ನಾಟಕದ ಹೆಸರಾಂತ ಕಲಾವಿದರಿಂದ ತರಬೇತಿ ನೀಡಿ, ಪ್ರದರ್ಶಿಸುವ ಕಾರ್ಯಕ್ರಮವನ್ನು ಕರ್ನಾಟಕದ ಮಾಜಿ ನಾಟಕ ಅಕಾಡೆಮಿ ಅಧ್ಯಕ್ಷರಾದ ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ ಅವರ ಮಾರ್ಗದರ್ಶನದಲ್ಲಿ ನಡೆಯಲಿದೆ. ಈ ವರ್ಷ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ನಮ್ಮ ಹಿರಿಯ ಕನ್ನಡಿಗರಾದ ಶ್ರೀ ಎನ್.ಜೆ. ಕಾಮತ್, ಶ್ರೀ ಎಂ.ವೀರಪ್ಪ ಹಾಗೂ ಶ್ರೀಮತಿ ಸುಮಿತ್ರಾ ರಾವ್ ಅವರಿಗೆ ನೀಡಿ ಗೌರವಿಸಲಾಗುವುದು.

ಶ್ರೀ ಜಿ.ಎಂ. ಲಿಂಗರಾಜು ಅವರ ಅಧ್ಯಕ್ಷತೆಯಲ್ಲಿ ಡಿಸೆಂಬರ್ 11ರಂದು ಸುವರ್ಣ ಮಹೋತ್ಸವ ಆಚರಣೆಯ ಸಂಭ್ರಮದಲ್ಲಿರುವ ಕನ್ನಡ ವಿದ್ಯಾಸಂಸ್ಥೆ ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಕರ್ನಾಟಕ ಸರಕಾರ ಶಾಲೆಗೆ ಬಸ್ಸು ಖರೀದಿಗಾಗಿ ನೀಡಿದ ಅನುದಾನ 50 ಲಕ್ಷ ರೂಪಾಯಿಗಳನ್ನು ಸಂಸ್ಥೆಯ ಅಧ್ಯಕ್ಷ ಶ್ರೀ ಜಿ.ಎಂ.ಲಿಂಗರಾಜು, ಕಾರ್ಯದರ್ಶಿ ಶ್ರೀ ಆಂಜನಿ ಗೌಡ ಹಾಗೂ ಕಾರ್ಯಕಾರಿ ಸಮಿತಿಯವರು ಈ ಸಂದರ್ಭದಲ್ಲಿ ತಂದಿರುವುದು ದೆಹಲಿ ಕನ್ನಡಿಗರಿಗೆ ಇನ್ನೊಂದು ರಾಜ್ಯೋತ್ಸವದ ಕೊಡುಗೆಯಾಗಿದೆ. ಕಟ್ಟಡ ನಿರ್ಮಾಣಕ್ಕೆ ಬಿಡುಗಡೆಯಾಗಿರುವ ಒಂದು ಕೋಟಿ ರೂಪಾಯಿ ಆದಷ್ಟು ಬೇಗನೇ ಬರಲಿ ಎಂದು ನಮ್ಮ ಹಾರೈಕೆ.

❑ *ಸಿ.ಎಂ. ನಾಗರಾಜ*

# ಕು|| ಸಪ್ನಾ ಅತ್ತಾವರ್ ಭರತನಾಟ್ಯ ರಂಗಪ್ರವೇಶ

ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿರುವ ಶ್ರೀ ಅನಿಲ್ ಅತ್ತಾವರ್ ಹಾಗೂ ಶ್ರೀಮತಿ ಮೈಥಿಲಿ ಅತ್ತಾವರ್ ಅವರ ಮಗಳು ಸಪ್ನಾ ಅತ್ತಾವರ್ 'ಅರಂಗೇಟ್ರಂ' 23.10.2011 ರಂದು ದೆಹಲಿ ಕರ್ನಾಟಕ ಸಂಘದ ತುಂಬಿದ ಸಭಾಂಗಣದಲ್ಲಿ ನಡೆಯಿತು.

ತನ್ನ ಮೂರನೇ ವರ್ಷದಿಂದಲೇ ನೃತ್ಯದಲ್ಲಿ ಆಸಕ್ತಿ ತೋರಿದ್ದ ಸಪ್ನಾ ಹಂತ ಹಂತವಾಗಿ ಮೇಲೇರುತ್ತಾ ದ್ವಾರಕಾದಲ್ಲಿ 'ಸುನಯನ' ನೃತ್ಯ ಶಾಲೆಯ ಗುರು ಕನಕ ಸುಧಾಕರ ಅವರಲ್ಲಿ ಭರತನಾಟ್ಯ ಕಲಿತಳು. ಗುರು ಕನಕ ಸುಧಾಕರ ಅವರು ಪ್ರಖ್ಯಾತ ಕಲಾವಿದ ವಿ.ಪಿ. ಧನಂಜಯ ಹಾಗೂ ಶಾಂತಾ ಧನಂಜಯ ಅವರ ಶಿಷ್ಯೆ. ಹೀಗಾಗಿ ಭಾವಾಭಿವ್ಯಕ್ತಿಯಲ್ಲಿ ಶ್ರೀಮತಿ ಕನಕ ಸುಧಾಕರ ಅವರಿಗೆ ವಿಶಿಷ್ಟ ಸಾಧನೆ ಮಾಡಲು ಸಾಧ್ಯವಾಗಿದೆ.

ಗುರು ಕನಕ ಸುಧಾಕರ ಅವರ ಮಾರ್ಗದರ್ಶನದಲ್ಲಿ ಶಾಸ್ತ್ರೋಕ್ತವಾಗಿ ಭರತನಾಟ್ಯ ಕಲಿಯಲಾರಂಭಿಸಿದ ಸಪ್ನಾಳು ಗಣೇಶ ಕೌತುಕಂ, ಪುಷ್ಪಾಂಜಲಿ, ಜತಿಸ್ವರಂ, ಅಲರಿಪು, ಶಬ್ದ, ವರ್ಣಂ, ಪದಂ, ಕೀರ್ತನ ಹಾಗೂ ತಿಲ್ಲಾನಗಳಲ್ಲಿ ಬಹುಬೇಗ ಹಿಡಿತ ಸಾಧಿಸಿದಳು. ಭರತನಾಟ್ಯದ ಮೇಲೆ ಅವಳಿಗಿದ್ದ ಅಪಾರ ಮಮತೆ ಮತ್ತು ಅನಿಲ್-ಮೈಥಿಲಿ ಅವರ ಪ್ರೋತ್ಸಾಹಗಳಿಂದ ಸಪ್ನಾಳಿಗೆ ಬಹುಬೇಗ ಈ ಕಲೆ ಬಗ್ಗಿಕೊಂಡಿತು.

ಅರಂಗ್ರೇಟಂನಲ್ಲಿ ಸಪ್ನಾ ಮೊದಲು ಪ್ರದರ್ಶಿಸಿದ್ದು 'ನಾಟ್ಯಾಂಜಲಿ'ಯ ಗುರು ವಿ.ಪಿ. ಧನಂಜಯ ಹಾಗೂ ಶಾಂತಾ ಧನಂಜಯರಿಂದ ಬಳುವಳಿಯಾಗಿ ಬಂದ ವಿಶಿಷ್ಟ ಹಸ್ತ ಮುದ್ರೆಗಳನ್ನು ಸಪ್ನಾ ಲೀಲಾಜಾಲವಾಗಿ ಪ್ರದರ್ಶಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರಳಾದಳು. 'ಅಲರಿಪು'ವಿನಲ್ಲಿ ನರ್ತಕಿಯ ಇಡೀ ದೇಹವೇ ಮಾತಾಡಬೇಕು. ಅದನ್ನು ಮಾಡುವಲ್ಲಿ ಸಪ್ನಾ ಬಹುತೇಕ ಯಶಸ್ಸು ಕಂಡಳು. ಮಿಶ್ರ ಛಾಪುತಾಳದಲ್ಲಿ ರಾಗಮಾಲಿಕಕ್ಕೆ ದೇಹವನ್ನೂ ಬಗ್ಗಿಸುವ 'ಶಬ್ದಂ'ನಲ್ಲಿ ಮುದ್ರೆಗಳು ಮತ್ತು ಭಾವಗಳು ಒಂದರೊಡನೊಂದು ಬೆಸೆದು ಉದ್ದೇಶಿತ ಪರಿಣಾಮ ಬೀರಬೇಕು. ಸಪ್ನಾ ಮುದ್ರೆಗಳನ್ನು ನಾಜೂಕಾಗಿ ಅಭಿವ್ಯಕ್ತಿಸಿದಳು. ಭಾವಾಭಿವ್ಯಕ್ತಿಗೆ ತೀವ್ರವಾಗಿ ಪ್ರಯತ್ನ ನಡೆಸಿದ್ದು ನಿಜ. 'ವರ್ಣಂ' ಇನ್ನೂ ಕಷ್ಟ. ಇದರಲ್ಲಿ ಪ್ರಖ್ಯಾತ ರಸ ಮೀಮಾಂಸಕ ಆನಂದವರ್ಧನ ಹೇಳಿದ ಹಾಗೆ 'ವಿಭಾವ ಮತ್ತು ಅನುಭಾವಗಳು ಜೊತೆ ಸೇರಿ ರಸ ನಿಷ್ಪತ್ತಿಯನ್ನು ಉಂಟು ಮಾಡಬೇಕು. ಸಪ್ನಾ ಇದರಲ್ಲಿ ಆಂಶಿಕ ಯಶಸ್ಸು ಸಾಧಿಸಿದಳು.


ಸಾಮಾನ್ಯವಾಗಿ ಉತ್ತರ ಭಾರತದಲ್ಲಿ ಭರತನಾಟ್ಯ ಪ್ರದರ್ಶಿಸುವವರು ಜಯದೇವನ 'ಅಷ್ಟ ಪದಿ'ಯನ್ನು ಆಯ್ದುಕೊಳ್ಳುತ್ತಾರೆ. ಕೃಷ್ಣ-ರಾಧೆಯರ ಪ್ರಣಯವನ್ನು ಕಾಲಾತೀತಗೊಳಿಸುವ ಗೀತಗೋವಿಂದವನ್ನು ರಂಗದಲ್ಲಿ ಪ್ರದರ್ಶಿಸಲು ವಿಶೇಷ ಪರಿಣತಿ ಬೇಕು. ಲೌಕಿಕ ಪ್ರಣಯವನ್ನು ಅಮೂರ್ತ ಆಧ್ಯಾತ್ಮದ ಕಡೆಗೆ ಕೊಂಡೊಯ್ಯಬಲ್ಲ ಸಾಮರ್ಥ್ಯ ಕಲಾವಿದರಿರಬೇಕು. ಆದಿತಾಳ / ದರ್ಬಾರಿ ಕಾನಡಾದಂಥ ಘನ ಸಂಗೀತ ಸಂಯೋಜನೆಯಲ್ಲಿ ಸಪ್ನಾ ಪ್ರಯತ್ನಪಟ್ಟು ಭಾವಾಭಿವ್ಯಕ್ತಿಗೆ ಹೆಣಗಿದಳು. ಬಹುಶಃ ಈ ಭಾಗಕ್ಕೆ ಪುರಂದರದಾಸರ 'ಕೃಷ್ಣಾ ನೀ ಬೇಗನೇ ಬಾರೋ' ಭಾಗವನ್ನು ಆಯ್ದುಕೊಂಡಿದ್ದರೆ ಸಪ್ನಾ ಹೆಚ್ಚು ಲವಲವಿಕೆಯಿಂದ ನರ್ತಿಸುತ್ತಿದ್ದಳೋ ಏನೋ? ಪುರಂದರದಾಸರ 'ಭಾಗ್ಯದ ಲಕ್ಷ್ಮೀ ಬಾರಮ್ಮ' ಸೊಗಸಾಗಿದ್ದರೆ, 'ತಿಲ್ಲಾನ' ಎಲ್ಲರ ಗಮನ ಸೆಳೆಯಿತು.

ಈಗಾಗಲೇ ದೆಹಲಿ, ಪೂನಾ, ಮೊದಲಾದೆಡೆಗಳಲ್ಲಿ ನೃತ್ಯ ಪ್ರದರ್ಶನ ನೀಡಿ, ಹಲವಾರು ಪ್ರಶಸ್ತಿ, ಬಹುಮಾನಗಳನ್ನು ಗಳಿಸಿರುವ ಸಪ್ನಾ ನೃತ್ಯ ಕ್ಷೇತ್ರದಲ್ಲಿ ಪರಿಣತಿ ಸಾಧಿಸುವತ್ತ ದಾಪುಗಾಲಿಡುತ್ತಾ ಸಾಗಿದ್ದಾಳೆ. ಅವಳ ಕಲಾ ಪಯಣದಲ್ಲಿ ಯಶಸ್ಸು ದೊರೆಯಲಿ, ಅಪಾರ ಕೀರ್ತಿ ಗಳಿಸಲಿ ಎಂದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶುಭ ಹಾರೈಸುತ್ತೇವೆ.

❑ ಡಾ. ಪುರುಷೋತ್ತಮ ಬಿಳಿಮಲೆ



# ಡಿಜಿಟಲೀಕರಣವಾಗದಿದ್ದರೆ ಕನ್ನಡಕ್ಕೆ ಸಾವು : ಕಂಬಾರ



ಈಗಿನ ಮಕ್ಕಳಿಗೆ ಕ್ರೌ ಬಗ್ಗೆ ಗೊತ್ತು. ಆದರೆ, ಕಾಗೆ ಬಗ್ಗೆ ಗೊತ್ತಿಲ್ಲ, ಅಂಕಲ್, ಆಂಟಿ ಬಗ್ಗೆ ಹೇಳುತ್ತಾರೆ. ಆದರೆ ಮಾನವ ಸಹಜ. ಅತ್ತೆ, ಮಾವ, ಚಿಕ್ಕಪ್ಪ, ಚಿಕ್ಕಮ್ಮ, ದೊಡ್ಡಮ್ಮ ಸಂಬಂಧಗಳ ಬಗ್ಗೆ ತಿಳಿದಿಲ್ಲ.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರರ ಈ ಎರಡೇ ಮಾತುಗಳು ರಾಜ್ಯದಲ್ಲಿ ಕನ್ನಡ ಮತ್ತು ಕನ್ನಡಿಗರ ಸ್ಥಿತಿಗತಿ ಬಗ್ಗೆ ಸಂಪೂರ್ಣ ವಿವರ ನೀಡುತ್ತದೆ.

ಹಾಗೆಂದು ಕನ್ನಡದ ಸ್ಥಿತಿಗತಿ ಸರಿ ಇಲ್ಲ ಎಂದು ಅವರು ಹೇಳುವುದಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಕನ್ನಡ ಸಂಕಷ್ಟದಲ್ಲಿದೆ ಎಂಬುದಷ್ಟೇ ಅವರ ಆತಂಕ.

ಕನ್ನಡ ಭಾಷೆಯ ಬೆಳವಣಿಗೆ, ಹಿರಿತನದ ಬಗ್ಗೆ ಕಂಬಾರರು ಹೇಳುವುದು ಹೀಗೆ ಯಾರೇ ಇರಲಿ ಇಂಗ್ಲಿಷ್‌ಗೆ ಜೋತು ಬೀಳಬೇಡಿ. ಏಕೆಂದರೆ ಅದೊಂದು ವ್ಯವಹಾರದ ಭಾಷೆ. ಇಲ್ಲಿ ಮಾನವ ಸಂಬಂಧಗಳು ಅರ್ಥವಾಗುವುದಿಲ್ಲ. ಅನುಭವ ಸೃಷ್ಟಿಯಾಗುವುದಿಲ್ಲ. ಆದರೆ, ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ಇತರ ಭಾಷೆಯಂತೆ ಕನ್ನಡ ಭಾಷಿಕರ ಸೃಜನಶೀಲತೆಯನ್ನು ಕಸಿದುಕೊಂಡರು. ಹೀಗಾಗಿ ಅವರು ದೇಶ ಬಿಟ್ಟು ತೆರಳಿದ ಮೇಲೆ ನಮ್ಮಲ್ಲಿ ಇಂಗ್ಲಿಷ್ ವ್ಯಾಮೋಹ ಹೆಚ್ಚಾಯಿತು. ಅದು ಬೆಂಗಳೂರಿನ ಪೋಷಕರು ಅಮೆರಿಕಾದ ಪ್ರಜೆಯಾಗುವವರನ್ನು ಹೆರಬೇಕು ಎನ್ನುವಷ್ಟರಮಟ್ಟಿಗೆ ಬೆಳೆಯಿತು. ಇಂತಹ ಪರಿಸ್ಥಿತಿಯಿಂದಾಗಿ ಕನ್ನಡ ಭಾಷೆ ನಾಶವಾಗುವ ಆತಂಕವಿದೆ.

### ಮಾತೃಭಾಷೆಯಿಂದ ಅನುಭವ

ಶಿಕ್ಷಣ ಎಷ್ಟು ಅಗತ್ಯವೋ ಅನುಭವವೂ ಅಷ್ಟೇ ಮುಖ್ಯ. ಈ ರೀತಿಯ ಅನುಭವದ ಅರಿವಾಗಬೇಕಾದರೆ ಅದು ಮಾತೃಭಾಷೆಯಿಂದ ಮಾತ್ರ ಸಾಧ್ಯ. ಅದಕ್ಕಾಗಿ ಕನ್ನಡವನ್ನು ಬೆಳೆಸುವ ಅಗತ್ಯವಿದೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ವಿಚಾರದಲ್ಲಿ ಅಸಮಾನತೆ ಇದೆ. ಇದನ್ನು ಹೋಗಲಾಡಿಸಬೇಕು. ಹೀಗಾಗಿ ಒಂದೇ ರೀತಿಯ ಶಿಕ್ಷಣ ಜಾರಿಯಾಗಬೇಕು. ಶ್ರೀಮಂತರು ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಹೋಗಿ ಸೊಕ್ಕು ಬೆಳೆಸಿಕೊಳ್ಳುತ್ತಾರೆ. ಬಡವರ ಮಕ್ಕಳು ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕೀಳರಿಮೆ ಬೆಳೆಸಿಕೊಳ್ಳುತ್ತಿದ್ದಾರೆ. ಒಂದೇ ನಾಡಿನಲ್ಲಿ ಎರಡು ರೀತಿಯ ನಾಗರಿಕರನ್ನು ಬೆಳೆಸುತ್ತಿದ್ದೇವೆ.

ಇಂತಹ ಪರಿಸ್ಥಿತಿಗೆ ಕಡಿವಾಣ ಹಾಕಲು ಒಂದರಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲೇ ಶಿಕ್ಷಣ ನೀಡುವ ವ್ಯವಸ್ಥೆ ಆಗಬೇಕು. ಖಾಸಗಿ ಸಂಸ್ಥೆಗಳ ಇಂಗ್ಲಿಷ್ ಶಿಕ್ಷಣಕ್ಕೆ ಕಡಿವಾಣ ಹಾಕಿ 10ನೆ ತರಗತಿವರೆಗಿನ ಶಿಕ್ಷಣವನ್ನು ಸರ್ಕಾರವೇ ನೀಡುವಂತಾಗಬೇಕು. ಇದಕ್ಕಾಗಿ ಸಮಗ್ರ ಶಿಕ್ಷಣ ನೀತಿ ಜಾರಿಯಾಗಬೇಕು.

### ಗಟ್ಟಿತನ ಅಭಿವ್ಯಕ್ತಗೊಳ್ಳಬೇಕು

ಕನ್ನಡ ಭಾಷೆಯಲ್ಲಿ ಗಟ್ಟಿತನವಿದೆ. ಆದರೆ, ಇಂಗ್ಲಿಷ್‌ನವರು ನಮ್ಮ ಸೃಜನಶೀಲತೆಯನ್ನು ಕಸಿದುಕೊಂಡಿರುವುದರಿಂದ ಈ ಗಟ್ಟಿತನವನ್ನು ಅಭಿವ್ಯಕ್ತಿಗೊಳಿಸಲು ಕನ್ನಡಿಗರು ಮುಂದಾಗುತ್ತಿಲ್ಲ. ಇದರಿಂದಾಗಿ ಸಾಹಿತ್ಯದಲ್ಲಿ ಬಿಗಿ, ಛಂದಸ್ಸು, ಪ್ರಾಸ, ವ್ಯಾಕರಣಗಳನ್ನು ಕಳೆದುಕೊಳ್ಳುವಂತಾಗಿದೆ. ಇದರಿಂದ ಅಚ್ಚ ಕನ್ನಡ ನಾಶವಾಗುವ ಪರಿಸ್ಥಿತಿ ಬರಬಹುದು.

### ಕನ್ನಡ ಅನ್ನದ ಭಾಷೆಯಾಗುತ್ತಿಲ್ಲ

ಭಾಷೆಗಿಂತ ವಿದ್ಯೆ ಮುಖ್ಯ. ಹಾಗಾಗಿ ವಿದ್ಯೆ ಎಂಬುದು ಕನ್ನಡದಲ್ಲಿರಬೇಕು. ಭಾಷೆ ಕಲಿಯಲು ಸಾಕಷ್ಟು ಮಾರ್ಗಗಳಿವೆ. ಕನ್ನಡದ ಮೂಲಕವೇ ಇಂಗ್ಲಿಷ್ ಕಲಿಯಬಹುದು. ಆದರೆ, ವಿದ್ಯೆಯ ಮೂಲಕ ಅನುಭವವನ್ನೂ ಕಲಿತರೆ ಅದು ಅನ್ನದ ಭಾಷೆಯಾಗುತ್ತದೆ. ಆದರೆ, ಕರ್ನಾಟಕದಲ್ಲಿ ಈಗ ಅಂಥ ಪರಿಸ್ಥಿತಿ ಇಲ್ಲ. ಅದ್ದರಿಂದ ಕನ್ನಡವನ್ನು ಅನ್ನದ ಭಾಷೆಯನ್ನಾಗಿ ಪರಿವರ್ತಿಸುವ ಕೆಲಸವಾಗಬೇಕು.

### ಕನ್ನಡ ಡಿಜಿಟಲೀಕರಣವಾಗಬೇಕು

ಕನ್ನಡ ಭಾಷೆಯನ್ನು ಡಿಜಿಟಲ್ ತಂತ್ರಜ್ಞಾನಕ್ಕೆ ಅಳವಡಿಸುವ ಅಗತ್ಯವಿದೆ. ಈ ಬಗ್ಗೆ ಪೂರ್ಣಚಂದ್ರ ತೇಜಸ್ವಿಅವರು ಸಾಕಷ್ಟು ಕೆಲಸ ಮಾಡಿದರು. ನಾನೂ ಅವರೊಂದಿಗೆ ಪ್ರಯತ್ನ ಮಾಡಿದೆ. ಆದರೆ, ಕೆಲಸ ಪೂರ್ಣಗೊಳಿಸುವಲ್ಲಿ ಸೋತುಹೋದೆ. ಪ್ರಸ್ತುತ ದಿನಗಳಲ್ಲಿ ತಂತ್ರಜ್ಞಾನ ಪ್ರಗತಿಯಾಗುತ್ತಿರುವುದರಿಂದ ಕನ್ನಡ ಉಳಿಯಬೇಕಾದರೆ ಅದನ್ನು ಡಿಜಿಟಲ್ ತಂತ್ರಜ್ಞಾನಕ್ಕೆ ಅಳವಡಿಸಲೇ ಬೇಕಾದ ಅಗತ್ಯವಿದೆ. ಇಲ್ಲದೇ ಇದ್ದರೆ ಕನ್ನಡ ಸಾಯುತ್ತದೆ.

### ಕನ್ನಡ ಉಳಿಸಲು ಕನ್ನಡ ಕಲಿಯಬೇಕಿಲ್ಲ

ಕನ್ನಡ ಭಾಷೆಯನ್ನು ಉಳಿಸಲು ಕನ್ನಡ ಕಲಿಯಿರಿ ಎಂದು ಹೇಳುವುದಿಲ್ಲ. ಅನುಭವದ ಮೂಲಕ ಎಲ್ಲವನ್ನೂ ತಿಳಿದುಕೊಳ್ಳಲು ಕನ್ನಡ ಕಲಿಯಬೇಕಾಗಿದೆ. ಏಕೆಂದರೆ ಕರ್ನಾಟಕದಲ್ಲಿ ತಿಳಿವಳಿಕೆ ಬರಬೇಕಾದರೆ ಕನ್ನಡ ಕಲಿಯಲೇ ಬೇಕು. ಅದಕ್ಕಾಗಿಯಾದರೂ ಕನ್ನಡ ಕಲಿಯಬೇಕು. ಇದರಿಂದ ಭಾಷೆ ಉಳಿಯುವುದರ ಜತೆಗೆ ಅದಕ್ಕೆ ಶಕ್ತಿಯೂ ಬರುತ್ತದೆ.

❑ ಕೃಪೆ : ಕನ್ನಡ ಪ್ರಭ

# ಡಾ.ಜಿ.ಎ.ಬಿರಾದಾರ ಅವರಿಗೆ ಕರ್ನಾಟಕದ "ಜಯಶ್ರೀ ಪ್ರಶಸ್ತಿ"

ಕೇಂದ್ರ ಸಂಸ್ಕೃತಿ ಮಂತ್ರಾಲಯದ ಭಾರತ ರಾಷ್ಟ್ರೀಯ ಪತ್ರಾಗಾರ, ನವದೆಹಲಿಯಲ್ಲಿ ಪತ್ರಾಗಾರ ಅಧಿಕಾರಿಗಳಾಗಿರುವ ಡಾ.ಜಿ.ಎ.ಬಿರಾದಾರರ 'Mahatma Gandhi's Campaign against Untouchability in Karnataka' ಎಂಬ ಸಂಶೋಧನಾ ಗ್ರಂಥಕ್ಕೆ 'ಜಯಶ್ರೀ ಪ್ರಶಸ್ತಿ' ಲಭಿಸಿದೆ. ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಬೆಂಗಳೂರು ಮಹಾತ್ಮ ಗಾಂಧಿ, ವಿನೋಬ ಮತ್ತು ರಾಷ್ಟ್ರೀಯ ಮಹತ್ವ ಕುರಿತ ಕೃತಿಗಳಿಗೆ ಜಯಶ್ರೀ ಪ್ರಶಸ್ತಿ ನೀಡಿ ಗೌರವಿಸುತ್ತದೆ. ಬೆಂಗಳೂರಿನ ಗಾಂಧಿ ಭವನದಲ್ಲಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಸುವರ್ಣ ಮಹೋತ್ಸವ ಹಾಗೂ ಅಕ್ಟೋಬರ್ 2ರಂದು ಗಾಂಧೀ ಜಯಂತಿಯ ಆಚರಣೆಯ ದಿನದಂದು ಕರ್ನಾಟಕದ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಡಿ.ವಿ. ಸದಾನಂದ ಗೌಡರು ಹೆಸರಾಂತ ಯುವ ಇತಿಹಾಸಕಾರ ಡಾ.ಜಿ.ಎ.ಬಿರಾದಾರ ಅವರಿಗೆ ಜಯಶ್ರೀ ಪ್ರಶಸ್ತಿ ನೀಡಿ ಗೌರವಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ವಹಿಸಿದ್ದರು.

ಬಿಜಾಪುರ ಜಿಲ್ಲೆಯ ಗೋಲಗೇರಿ ಗ್ರಾಮದಲ್ಲಿ 1.1.1969ರಂದು ಜನಿಸಿದ ಡಾ.ಜಿ.ಎ.ಬಿರಾದಾರ ಅವರು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲಿ ಮುಗಿಸಿ ಜಿ.ಪಿ.ಪೋರ್‌ವಾಲ್ ಮಹಾ ವಿದ್ಯಾಲಯ ಸಿಂದಗಿಯಲ್ಲಿ ಬಿ.ಎ. ಪದವಿಯನ್ನು ಪಡೆದರು. 1992ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಇತಿಹಾಸ ವಿಷಯದಲ್ಲಿ ಎಂ.ಎ ಪದವಿ ಪಡೆದು 'Freedom Movement in Bijapur District' ಎಂಬ ವಿಷಯದ ಮೇಲೆ ಸಂಶೋಧನೆ ಮಾಡಿ ಡಾಕ್ಟರೇಟ್ ಪದವಿ ಪಡೆದರು. ಭಾರತ ರಾಷ್ಟ್ರೀಯ ಪತ್ರಾಗಾರದಲ್ಲಿ ನೇಮಕಾತಿ ಪಡೆಯುವ ಮೊದಲು ಗುಲ್ಬರ್ಗಾ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಹಾಗೂ ಎಸ್.ವಿ.ಪದವಿ ಮಹಾವಿದ್ಯಾಲಯದಲ್ಲಿ ಅರೆಕಾಲಿಕ ಇತಿಹಾಸ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವರು.



ಡಾ.ಜಿ.ಎ.ಬಿರಾದಾರ ಅವರ ಸಂಶೋದನ ಗ್ರಂಥಗಳೆಂದರೆ ಕರ್ನಾಟಕದ ಸರ್ದಾರ ಪಟೇಲ್ ಚನ್ನಬಸಪ್ಪ ಅಂಬಲಿ, ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳವಳಿ ಮತ್ತು ಕರ್ನಾಟಕ ಭೂಷಣ ಶ್ರೀನಿವಾಸರಾವ ಕೌಜಲಗಿ. ಇವರ ಸಂಶೋಧನ ಕಾರ್ಯಕ್ಷೇತ್ರ ಭಾರತದ ಸ್ವಾತಂತ್ರ್ಯ ಸಂಗ್ರಾಮ ಮತ್ತು ಮಹಾತ್ಮ ಗಾಂಧೀ. ಡಾ.ಬಿರಾದಾರರು ಕನ್ನಡ ಮತ್ತು ಇಂಗ್ಲೀಷನಲ್ಲಿ ಸುಮಾರು 20 ಸಂಶೋಧನಾ ಲೇಖನಗಳನ್ನು ಬರೆದಿರುವರು.

ಜಯಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಜಿ.ಎ. ಬಿರಾದಾರ ಅವರಿಗೆ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.

❑ *ಸಂತೋಷ್ ಕುಮಾರ್ ಉಪಾಧ್ಯಾಯ*

# ದೆಹಲಿ ಕರ್ನಾಟಕ ಸಂಘ

ಹಾಗೂ

ವಾರ್ತಾ ಇಲಾಖೆ–ಕರ್ನಾಟಕ ಸರ್ಕಾರ, ಬೆಂಗಳೂರು

ಸಹಯೋಗದಲ್ಲಿ

## ಕರ್ನಾಟಕ ರಾಜ್ಯೋತ್ಸವ ಸಮಾರಂಭ

ನವೆಂಬರ್ 19 ಮತ್ತು 20, 2011

**ಸ್ಥಳ : ಸಂಘದ ಸಭಾಂಗಣ**

**ನವೆಂಬರ್ 19 ಶನಿವಾರ**

**ಸಮಯ : ಸಂಜೆ 4.00ಗಂಟೆಗೆ**

ಉದ್ಘಾಟನೆ

**ಸನ್ಮಾನ್ಯ ಶ್ರೀ ಮುಖ್ಯ ಮಂತ್ರಿ ಚಂದ್ರು**

ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

## ದೆಹಲಿ ಕನ್ನಡಿಗರಿಂದ ರಾಷ್ಟ್ರಕ್ಕೆ ಅರ್ಪಣೆ

# “ಕನ್ನಡವೇ ಶ್ರೇಷ್ಠ”

**ಸುಗಮ ಸಂಗೀತ, ಜಾನಪದ ಸಂಗೀತ, ರಂಗಗೀತೆ, ಜಾನಪದ ನೃತ್ಯ, ಸಮೂಹ ನೃತ್ಯ, ಹಾಗೂ ಯಕ್ಷಗಾನಗಳ ಅಭೂತಪೂರ್ವ ಸಾಂಸ್ಕೃತಿಕ ಕಾರ್ಯಕ್ರಮಗಳ ಗುಚ್ಛ ನಿಮಗಾಗಿ**

**ಕರ್ನಾಟಕದ ಖ್ಯಾತ ಕಲಾವಿದರುಗಳಿಂದ ತರಬೇತಿ ಪಡೆದ ದೆಹಲಿ ಕಲಾವಿದರಿಂದ ವಿಶೇಷ ಕಾರ್ಯಕ್ರಮ**

**ನವೆಂಬರ್ 20 ಭಾನುವಾರ**

**ಸಮಯ : ಸಂಜೆ 4.00ಗಂಟೆಗೆ**

ದೆಹಲಿಯ ಹಿರಿಯ ಕನ್ನಡಿಗರಾದ

ಶ್ರೀ ಎನ್.ಜೆ. ಕಾಮತ್, ಶ್ರೀ ಎಂ. ವೀರಪ್ಪ ಮತ್ತು ಶ್ರೀಮತಿ ಸುಮಿತ್ರಾ ರಾವ್ ಅವರಿಗೆ

## ವಿಶಿಷ್ಠ ಕನ್ನಡಿಗ ಪ್ರಶಸ್ತಿ

ಹಾಗೂ

## ವಿದ್ಯಾರ್ಥಿ ವೇತನ ವಿತರಣೆ

ಮುಖ್ಯ ಅತಿಥಿಗಳು

**ಸನ್ಮಾನ್ಯ ಶ್ರೀ ಸುರೇಶ್ ಕುಮಾರ್**

ಮಾನ್ಯ ಸಚಿವರು, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಕರ್ನಾಟಕ ಸರ್ಕಾರ

**ಸಾಂಸ್ಕೃತಿಕ ಕಾರ್ಯಕ್ರಮಗಳು**

**ಹಾಸ್ಯ ಸಂಜೆ**

ಜನಪ್ರಿಯ ಹಾಸ್ಯ ಕಲಾವಿದರುಗಳಾದ

ಶ್ರೀ ಕೃಷ್ಣೇಗೌಡ, ಕೋಗಳಿ ಕೊಟ್ರೇಶ್ ಮತ್ತು ಇಂದುಶ್ರೀ ಅವರಿಂದ

**ಸುಗಮ ಸಂಗೀತ**

ಶ್ರೀ ವೈ.ಕೆ. ಮುದ್ದುಕೃಷ್ಣ ತಂಡದವರಿಂದ

## ಬನ್ನಿ, ಸಂಭ್ರಮಿಸೋಣ

ಡಾ. ವೆಂಕಟಾಚಲ ಹೆಗಡೆ
ಅಧ್ಯಕ್ಷರು

ಸಿ.ಎಂ. ನಾಗರಾಜ
ಪ್ರಧಾನ ಕಾರ್ಯದರ್ಶಿ

**ವಿ.ಸೂ : ಚಳಿಗಾಲದ ಪ್ರಯುಕ್ತ ಸರಿಯಾಗಿ 4.00 ಗಂಟೆಗೆ ಕಾರ್ಯಕ್ರಮ ಪ್ರಾರಂಭವಾಗಲಿದೆ, ತಡವಾಗಿ ಬಂದು ನಿರಾಶರಾಗಬೇಡಿ**

# ದೆಹಲಿ ಕನ್ನಡಿಗ, ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕಾರ



2011ರ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಈ ಬಾರಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 50 ಗಣ್ಯರಿಗೆ ನೀಡಲಾಗಿದೆ. ಹೊರನಾಡ ಕನ್ನಡಿಗರ ವಿಭಾಗದಲ್ಲಿ ದೆಹಲಿ ಕನ್ನಡಿಗ, ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.

1955 ಆಗಸ್ಟ್ 21ರಂದು ಜನಿಸಿದ ಡಾ. ಬಿಳಿಮಲೆ ಮದರಾಸು ವಿ.ವಿ.ಯಲ್ಲಿ ಎಂ.ಎ. ಪದವಿಯನ್ನು ಪ್ರಥಮ ರ್‍ಯಾಂಕಿನೊಂದಿಗೆ ಪಡೆದರು. ಜಾನಪದದ ಕುರಿತ ಅವರ ಮಹಾಪ್ರಬಂಧಕ್ಕೆ ಮಂಗಳೂರು ವಿ.ವಿ. 1985ರಲ್ಲಿ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತು. ಅದ್ಭುತ ಪ್ರತಿಭೆ ಡಾ. ಪುರುಷೋತ್ತಮ ಬಿಳಿಮಲೆ ಮೂಲತಃ ಸುಳ್ಯ ತಾಲೂಕಿನ ಪಂಜದವರು. ತುಳು, ಕನ್ನಡ, ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳಲ್ಲಿ ಪ್ರಬುದ್ಧ ಚಿಂತಕರಾಗಿರುವ ಡಾ. ಪುರುಷೋತ್ತಮ ಬಿಳಿಮಲೆ ಕನ್ನಡ ಸಾಹಿತ್ಯ, ಜಾನಪದ ಸಂಶೋಧನೆ, ಸಾಂಸ್ಕೃತಿಕ ಅಧ್ಯಯನ ಮತ್ತು ಯಕ್ಷಗಾನ ಕ್ಷೇತ್ರದಲ್ಲಿ ಅಮೋಘ ಸಾಧನೆ ಮಾಡಿದವರು. ಸುಳ್ಯ ನೆಹರೂ ಸ್ಮಾರಕ ಕಾಲೇಜು ಮತ್ತು ಮಂಗಳೂರು ವಿ.ವಿ.ಯಲ್ಲಿ ಉಪನ್ಯಾಸಕರಾಗಿ, ಹಂಪಿ ವಿ.ವಿ.ಯಲ್ಲಿ ಪ್ರಾಧ್ಯಾಪಕರಾಗಿ, ನವದೆಹಲಿಯ ಅಮೆರಿಕನ್ ಇನ್‌ಸ್ಟಿಟ್ಯೂಟ್ ಆಫ್ ಸ್ಟಡೀಸ್‌ನಲ್ಲಿ ಸಹ ನಿರ್ದೇಶಕರಾಗಿ, ಜಂಟಿ ನಿರ್ದೇಶಕರಾಗಿ ಸೇವೆ ಸಲ್ಲಿಸಿ ಪ್ರಸ್ತುತ ಅದರ ನಿರ್ದೇಶಕರಾಗಿದ್ದಾರೆ. ಹಂಪಿ ವಿ.ವಿ.ಯ ಲಲಿತಕಲಾ ವಿಭಾಗದ ಡೀನ್ ಆಗಿ ಹಂಪಿ ವಿ.ವಿ.ಯ ಸಿಂಡಿಕೇಟ್ ಸದಸ್ಯರಾಗಿ, ಅದರ ಕುಲಸಚಿವರಾಗಿ, ಅಕಾಡೆಮಿಕ್ ವಿಭಾಗದ ನಿರ್ದೇಶಕರಾಗಿ, ಜಾನಪದ ವಿಭಾಗದ ಮುಖ್ಯಸ್ಥರಾಗಿ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯರಾಗಿ, ರಾಜ್ಯ ಶಿಕ್ಷಣ ಅದಾಲತ್ ಸಮಿತಿ ಸದಸ್ಯರಾಗಿ ಕೂಡಾ ಡಾ। ಬಿಳಿಮಲೆ ಸೇವೆ ಸಲ್ಲಿಸಿದ್ದಾರೆ.

ಮೆಕೆಂಜಿಯ ಕೈಫಿಯತ್ತುಗಳು, ಲಿಂಗರಾಜನ ಹಕುಂನಾಮೆ, ಕಂಬುಲ, ದಲಿತ ಜಗತ್ತು, ಬಂಡಾಯ –ದಲಿತ ಸಾಹಿತ್ಯ, ಕರಾವಳಿ ಜಾನಪದ, ಶಿಷ್ಟ–ಪರಿಶಿಷ್ಟ, ಕೊರಗರು, ಜಾನಪದ ಕ್ಷೇತ್ರ ಕಾರ್ಯ, ಕೋಮುವಾದ ಮತ್ತು ಜನ ಸಂಸ್ಕೃತಿ, ಹಂಪಿ ಜಾನಪದ, ಕೂಡುಕಟ್ಟು, ಹುಲಗೆಮ್ಮ, ಕುಮಾರರಾಮ ಇವು ಡಾ. ಬಿಳಿಮಲೆ ಅವರ ಪ್ರಕಟಿತ ಕೃತಿಗಳು. ಕನ್ನಡ ಭಾಷಾ ಪಠ್ಯ ಪುಸ್ತಕಗಳು, ಲೋಹಿಯಾವಾದ – ಕೆಲವು ಟಿಪ್ಪಣಿಗಳು, ದೇವರು–ದೆವ್ವ–ವಿಜ್ಞಾನ, ಯಕ್ಷಗಾನ ಪ್ರಬಂಧಗಳು, ಅಕ್ಷರ ವಿಮೋಚನೆ, ವಿಚಾರ ಸಾಹಿತ್ಯ ಮತ್ತು ಸಿರಿ ಎಂಬ ಗ್ರಂಥಗಳನ್ನು ಡಾ. ಬಿಳಿಮಲೆ ಸಂಪಾದಿಸಿದ್ದಾರೆ. ಸಂಶೋಧನಾ ಕರ್ನಾಟಕ, ಹೊಸಪೇಟೆ ತಾಲೂಕು ದರ್ಶನ, ಕರ್ನಾಟಕದ ಜಾನಪದ ರೈತರು ಎಂಬ ಸಂಶೋಧನಾ ಪ್ರಬಂಧಗಳನ್ನು ಅವರು ಪ್ರಕಟಿಸಿದ್ದಾರೆ. ನಾಲ್ಕು ಸಂಶೋಧನಾ ಗ್ರಂಥಗಳನ್ನು ಸಂಪಾದಿಸಿದ್ದು, 27 ಸಂಶೋಧನಾ ಪ್ರಬಂಧಗಳನ್ನು ಸಿದ್ಧಪಡಿಸಿದ್ದಾರೆ. ಜನಪದ ಕತೆಗಳು, ಗ್ರಾಮ ದೇವತೆಗಳು, ಕರ್ನಾಟಕ ಬಯಲಾಟಗಳು, ಸಣ್ಣಾಟ ಮೊದಲಾದ ವಿಷಯುಗಳ ಬಗ್ಗೆ ಹಲವು ರಾಜ್ಯ ಮಟ್ಟದ ವಿಚಾರ ಸಂಕಿರಣಗಳನ್ನು ಅವರು ಸಂಘಟಿಸಿದ್ದಾರೆ. ಜಪಾನ್, ಟೋಕಿಯೋ, ಸೇರಿದಂತೆ ಅಂತರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ. ಯುವ ಸಂಶೋಧಕರಿಗೆ ಉತ್ತಮ ಮಾರ್ಗದರ್ಶನ ನೀಡಿ ಸಿದ್ಧಪಡಿಸಿದ ಪ್ರಬಂಧಗಳಲ್ಲಿ ಕರ್ನಾಟಕದ ಸಂಶೋಧನೆಗೆ ಹೊಸ ದೃಷ್ಟಿಕೋನವನ್ನು ತೋರಿಸಿಕೊಟ್ಟ ಡಾ. ಬಿಳಿಮಲೆ ಬಂಡಾಯ ಸಾಹಿತ್ಯದ ನೆಲೆಯಲ್ಲಿ ಜಾನಪದ ಅಧ್ಯಯನ ಮತ್ತು ಸಾಹಿತ್ಯ ವಿಮರ್ಶೆ ಕ್ಷೇತ್ರದಲ್ಲಿ ಖಚಿತ ಅಭಿಪ್ರಾಯದಿಂದ ಜನಪ್ರಿಯರಾದವರು.

ಮಲ್ಲಿಕಾರ್ಜುನ ಮನ್ಸೂರ್ ಪ್ರಶಸ್ತಿ, ಕು.ಶಿ. ಹರಿದಾಶ ಭಟ್ಟ ಪ್ರಶಸ್ತಿ, ಜಾನಪದ ಅಕಾಡೆಮಿ ಪ್ರಶಸ್ತಿ ಇನ್ನೂ ಮುಂತಾದ ಪ್ರಶಸ್ತಿ ಪಡೆದ ಬಿಳಿಮಲೆ ಅವರಿಗೆ ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ಬಂದಿರುವುದು ದೆಹಲಿ ಕನ್ನಡಿಗರಿಗೆ ಬಹಳ ಸಂತಸ ಹಾಗೂ ಹೆಮ್ಮೆಯ ಸಂಗತಿ. ನಮ್ಮೆಲ್ಲರ ನೆಚ್ಚಿನ, ಆತ್ಮೀಯರಾದ ಬಿಳಿಮಲೆ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿಮಾನ ಪೂರ್ವಕ ಅಭಿನಂದನೆಗಳು. ಅವರ ಸಾಹಿತ್ಯ ಕೃಷಿ ನಿರಂತರವಾಗಿ ಸಾಗಲಿ, ಯಶಸ್ಸು ಸಾಧಿಸಲಿ ಎಂಬುದು ನಮ್ಮೆಲ್ಲರ ಸದಾಶಯ.

# ಆತ್ಮೀಯ ಅಭಿನಂದನೆ

ಪುರುಷೋತ್ತಮ ಬಿಳಿಮಲೆ ನನಗೆ ದಶಕಗಳಿಂದ ಪರಿಚಿತರು. ಆದರೆ ಈ ಪರಿಚಯ ಆತ್ಮೀಯತೆಯತ್ತ ತಿರುಗಿದ್ದು ದೆಹಲಿಯಲ್ಲಿ, ಅದರಲ್ಲೂ ಕರ್ನಾಟಕ ಸಂಘವನ್ನು ಪ್ರಜಾಸತ್ತಾತ್ಮಕವಾಗಿ ಪುನರ್‌ರೂಪಿಸುವ ಪ್ರಕ್ರಿಯೆಯಲ್ಲಿ. ನನ್ನ ನಿರೀಕ್ಷೆಯಂತೆ ಬಿಳಿಮಲೆ ಸಂಘದ ಹೊಸ ಇತಿಹಾಸವನ್ನು ತಮ್ಮದೇ ಆದ ಪ್ರೀತಿ ತುಂಬಿದ ಶೈಲಿಯಲ್ಲಿ ನಿರ್ಮಿಸಿದರು, ನಿರೂಪಿಸಿದರು. ಬಿಳಿಮಲೆ ಅವರ ಶಕ್ತಿಯ ಕೇಂದ್ರ ಅವರೊಳಗೆ ಇರುವ ಅಪಾರ ತಾಳ್ಮೆ ಹಾಗೂ ಅಗಾಧ ಪ್ರೀತಿಯ ನೆಲೆಗಳು. ಎಂತಹ ಕ್ಲಿಷ್ಟಕರ ಸಂದರ್ಭವನ್ನೂ ನಿಭಾಯಿಸಬಲ್ಲ ಸಾಮರ್ಥ್ಯ ಇವರದ್ದು. ಯಾರ ಮನಸ್ಸನ್ನೂ ನೋಯಿಸಬಾರದೆಂಬ ಇವರ ಸಿದ್ಧಾಂತ ಇವರನ್ನು ಒಮ್ಮೊಮ್ಮೆ ದುಷ್ಟಕೂಟಗಳ ದುರ್ಬಳಕೆಗೆ ಈಡು ಮಾಡಿದ್ದೂ ಇದೆ. ಹೀಗಾಗಿ ನಾನು ಇವರ ಬಗ್ಗೆ ವರ್ಷಗಟ್ಟಲೆ ಮುನಿಸಿಕೊಂಡಿದ್ದೆ. ತಮಾಷೆ ಅಂದರೆ ಪ್ರತಿಯಾಗಿ ಬಿಳಿಮಲೆ ಮುನಿಸಿಕೊಳ್ಳಲೇ ಇಲ್ಲ! ಬದಲಿಗೆ ನನ್ನ ಸಿಟ್ಟು ಇಳಿಯುವ ತನಕ ತಾಳ್ಮೆಯಿಂದ ಕಾಯ್ದರು, ಬಹುಶಃ ಇನ್ನೂ ಕಾಯುತ್ತಿದ್ದಾರೆ!

ಬಿಳಿಮಲೆ ಬಗ್ಗೆ ನನಗೆ ಗೌರವ, ಪ್ರೀತಿ ಇರುವುದಕ್ಕೆ ಕಾರಣ–ಅವರ ವಿದ್ವತ್ತು. ಜಾನಪದ ಬದುಕು, ಸಾಹಿತ್ಯ, ಜೀವನ ಮೌಲ್ಯಗಳು ಹಾಗೂ ಮುಗ್ಧಜನ ಸಮೂಹದ ವಿಸ್ಮಯಗಳು ಇವರ ಮನಸ್ಸಿನಲ್ಲಿ ಪ್ರತಿಷ್ಠಾಪನಗೊಂಡಿವೆ. ಹೀಗಾಗಿ ಇವರು ಕನ್ನಡ ಸಾಹಿತ್ಯದ 'ಗೊಡ್ಡು ಪಂಡಿತ'ರಾಗಿ ಪರಿಣಮಿಸದೆ ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಬದುಕು, ಸಾಹಿತ್ಯ ಉದ್ದೀಪಿಸಿದ ಮೌಲ್ಯಗಳ ವಿವೇಚನೆ ಹಾಗೂ ವಿಶ್ಲೇಷಣೆ ನಡೆಸಲು ಸಾಧ್ಯವಾಯಿತು. ಬಹುಶಃ ಕ್ಷುಲ್ಲಕ ರಾಜಕೀಯ, ಸಂಕುಚಿತ ಮನಸ್ಸುಗಳು ನೀಡಿದ ಕಾಟಗಳಿಂದ ಬೇಸತ್ತು ಕನ್ನಡ ವಿಶ್ವವಿದ್ಯಾಲಯ ಬಿಟ್ಟು ದೆಹಲಿಯ ಅಮೇರಿಕನ್ ಇನ್ಸಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್‌ಗೆ ಬಂದು ಅವರು ಒಳ್ಳೆಯ ಕೆಲಸವನ್ನೇ ಮಾಡಿದರು. ಇದರಿಂದ ಅವರ ವಿದ್ವತ್ತು ವಿನೂತನ ಸ್ಪರ್ಶಗಳಿಂದ ವಿಸ್ತೃತಗೊಂಡಿತು. ಕನ್ನಡಕ್ಕೆ ಅತ್ಯವಶ್ಯವಿರುವ ಇಂಗ್ಲಿಷ್ ಬಲ್ಲ ಪ್ರೊಮೋಟರ್ ಸಿಕ್ಕಂತಾಯಿತು. ತುಳುನಾಡಿನ ಭೂತಗಳಿಂದ ಬಯಲು ಸೀಮೆಯ ಸಣ್ಣಪುಟ್ಟ ದೇವತೆಗಳವರೆಗೆ ಹೊಸ ಅರ್ಥವನ್ನು ನೀಡಲು ಬಿಳಿಮಲೆ ಪ್ರಯತ್ನಿಸಿ ಯಶಸ್ವಿಯಾದರು. ಸಂಸ್ಕೃತಿ ಅಂದರೆ ಜೀವನ ವಿಧಾನದ ಕಥನ, ಅದರ ಅಧ್ಯಯನ ಅಂದರೆ ಬದುಕಿನ ಒಳ ಹೊಕ್ಕು ಪ್ರೀತಿಯ ನೆಲೆಯಲ್ಲಿ ಅರ್ಥೈಸುವುದು ಎಂದು ನಂಬಿರುವ ಬಿಳಿಮಲೆ ಉದ್ಗ್ರಂಥಗಳ ದೈವ ಭಾಷೆಯನ್ನು ಆಶ್ರಯಿಸಲೇ ಇಲ್ಲ.

ಈಗ ಬಿಳಿಮಲೆ ರಾಜ್ಯೋತ್ಸವ ಪ್ರಶಸ್ತಿ ಬಂದಿದೆ. ಎಂದೋ ಬರಬೇಕಿತ್ತು. ಈಗ ಬಂದಿದೆ. ಎಲೆ ಮರೆಯ ಕಾಯಿಯಂತೆ Photo Frame ನಿಂದ ಸದಾ ಆಚೆ ಸರಿದು ನಿಲ್ಲುವ ನಾಚಿಕೆ ಸ್ವಭಾವದ ಬಿಳಿಮಲೆಯವರನ್ನು ತಡವಾಗಿಯಾದರೂ ಕರ್ನಾಟಕ ಸರ್ಕಾರ ಗುರುತಿಸಿದೆ. ಇದಕ್ಕಾಗಿ ಸರ್ಕಾರಕ್ಕೆ ಧನ್ಯವಾದಗಳನ್ನು ಹೇಳಲೇಬೇಕು. ಕೇಸುಗಳು, ಜೈಲು, ಆರೋಪ, ಪ್ರತ್ಯಾರೋಪ ಇತ್ಯಾದಿ ಸಂಕಷ್ಟಗಳಲ್ಲಿ ಸದಾ ಸಿಲುಕಿರುವ ನಮ್ಮ ಸರ್ಕಾರಕ್ಕೆ ನೆಮ್ಮದಿಯಿಂದ ನಿಜವಾದ ಸಾಧಕರನ್ನು ಗುರುತಿಸುವ ತಾಳ್ಮೆ ಇನ್ನೂ ಇದೆಯಲ್ಲ ಎಂಬುದು ಸಮಾಧಾನದ ಸಂಗತಿ.

ಇಲ್ಲಿ ಇನ್ನೊಂದು ಮಾತು. ಕನ್ನಡ ವಿಶ್ವವಿದ್ಯಾಲಯವನ್ನು ಅದರ ಅಡಿಪಾಯದ ದಿನಗಳಿಂದಲೇ ಬಲ್ಲವನು ನಾನು. ನನ್ನ ವಿದ್ಯಾಗುರು ಚಂದ್ರಶೇಖರ ಕಂಬಾರರು ಅಲ್ಲಿನ ಪ್ರತಿ ಇಟ್ಟಿಗೆ ಇಡುವಾಗಲೂ ನನ್ನೊಂದಿಗೆ ಸಂಭ್ರಮಿಸುತ್ತಿದ್ದರು. ಕಂಬಾರರಿಗೆ ವಿಶ್ವವಿದ್ಯಾಲಯ ಹೇಗಿರಬೇಕು, ಹೇಗಾಗಬೇಕು ಎಂಬ ಸ್ಪಷ್ಟ ಪರಿಕಲ್ಪನೆ ಇತ್ತು. ಆದರೆ ಈ ಪರಿಕಲ್ಪನೆ ಛಿದ್ರಗೊಂಡು 'ಒಣ ಪಂಡಿತರ' ಕಪಿಮುಷ್ಟಿಯಲ್ಲಿ ನಲುಗಿದೆ, ನಲುಗುತ್ತಿದೆ. ಈ ವಿಶ್ವವಿದ್ಯಾಲಯಕ್ಕೆ ಅಂತರ್‌ರಾಷ್ಟ್ರೀಯ ಆಯಾಮವನ್ನು ತಂದು ಕೊಡುವ ವ್ಯಕ್ತಿಯ ಅವಶ್ಯಕತೆ ಇದೆ. ಆ ವ್ಯಕ್ತಿ ಅಲ್ಲಿನ ನೇತೃತ್ವ ವಹಿಸಿದರೆ–ವಿಶ್ವವಿದ್ಯಾಲಯದ ಮೂಲೋದ್ದೇಶಗಳು ಸಾರ್ಥಕ ರೀತಿಯಲ್ಲಿ ಈಡೇರುತ್ತವೆ. ಈ ನಿಟ್ಟಿನಲ್ಲಿ ನನ್ನ ಆಯ್ಕೆ–ಪುರುಷೋತ್ತಮ ಬಿಳಿಮಲೆ. 2400 ಕಿ.ಮೀ ದೂರದಲ್ಲಿರುವ ರಾಜ್ಯ ಸರ್ಕಾರಕ್ಕೆ ಈ ಮಾತು ಕೇಳಿಸುತ್ತದೆಯೇ? ಗೊತ್ತಿಲ್ಲ. ಸದ್ಯಕ್ಕೆ ರಾಜ್ಯೋತ್ಸವ ಪ್ರಶಸ್ತಿ ಪಡೆದದ್ದಕ್ಕೆ ಬಿಳಿಮಲೆಗೆ ನನ್ನ ಅಭಿನಂದನೆಗಳು. (ಪ್ರಶಸ್ತಿಯ ಹಣದಲ್ಲಿ ಶೇಕಡಾ ಹತ್ತರಷ್ಟು ಖಾಸಗೀ Spritual ಕೂಟಗಳಲ್ಲಿ ವಿನಿಯೋಗಿಸುವ ಸದ್ಬುದ್ಧಿ ಅವರಿಗಿದೆ ಎಂಬುದು ನನ್ನ ನಂಬಿಕೆ).

❑ *ಭರತಾದ್ರಿ*

# ಸಿ.ಸಿ.ಆರ್.ಟಿ.ಯ ವಿದ್ಯಾರ್ಥಿವೇತನಕ್ಕೆ ಮಾ:ಸಂಜಯ್ ಇರಾನಿ ಆಯ್ಕೆ



ಸಾಂಸ್ಕೃತಿಕ ಸಂಪನ್ಮೂಲ ಮತ್ತು ತರಬೇತಿ ಕೇಂದ್ರ (Centre for Cultural Resources and Training) ವು 2011–13ನೇ ಸಾಲಿಗಾಗಿ ಕೊಡಲಾಗುವ ಪ್ರತಿಷ್ಠಿತ ಸಾಂಸ್ಕೃತಿಕ ಕೌಶಲ್ಯ ಶೋಧನೆಯ ವಿದ್ಯಾರ್ಥಿ ವೇತನಕ್ಕಾಗಿ ಮಾಸ್ಟರ್ ಸಂಜಯ್ ಇರಾನಿ ಆಯ್ಕೆಯಾಗಿದ್ದಾರೆ.

ಕೇಂದ್ರ ಸರ್ಕಾರದ ಸಂಸ್ಕೃತಿ ಮಂತ್ರಾಲಯದ ಅಧೀನ ಸಂಸ್ಥೆಯಾದ ಸಾಂಸ್ಕೃತಿಕ ಸಂಪನ್ಮೂಲಗಳ ಮತ್ತು ತರಬೇತಿ ಕೇಂದ್ರ (CCRT) ಇತ್ತೀಚೆಗೆ ನಡೆಸಲಾದ ಪ್ರಾಕೃತಿಕ ಹಾಗೂ ಮೌಖಿಕ ಪರೀಕ್ಷೆಯಲ್ಲಿ ದೆಹಲಿ ಕನ್ನಡಿಗ ಮಾಸ್ಟರ್ ಸಂಜಯ್ ಇರಾನಿ ಕರ್ನಾಟಕ ಸಂಗೀತದ ಮೃದಂಗಂ ವಿಭಾಗದಲ್ಲಿ ತಮ್ಮ ಮೇಧಾಶಕ್ತಿಯನ್ನು ಪ್ರದರ್ಶಿಸಿ, ಆಯ್ಕೆ ಸಮಿತಿಯ ಮೆಚ್ಚುಗೆಗೆ ಪಾತ್ರರಾಗಿ, ಎರಡು ವರ್ಷಗಳ ಅವಧಿಯ ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾಗಿದ್ದಾರೆ. ದೆಹಲಿ ಕೇಂದ್ರದಿಂದ ಕರ್ನಾಟಕ ಸಂಗೀತದ ಮೃದಂಗಂ ವಿಭಾಗದಲ್ಲಿ ಇದುವರೆವಿಗೂ ಆಯ್ಕೆಯಾಗಿರುವ ವಿದ್ಯಾರ್ಥಿಗಳಲ್ಲಿ ಸಂಜಯ್‌ರವರು ಪ್ರಪ್ರಥಮ ಕನ್ನಡಿಗರೆಂಬುದು ಅತ್ಯಂತ ಹೆಮ್ಮೆಯ ವಿಷಯ.

ದೆಹಲಿಯ ಗ್ರೀನ್ ಫೀಲ್ಡ್ಸ್ ಸ್ಕೂಲ್‌ನಲ್ಲಿ ಪ್ರಸ್ತುತ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ 14 ವರ್ಷ ವಯಸ್ಸಿನ ಸಂಜಯ್ ಕಳೆದ 7 ವರ್ಷಗಳಿಂದ ಕಲೈಮಾಮನಿ ಶ್ರೀ ಎ ಪ್ರೇಮ್‌ಕುಮಾರ್‌ರವರಿಂದ ದೆಹಲಿ ತಮಿಳು ಸಂಘಂನಲ್ಲಿ ತರಬೇತಿ ಪಡೆದಿದ್ದು, ಕಳೆದೆರಡು ವರ್ಷಗಳಿಂದ ಅವರ ಪುತ್ರರಾದ ಶ್ರೀ ವೆಟ್ರಿ ಭೂಪತಿಯವರಿಂದ ತರಬೇತಿ ಪಡೆಯುತ್ತಿದ್ದಾರೆ.

ನವೆಂಬರ್ 2010ರಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದ ಕಾರ್ಯಕ್ರಮದಲ್ಲಿ ಖ್ಯಾತ ಸಂಗೀತಗಾರರಾದ ಶ್ರೀ ಹರಿಹರನ್‌ರವರ 'Tree of Knowledge' ತಂಡದಲ್ಲಿ ಸಹ ಸಂಜಯ್‌ರವರು ಭಾಗವಹಿಸಿದ್ದರು. ಅಲ್ಲದೆ, ದೆಹಲಿಯ ನೆಹರು ಬಾಲ ಸಮಿತಿಯವರು ನವೆಂಬರ್ 2008ರಲ್ಲಿ ನಡೆಸಿದ ಏಕ ವಾದ್ಯ ಸಂಗೀತ ಸ್ಪರ್ಧೆಯ ಜೂನಿಯರ್ ವಿಭಾಗದಲ್ಲಿ ಸ್ಪರ್ಧಿಸಿ ಪ್ರಥಮ ಬಹುಮಾನ ಪಡೆದಿದ್ದನ್ನು ಸಹ ಇಲ್ಲಿ ಸ್ಮರಿಸಬಹುದಾಗಿದೆ.

ಸಂಜಯ್ ಅವರು ತಮ್ಮ ಕಲಾ ಕ್ಷೇತ್ರದಲ್ಲಿ ಮತ್ತಷ್ಟು ಉನ್ನತಿ ಸಾಧಿಸಲಿ, ಕೀರ್ತಿ ಗಳಿಸಲಿ ಎಂದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರೈಸುತ್ತೇವೆ.

# ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಮನ್ನಣೆ

## ಸರಕಾರದ ಅಧಿಕೃತ ಆದೇಶ ಪ್ರಕಟ

**ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತದ್ದರ ಬಗ್ಗೆ ಕೇಂದ್ರ ಸರ್ಕಾರದ ಅಧಿಕೃತ ಆದೇಶ ಪ್ರಕಟವಾಗಿದ್ದು ಮೊದಲ ಬಾರಿಗೆ ಆದೇಶದ ಪೂರ್ಣ ವಿವರವನ್ನು 'ಅಭಿಮತ'ದಲ್ಲಿ ಪ್ರಕಟಿಸುತ್ತಿದ್ದೇವೆ.** **ಸಂಪಾದಕರು**

ಕನ್ನಡಿಗರ ನಿರಂತರ ಹೋರಾಟದ ಫಲವಾಗಿ ಇದೀಗ ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಮನ್ನಣೆ ದೊರಕಿದೆ. ಈ ಕುರಿತಾದ ಘೋಷಣೆಯು 2008ರಲ್ಲೆ ಹೊರಬಂದಿದ್ದರೂ ಅದಕ್ಕೆ ಸಂಬಂಧಿಸಿದಂತೆ ಸೂಕ್ತವಾದ ಸರಕಾರೀ ಆದೇಶ ಹೊರಬಂದಿರಲಿಲ್ಲ. ಜೊತೆಗೆ ತಮಿಳುನಾಡಿನಿಂದ ಶ್ರೀ ಗಾಂಧಿ ಎಂಬುವರು ನ್ಯಾಯಾಲಯದಲ್ಲಿ ಹೂಡಿದ ದಾವೆಯು ಕೂಡಾ ನಮ್ಮೆಲ್ಲರನ್ನು ಆತಂಕಕ್ಕೆ ದೂಡಿತ್ತು. ಈ ನಡುವೆ ಕರ್ನಾಟಕ ಸರಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀ ಮುಖ್ಯಮಂತ್ರಿ ಚಂದ್ರು ಅವರ ನೇತೃತ್ವದ ವಿವಿಧ ನಿಯೋಗಗಳು, ದೆಹಲಿಯಿಂದ ಶ್ರೀ ಬೈಕೆರೆ ನಾಗೇಶ್ ಮತ್ತಿತರರು ತಮ್ಮ ದಣಿವರಿಯದ ಪ್ರಯತ್ನವನ್ನು ಮುಂದುವರಿಸಿದ್ದರು. ಇದೆಲ್ಲದರ ಪರಿಣಾಮವಾಗಿ ಕನ್ನಡಕ್ಕೆ ಶಾಸ್ತ್ರೀಯ ಮನ್ನಣೆ ನೀಡುವ ಸರಕಾರೀ ಆದೇಶ ಇದೀಗ ಹೊರಬಂದಿದೆ. ಇದು ನಮ್ಮೆಲ್ಲರ ಸಂತೋಷಕ್ಕೆ ಕಾರಣವಾಗಿದೆ.

ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಇಲಾಖೆಯ ಉನ್ನತ ಶಿಕ್ಷಣ ವಿಭಾಗವು (Government of India, Ministry of Human Resource Development, Department of Higher Education) ದಿನಾಂಕ 29.09.2011 ರಂದು ಹೊರಡಿಸಿದ ಆದೇಶ ಸಂಖ್ಯೆ F.No.8-81/2009-Languages-II ನ ಪ್ರಕಾರ ಕೇಂದ್ರ ಸರಕಾರವು ಮೈಸೂರಿನ ಕೇಂದ್ರೀಯ ಭಾಷಾ ಸಂಸ್ಥಾನದಲ್ಲಿ (Central Institute of Indian Languages, Mysore-CIIL) ಕನ್ನಡ ಮತ್ತು ತೆಲುಗು ಭಾಷೆಗಳ ಅಧ್ಯಯನಕ್ಕಾಗಿ ಎರಡು ಪ್ರತ್ಯೇಕ ಕೇಂದ್ರಗಳನ್ನು ತೆರೆಯಲು ಸೂಚನೆ ನೀಡಿದೆ. ದಿನಾಂಕ 08-05-2009ರಂದು ನಡೆದ ಕ್ಯಾಬಿನೆಟ್ ಸಭೆಯಲ್ಲಿ ಈ ಕುರಿತು ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಆದೇಶದಲ್ಲಿ ನಮೂದಿಸಲಾಗಿದೆ. ಕನ್ನಡಕ್ಕೆ ಸಂಬಂಧಿಸಿದಂತೆ ಈ ಆದೇಶದ ಮುಖ್ಯಾಂಶಗಳನ್ನು ಕೆಳಗೆ ಸಂಗ್ರಹಿಸಿ ಕೊಡಲಾಗಿದೆ.

1. ಶಾಸ್ತ್ರೀಯ ಭಾಷೆಗಳ ಆಕರಗಳನ್ನು ಗುರುತಿಸುವುದು.
2. ಶಾಸ್ತ್ರೀಯ ಭಾಷೆಯನ್ನು ಅದರ ಆಡುವ ಭೂವ್ಯಾಪ್ತಿಯ ಒಳಗೆ ಮತ್ತು ಹೊರಗೆ ಉತ್ತೇಜಿಸುವುದು, ಪ್ರಚಾರ ಮಾಡುವುದು ಮತ್ತು ಸಂರಕ್ಷಿಸುವುದು.
3. ಭಾರತದಲ್ಲಿ ಮತ್ತು ವಿದೇಶಗಳಲ್ಲಿ ಸಂಶೋಧನೆ ಮತ್ತು ದಾಖಲೀಕರಣವನ್ನು ಕೈಗೊಳ್ಳುವುದು ಮತ್ತು ಪ್ರೋತ್ಸಾಹಿಸುವುದು.
4. ಹಸ್ತಪ್ರತಿಗಳನ್ನು ಸಂಗ್ರಹಿಸುವುದು ಮತ್ತು ಗಣಕೀಕರಿಸುವುದು.
5. ಶಾಸ್ತ್ರೀಯ ಕನ್ನಡಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಿಸುವುದು.
6. ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಬರಹ ಸಂಪತ್ತಿನಿಂದ ಗಣ್ಯಸ್ಥಾನವನ್ನು ಪಡೆದ ವಿದ್ವಾಂಸರಿಗೆ ಗೌರವ ಪ್ರಶಸ್ತಿ ಪ್ರಮಾಣ ಪತ್ರ, ನಗದು ಪ್ರಶಸ್ತಿಗಳನ್ನು ಕೊಡುವುದರ ಮೂಲಕ ಸನ್ಮಾನಿಸುವುದು.
7. ಶಾಸ್ತ್ರೀಯ ಪಠ್ಯಗಳ ಬಗ್ಗೆ ಅರಿವನ್ನು ಪಡೆದಿರುವ ವಿದ್ವಾಂಸರ ಬಗ್ಗೆ ಸಾಕ್ಷ್ಯಚಿತ್ರಗಳನ್ನು ತಯಾರಿಸುವುದು.
8. ನಾಣ್ಯಶಾಸ್ತ್ರ, ಶಾಸನಶಾಸ್ತ್ರ, ಪುರಾತತ್ವಶಾಸ್ತ್ರ ಮತ್ತು ಪ್ರಾಚೀನ ಇತಿಹಾಸ ಮುಂತಾದವುಗಳ ಅಂತರ ಶಿಸ್ತೀಯ ಸಂಶೋಧನೆಗೆ ಮಾರ್ಗಗಳನ್ನು ರೂಪಿಸುವುದು.
9. ಶಾಸ್ತ್ರೀಯ ಭಾಷೆ, ಶಾಸ್ತ್ರೀಯ ಸಂಗೀತ ಮತ್ತು ಶಾಸ್ತ್ರೀಯ ನೃತ್ಯಗಳ ನಡುವಣ ಸಂಪರ್ಕಗಳನ್ನು ಪರಿಶೋಧಿಸುವುದು.
10. ಶಾಸ್ತ್ರೀಯ ಭಾಷೆ ಮತ್ತು ಆಧುನಿಕ ತಂತ್ರಜ್ಞಾನಗಳನ್ನು ಸಂಪರ್ಕಿಸುವುದು.
11. ಶಾಸ್ತ್ರೀಯ ಪಠ್ಯಗಳನ್ನು ಇತರ ಭಾರತೀಯ ಭಾಷೆಗಳಿಗೆ ಮತ್ತು ಇಂಗ್ಲಿಷ್ ಹಾಗೂ ಆಯ್ದ ಯುರೋಪಿಯನ್ ಭಾಷೆಗಳಿಗೆ ಭಾಷಾಂತರಿಸುವುದು.
12. ಜಗತ್ತಿನ ಪುರಾತನ ನಾಗರಿಕತೆಗಳನ್ನು ಶಾಸ್ತ್ರೀಯ ಭಾಷೆಯ ಸಾಂಸ್ಕೃತಿಕ ಕಣಜಕ್ಕೆ ಅರಿವಧ್ಯಯನದ ಅನುಸಂಧಾನವನ್ನು ಉತ್ತೇಜಿಸುವುದು.
13. ಪುರಾತನ ದ್ರಾವಿಡ ಕಾಲದ ಭಾರತದ ಬಗ್ಗೆ ಕೇಳಲಾಗುವ ಪ್ರಶ್ನೆಗಳಿಗೆ ಉತ್ತರ ಕೊಡಲು ಬೇಕಾಗುವ ಜ್ಞಾನ ಭಂಡಾರವನ್ನು ಸ್ಥಾಪಿಸುವುದು.
14. ಭಾರತದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಶಾಸ್ತ್ರೀಯ ಭಾಷೆಯ ಅಧ್ಯಯನ ಪೀಠಗಳನ್ನು ಪ್ರತಿಷ್ಠಾಪಿಸುವುದು.
15. ಶಾಸ್ತ್ರೀಯ ಭಾಷೆಯ ಅಧ್ಯಯನಕ್ಕೆ ನೆರವು ನೀಡುವ ಇತರ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.
16. ಮಾಹಿತಿ ಪ್ರಸಾರ ಮತ್ತು ಸಂಪರ್ಕದ ಮೂಲಕ ಭಾರತದ ಶಾಸ್ತ್ರೀಯ ಭಾಷೆಗಳ ಬಗೆಗಿನ ಕಾರ್ಯವನ್ನು ಸಂಯೋಜಿಸುವುದು.

ಮೇಲೆ ಹೇಳಿದ ಕೆಲಸಗಳನ್ನು ಮಾಡಲು ಶಾಸ್ತ್ರೀಯ ಕನ್ನಡದ ಅತ್ಯುನ್ನತ ಅಧ್ಯಯನ ಕೇಂದ್ರವು ಈ ಕೆಳಗೆ ಸೂಚಿಸಿದಂತೆ ಒಟ್ಟು 37 ಜನರನ್ನು ನೇಮಕ ಮಾಡಿಕೊಳ್ಳಬಹುದು.

ಯೋಜನಾ ನಿರ್ದೇಶಕ–1, ಕಛೇರಿ ಸೂಪರಿಂಟೆಂಡೆಂಟ್–1, ಮೇಲ್ದರ್ಜೆಯ ಕಛೇರಿ, ಸಹಾಯಕ–1, ಕೆಳದರ್ಜೆಯ ಕಛೇರಿ ಸಹಾಯಕ–2, ಸ್ಟೆನೋಗ್ರಾಫರ್–1, ಜೂನಿಯರ್ ಅಕೌಂಟ್ಸ್ ಆಫೀಸರ್–1, ಸೀನಿಯರ್ ಫೆಲೋ–5, ಅಸೋಸಿಯೇಟ್ ಫೆಲೋ–10, ಡಾಕ್ಟರಲ್ ಫೆಲೋಶಿಪ್–10, ಪೋಸ್ಟ್ ಡಾಕ್ಟರಲ್ ಫೆಲೋಶಿಪ್–5, ಒಟ್ಟು –37

ಮೇಲಿನ ಎಲ್ಲಾ ಹುದ್ದೆಗಳನ್ನು ಮೂರು ವರ್ಷಗಳ ಅವಧಿಗೆ ಮಾತ್ರ ನೇಮಕ ಮಾಡಿಕೊಳ್ಳಬಹುದು.

### ಪ್ರಶಸ್ತಿಗಳು:

ಕೇಂದ್ರವು ಈ ಕೆಳಗಿನಂತೆ ಪ್ರಶಸ್ತಿಗಳನ್ನು ನೀಡಬಹುದು.

1. ಶಾಸ್ತ್ರೀಯ ಕನ್ನಡ ಭಾಷೆಗೆ ಸಂಬಂಧಿಸಿದಂತೆ ನಿರಂತರವಾಗಿ ಕೆಲಸ ಮಾಡಿದ್ದಕ್ಕಾಗಿ (ಜೀವಮಾನ ಸಾಧನೆಗಾಗಿ) ಒಬ್ಬ ಭಾರತೀಯ ವಿದ್ವಾಂಸನಿಗೆ ರೂ. 5ಲಕ್ಷ ನಗದು ಪುರಸ್ಕಾರ ನೀಡುವುದು.
2. 5 ಲಕ್ಷ ರೂಪಾಯಿಗಳ ಮೊತ್ತದ ಎರಡು ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ನೀಡುವುದು ಇಬ್ಬರಲ್ಲಿ ಒಬ್ಬರು ಭಾರತೀಯರೂ ಇನ್ನೊಬ್ಬರು ಭಾರತೀಯ ಸಂಜಾತರಲ್ಲದವರೂ ಆಗಿರಬೇಕು.
3. ಒಂದು ಲಕ್ಷ ರೂಪಾಯಿಗಳ ಐದು ಯುವ ಪುರಸ್ಕಾರ (30–40 ವರ್ಷದವರಿಗೆ) ನೀಡುವುದು.

ಈ ಎಲ್ಲಾ ಪ್ರಶಸ್ತಿಗಳನ್ನು ಪ್ರತಿವರ್ಷ ರಾಷ್ಟ್ರಾಧ್ಯಕ್ಷರು ಪ್ರದಾನ ಮಾಡಬೇಕು.

### ಹಣಕಾಸು :

ಮೇಲಿನ ಚಟುವಟಿಕೆಗಳನ್ನು ನಡೆಸಲು ಕೇಂದ್ರ ಸರಕಾರವು 11ನೆ ಯೋಜನಾ ಅವಧಿಯಲ್ಲಿ ಕನ್ನಡಕ್ಕಾಗಿ 54,54,000/– ರೂಗಳನ್ನು ಮೀಸಲಿಟ್ಟಿದೆ. ಈ ಹಣವನ್ನು ಮಾರ್ಚ್ 31,2012ರ ಒಳಗಾಗಿ ಖರ್ಚು ಮಾಡಬೇಕಾಗಿದೆ.

12ನೇ ಯೋಜನಾವಧಿಯಲ್ಲಿ (2012–17) ಒಟ್ಟು 10,02,80,000/– ರೂಗಳನ್ನು ಮೀಸಲಿರಿಸಿದೆ. (2012–13ಕ್ಕೆ ರೂ. 2,28,16,000/–, 2013–14 ಕ್ಕೆ 2,23,16,000, 2014–15ಕ್ಕೆ 2,2816,000, 2015–16ಕ್ಕೆ 1,64,16,000/–, ಮತ್ತು 2016–17ಕ್ಕೆ ರೂ. 1,69,16,000/–)

ಈ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕರು CIIL ನ ನಿರ್ದೇಶಕರ ಮಾರ್ಗದರ್ಶನದಲ್ಲಿ ಕೆಲಸ ಮಾಡುವರು. ಜೊತೆಗೆ CIIL ನ ನಿರ್ದೇಶಕರು ನೇಮಕ ಮಾಡುವ ಐದು ಜನರ ಸಲಹಾ ತಂಡವು (Planning Cum monitoring Board -PMB) ಕೇಂದ್ರದ ಎಲ್ಲ ಚಟುವಟಿಕೆಗಳಿಗೆ ಬೇಕಾದ ಸಲಹೆ–ಮಾರ್ಗದರ್ಶನ ನೀಡುತ್ತದೆ.

ತಮಿಳಿಗೆ ಶಾಸ್ತ್ರೀಯ ಭಾಷೆಯ ಮನ್ನಣೆ ದೊರಕಿದಾಗ ಅದು ಕೂಡಾ ಆರಂಭಿಕ ದಶಕದಲ್ಲಿ CIIL ನಲ್ಲಿ ಕೆಲಸ ಆರಂಭಿಸಿ, ಮುಂದೆ ಅದು ಸ್ವತಂತ್ರವಾಗಿ ಚೆನ್ನೈನಲ್ಲಿ ಕೆಲಸ ಮಾಡಲು ಆರಂಭಿಸಿತು. ಆದರೆ ಅದಕ್ಕೆ 2006–2009 ರ ಅವಧಿಯಲ್ಲಿ ಒಟ್ಟು 28 ಕೋಟಿ ರೂಪಾಯಿಗಳ ಅನುದಾನ ನೀಡಲಾಗಿದ್ದು, ಇದಕ್ಕೆ ಹೋಲಿಸಿದರೆ ಕನ್ನಡಕ್ಕೆ ನೀಡಿದ ಅನುದಾನ ಬಹಳ ಕಡಿಮೆಯೆಂದೇ ಹೇಳಬಹುದು.

ಏನೇ ಇರಲಿ. ಈ ಆದೇಶದೊಂದಿಗೆ ಕನ್ನಡಿಗರ ಬಹುದಿನಗಳ ಕನಸೊಂದು ನನಸಾದಂತಾಗಿದೆ. ಈಗ ಕನ್ನಡದ ವಿದ್ವಾಂಸರು ಸಿಕ್ಕ ಅವಕಾಶವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳಬೇಕಾಗಿದೆ. CIIL ಅತ್ಯಂತ ಉತ್ಸಾಹದಿಂದ ಕೆಲಸಗಳನ್ನು ಆರಂಭಿಸಿದೆ. ಶಾಸ್ತ್ರೀಯ ಭಾಷೆಯ ಕುರಿತಾದ ವಿದ್ವತ್ತನ್ನು ಬೆಳೆಸಿಕೊಳ್ಳಲು ಯುವಕರ ಪಡೆ ಸಿದ್ಧವಾಗಬೇಕಾಗಿದೆ.

**(ಮೇಲಿನ ಮಾಹಿತಿಗಳನ್ನು ಒದಗಿಸಿಕೊಟ್ಟ ಕರ್ನಾಟಕ ಸರಕಾರದ ಹೆಚ್ಚುವರಿ ವಿಶೇಷ ಪ್ರತಿನಿಧಿ ಶ್ರೀ ಬೈಕೆರೆ ನಾಗೇಶ್ ಅವರಿಗೆ ನಾನು ಕೃತಜ್ಞನಾಗಿದ್ದೇನೆ)**

❑ *ಡಾ. ಪುರುಷೋತ್ತಮ ಬಿಳಿಮಲೆ*

# ನೇರ ನಡೆ ನುಡಿಯ ನ್ಯಾಯವಾದಿ ಶ್ರೀ ಮರೋಳಿ ವೀರಪ್ಪ

***78 ರ ಹರೆಯದ ಹಿರಿಯ ದೆಹಲಿ ಕನ್ನಡಿಗ, ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯವಾದಿಗಳಾದ ಶ್ರೀ ಎಂ. ವೀರಪ್ಪ ಅವರನ್ನು 2011ರ ಸಾಲಿನ ದೆಹಲಿ ಕರ್ನಾಟಕ ಸಂಘದ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಗೆ ಆಯ್ಕೆ ಮಾಡಿ ಸನ್ಮಾನಿಸಲಾಗುತ್ತಿದೆ. ಈ ಶುಭ ಸಂದರ್ಭದಲ್ಲಿ ಅವರ ಕಿರು ಪರಿಚಯ ನಿಮಗಾಗಿ . . . .***



**ಅಭಿಮತ :** 5 ದಶಕಗಳಿಗೂ ಹೆಚ್ಚು ಕಾಲ ದೆಹಲಿಯಲ್ಲಿ ವಾಸವಾಗಿರುವ ತಾವು ಆರಂಭದಿಂದಲೂ ದೆಹಲಿ ಕರ್ನಾಟಕ ಸಂಘಕ್ಕೆ ಹತ್ತಿರ. ಸಂಘದ ಹೊಸ ಪೀಳಿಗೆಯವರಿಗೆ ತಮ್ಮನ್ನು ಪರಿಚಯಿಸುವ ಉದ್ದೇಶದಿಂದ ತಮ್ಮನ್ನು ಸಂದರ್ಶಿಸುತ್ತಾ ಇದೀವಿ. ಹೀಗಾಗಿ ತಮ್ಮ ಕಿರು ಪರಿಚಯ?

**ಎಂ. ವೀರಪ್ಪ :** ನಾನು ಹುಟ್ಟಿದ್ದು ಮಂಗಳೂರಿನ ಕಂಕನಾಡಿಯಲ್ಲಿ ಜನವರಿ 13, 1933ರಂದು. ನನ್ನ ತಂದೆ ತಾಯಿಗಳ 7 ಮಕ್ಕಳಲ್ಲಿ ಕೊನೆಯವನಾಗಿ ಹುಟ್ಟಿದೆ. ಮೆಟ್ರಿಕ್ ತನಕ ಮಂಗಳೂರಿನ ಸೈಂಟ್ ಎಲೋಷಿಯಸ್ ಕಾಲೇಜಿನಲ್ಲಿ ಕಲಿತೆ. ನಂತರ ಇಂಟರ್ ಮೀಡಿಯೇಟ್‌ನ್ನ ಮದನಪಲ್ಲಿಯ ಬೆಸೆಂಟ್ ಥಿಯೋಸಾಫಿಕಲ್ ಕಾಲೇಜಿನಲ್ಲಿ ಮುಗಿಸಿದೆ. ಈ ನಡುವೆ ನನ್ನ ತಂದೆಯವರು ತೀರಿಕೊಂಡಿದ್ದರಿಂದ ಮಂಗಳೂರಿಗೆ ವಾಪಸ್ಸಾಗಬೇಕಾಯ್ತು. ಮುಂದಿನ ಓದು ಮಂಗಳೂರಿನ ಸರಕಾರೀ ಕಾಲೇಜಿನಲ್ಲಿ. ಎರಡು ವರ್ಷ ಬಿ.ಎ. ಮತ್ತು ಎರಡು ವರ್ಷ ಬಿ.ಕಾಂ. ಪದವಿ. ತಕ್ಷಣ ನೌಕರಿ ಸಿಗಲಿಲ್ಲ. ಹೊಟ್ಟೆಪಾಡಿಗಾಗಿ ಏನಾದರೂ ಮಾಡಲೇಬೇಕಾದ ಸ್ಥಿತಿ. ಆಗ ಯಾರೋ ಎಲ್‌ಎಲ್‌ಬಿ ಮಾಡಲು ಹೇಳಿದರು. ಬೆಂಗಳೂರಿನ ಸರಕಾರಿ ಲಾ ಕಾಲೇಜಿನಲ್ಲಿ ಎಲ್‌ಎಲ್‌ಬಿ. ಗಾಗಿ ಸೇರಿದೆ. ಆಗ ಅಲ್ಲಿ ಪ್ರಿನ್ಸಿಪಾಲರಾಗಿದ್ದವರು ಈ ಹಿಂದೆ ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಗಳಾಗಿದ್ರಲ್ವಾ ಎಮ್.ಎನ್. ವೆಂಕಟಾಚಲಯ್ಯ ಅಂತ? ಅವರ ತಂದೆ ನಾರಾಯಣ ರಾವ್ ಅವ್ರು. ಬಹಳ ಶಿಸ್ತಿನ ಮನುಷ್ಯ. ಅವರ ಮಾರ್ಗದರ್ಶನದಲ್ಲಿ ಎಲ್.ಎಲ್.ಬಿ. ವ್ಯಾಸಂಗ ಮಾಡಿದೆ.

**ಅಭಿಮತ :** ಮಂಗಳೂರಿನಿಂದ ಮದನಪಲ್ಲಿ, ಮತ್ತೆ ಮಂಗಳೂರು, ಆ ನಂತರ ಓದಿಗಾಗಿ ಬೆಂಗಳೂರು. ಈ ನೆಗೆದಾಟದಿಂದ ಒಮ್ಮೆಲೇ ದೆಹಲಿಗೆ ಜಿಗಿದಿದ್ದು ಹೇಗೆ?

**ಎಂ. ವೀರಪ್ಪ :** ನಾನು ಒಂದು ರೀತಿಯಲ್ಲಿ ಸಾಹಸೀ ಪ್ರವೃತ್ತಿಯವನು. ನನಗೇನಾದರೂ ಮಾಡಬೇಕೆಂತ ಅನಿಸಿದರೆ ನಾನು ಮಾಡಿಯೇ ತೀರುವವನು. ಹೀಗಾಗಿ ನಾನು ಸಾಹಸ ಮಾಡ್ತಾ ಮಾಡ್ತಾ ಮುಂಬೈ–ಆನಂತರ ದೆಹಲಿಗೆ ಬಂದೆ. ದೆಹಲಿ ನೋಡುತ್ತಾ ಅಲೆಯುತ್ತಿದ್ದಾಗ ಕನಾಟ್‌ಪ್ಲೇಸ್ ವೃತ್ತದಲ್ಲಿ ರಸ್ತೆ ದಾಟುವುದಕ್ಕಾಗಿ ಕಾಯುತ್ತಿದ್ದೆ. ಅಷ್ಟರಲ್ಲೇ ನನ್ನ ಗುರುಗಳಾದ ಶ್ರೀ ನಾರಾಯಣ ರಾವ್ ಅವ್ರು ಸಿಕ್ಕಿದ್ರು. (ಐ.ಎ.ಎಸ್. ನ ಮುಖ್ಯ ಪರೀಕ್ಷಕರಾಗಿದ್ದರಿಂದ ಅವರ ದೆಹಲಿ ಪ್ರವಾಸ ಆಗಾಗ ಆಗುತ್ತಿತ್ತು). ಅವರಲ್ಲಿಗೆ ಹೋಗಿ ಅವರನ್ನು ಮಾತನಾಡಿಸಿದಾಗ ಅವರಿಗೆ ಆಶ್ಚರ್ಯವಾಗಿ, ಅರೇ ನೀನಿಲ್ಲಿ ಏನು ಮಾಡ್ತಾ ಇದೀಯಾ, ಅಂತ ವಿಚಾರಿಸಿದರು. 'ನನಗೀಗ ಯಾವುದೇ ಕೆಲಸವಿಲ್ಲ, ದೆಹಲಿ ನೋಡಿ ಹೋಗೋಣ ಅಂತ ಬಂದಿದ್ದೆ ಅಂತ ಹೇಳಿದೆ. ಮದ್ರಾಸ್ ಹೋಟೆಲಿನಲ್ಲಿದ್ದೇನಂತ ಹೇಳುವುದಕ್ಕೆ ನಾಚಿಕೆಯಾಗಿತ್ತು. ಆಗ ಅವರು ಹೇಳಿದರು ನೀನು ಇಲ್ಲೇ ಪ್ರಾಕ್ಟೀಸ್ ಮಾಡು, ಇದು ಬಹಳ ಪ್ರಶಸ್ತವಾದ ಸ್ಥಳ, ಏಳಿಗೆ ಆಗುತ್ತೆ ಅಂತ, ಆ ಮಾತೇ ನನ್ನ ಜೀವನದಲ್ಲಿ ಬದಲಾವಣೆ ತಂದಿದ್ದು.

**ಅಭಿಮತ :** ಅಂದರೆ ನೇರವಾಗಿ ಲಾ ಪ್ರಾಕ್ಟೀಸ್ ಶುರು ಮಾಡಿದ್ರಾ ?

**ಎಂ. ವೀರಪ್ಪ :** ಎಲ್ಲಿ ಮಾರಾಯ್ರೆ? ಬಾರ್ ಅಸೋಸಿಯೇಶನ್‌ನಲ್ಲಿ ಸೇರುವುದಕ್ಕೆ ನಾನೆಲ್ಲಿಂದ ಹಣ ತರುವುದು? ಉಳಿದವರ ಹಾಗೆ ನನಗೆ ಹಿನ್ನೆಲೆ ಉಂಟಾ? ಏನೋ ಹೀಗೆ ತಿರುಗಾಡುತ್ತಿದ್ದಾಗ ಒಬ್ಬ ಮನುಷ್ಯ ಸಿಕ್ಕ. ಆತ ಕಲ್ಕತ್ತಾದವನಂತೆ. ದೆಹಲಿಗೆ ಬಂದಾಗ ಎಲ್ಲಾ ಹಣ ಕಳೆದುಹೋದವಂತೆ. ಸಂಸಾರಸ್ಥ, ತಾನು ಹೇಗಾದರೂ ಮನೆಗೆ ಹೋಗಬೇಕು ನೀನು ಏನಾದ್ರೂ ಮಾಡಿ ಹಣ ಕೊಡು ಅಂತ ಅಂಗಲಾಚಿದ. ನನ್ನ ಮನಸ್ಸು ಕರಗಿತು. ಕೈಯಲ್ಲಿದ್ದ ಒಟ್ಟು ಎಪ್ಪತ್ತೆರಡು ರೂಪಾಯಿಯನ್ನು ಆದಷ್ಟು ಬೇಗ ಹಿಂದಿರುಗಿಸಬೇಕು ಎಂದು ಹೇಳಿ ಕೊಟ್ಟೆ. ಆ ಮನುಷ್ಯ ನನಗೆ ಧನ್ಯವಾದ ಹೇಳಿ ಹೋದ. ಆ ನಂತರ ಎರಡು ತಿಂಗಳಾದರೂ ಆ ಆಸಾಮಿ ಪತ್ತೆ ಇಲ್ಲ. ಹಣವಿಲ್ಲದ ನಾನು ಹೇಗೋ ದಿನಕ್ಕೊಂದು ಛೋಲೇ ಕುಲ್ಚಾ ತಿಂದುಕೊಂಡು ದಿನ ದೂಡುತ್ತಿದ್ದೆ. ಅದೆಷ್ಟೋ ದಿನಗಳು ಏಕಾಂಗಿಯಾಗಿ ಕಣ್ಣೀರಿಟ್ಟಿದ್ದುಂಟು. ಹೀಗಿದ್ದರೂ ನಾನು ಓದುವುದನ್ನು ನಿಲ್ಲಿಸಲಿಲ್ಲ. ಹತ್ತಿರದ ರಾಮಕೃಷ್ಣಾಶ್ರಮದಲ್ಲಿನ ಪುಸ್ತಕಗಳನ್ನು ಓದುವುದು ನಡೆದೇ ಇತ್ತು. ಏತನ್ಮಧ್ಯೆ ನನ್ನ ಅದೃಷ್ಟಕ್ಕೆ ಅಮೃತ್ ಬಾಜಾರ್ ದಿನಪತ್ರಿಕೆಯಲ್ಲಿ ಲಾ ಕರೆಸ್ಪಾಂಡೆಂಟ್‌ಗಾಗಿ ನೌಕರಿ ಕರೆದಿದ್ದರು. ನನ್ನ ಕಾನೂನಿನ ಹಿನ್ನೆಲೆಯಿರುವುದರಿಂದ ಅದಕ್ಕೆ ಅರ್ಜಿ ಹಾಕಿದೆ. ಅಲ್ಲಿ ನೌಕರಿ ಸಿಕ್ಕಿ ಬಿಟ್ಟಿತು. ಆ ನೌಕರಿ ಮಾಡುತ್ತಾ, ಟ್ಯೂಷನ್ ಹೇಳಿಕೊಡುತ್ತಾ ಹಣ ಸಂಗ್ರಹ ಮಾಡತೊಡಗಿದೆ–ಬಾರ್ ಅಸೋಸಿಯೇಶನ್‌ನಲ್ಲಿ ನೊಂದಾಯಿಸಿಕೊಳ್ಳುವುದಕ್ಕೋಸ್ಕರ, 2000 ರೂಪಾಯಿ ಬೇಕಾಗಿತ್ತು. ನನ್ನ ಕೈಯಲ್ಲಿ 300 ರೂಪಾಯಿ ಇರುತ್ತಿರಲಿಲ್ಲದ ಕಾಲ ಅದು !

**ಅಭಿಮತ :** ನಿಮ್ಮ ಮದುವೆ, ಸಂಸಾರ ಯಾವಾಗ ಆದದ್ದು?

**ಎಂ. ವೀರಪ್ಪ :** ಮಂಗಳೂರಿನ ಆಗಿನ ಸಂಸದ ಶಂಕರ್ ಹೆಗ್ಡೆ ಅವರ ನಾರ್ತ್ ಬ್ಲಾಕಿನ ಬಂಗಲೆಯ ಸರ್ವೆಂಟ್ ಕ್ವಾರ್ಟರ್ಸ್‌ನಲ್ಲಿ ವಾಸವಾಗಿದ್ದೆ. ನಾನು 1963ರಲ್ಲಿ ಇಡ್ಯದ ವಸಂತಿ ಅವರನ್ನು ವಿವಾಹವಾದ ಬಳಿಕ ಸ್ವಲ್ಪ ವರ್ಷಗಳ ಕಾಲ ಕರೋಲ್‌ಬಾಗಿನಲ್ಲಿದ್ದೆ. ಅದಾಗಲೇ ನನ್ನ ಮುಖ್ಯ ಆದಾಯ ಮೂಲವಾದ ಅಮೃತ್ ಬಾಜಾರ್ ಪತ್ರಿಕೆಯಿಂದ ಹಣ ಬರುವುದು ನಿಂತೇ ಹೋಯ್ತು. ಯಾಕೋ ಗೊತ್ತಿಲ್ಲ. ಹೀಗಿರುವಾಗ ಒಂದು ದಿನ ಆ ವ್ಯಕ್ತಿ (ನನ್ನ ಹತ್ತಿರ ಹಣ ತೆಗೆದುಕೊಂಡು ಹೋದವ) ನನ್ನನ್ನು ಹುಡುಕಿಕೊಂಡು ಬಂದ. ಹಣ ಕೊಡುತ್ತೇನೆ ಅಂದ. ಆದರೆ ನಾನು ಅವನಿಗೆ ಈಗ ನನ್ನ ಕರೀಯರ್ ಬದಲಾಗಿದೆ ಹಣ ಬೇಡ, ಆದರೆ ಒಂದು ಸಹಾಯ ಮಾಡು ಎಂದೆ. ಆತ ಒಪ್ಪಿಕೊಂಡ. ನೀನು ಅಮೃತ್ ಬಾಜಾರ್ ಪತ್ರಿಕೆಯ ಕಲ್ಕತ್ತಾ ಕಚೇರಿಗೆ ಹೋಗಿ ಅಲ್ಲಿಂದ ಹಣ ಏಕೆ ಬರುತ್ತಿಲ್ಲ ಎಂದು ವಿಚಾರಿಸು ಎಂದು ಕೇಳಿಕೊಂಡೆ. ಆಗ ಆತ ಒಪ್ಪಿಕೊಂಡು ಕಲ್ಕತ್ತಾಗೆ ಹೋಗಿ ಪತ್ರಿಕೆಯ ಸಂಪಾದಕರೊಂದಿಗೆ ಮಾತನಾಡಿ ನನಗೆ ಹಣ ಕಳುಹಿಸುವ ಏರ್ಪಾಡು ಮಾಡಿದ. ಕೆಲವು ವರ್ಷ ಕಳೆದ ನಂತರ ನನಗೆ ತಿಳಿದು ಬಂತು ಆ ವ್ಯಕ್ತಿ ಅಮೃತ್ ಬಾಜಾರ್ ಪತ್ರಿಕೆಯ ಸಂಪಾದಕರಾದ ತುಷಾರ್ ಕಾಂತಿ ಘೋಷ್ ಅವರ ಸಹಪಾಠಿಯಾಗಿದ್ದ ಅಂತ! ಒಂದು ಯಕಃಶ್ಚಿತ್ 72 ರೂಪಾಯಿಗಳ ಸಹಾಯಕ್ಕೆ ಆತ ನನ್ನ ಜೀವಮಾನವಿಡೀ ಋಣಿಯಾಗಿದ್ದ. ಆತನ ಹೆಸರು ಫತೇಸಿಂಗ್. ಆತನ ಆ ಸಹಾಯದಿಂದ ನನಗೆ 1985ರವರೆಗೂ ಅಮೃತ್ ಬಾಜಾರ್ ಪತ್ರಿಕೆಯಿಂದ ರಾಯಧನ ನಿಯತವಾಗಿ ಬರುತ್ತಿತ್ತು. ನನ್ನ ಜೀವನ ತಕ್ಕಮಟ್ಟಿಗೆ ಸುಗಮವಾಯಿತು. ಸ್ವಲ್ಪ ವರ್ಷ ಪಿಟಿಐ/ಯುಎನ್‌ಐ ದ ಕರೆಸ್ಪಾಂಡೆಂಟ್ ಆಗಿ ಕೂಡಾ ಕೆಲಸ ಮಾಡಿದ್ದೇನೆ. ನಂತರ ನೀತಿ ಬಾಗ್‌ನಲ್ಲಿ ಮನೆ ಕಟ್ಟಿಸಿದೆ. ನಮಗೆ ಮೂವರು ಮಕ್ಕಳು. ತುಷಾರ್ ಇಂಜಿನಿಯರ್, ನಿರನ್ ನನ್ನ ಹಾದಿಯಲ್ಲಿ ಮುಂದುವರೀತಿದ್ದಾನೆ ಮತ್ತು ಮಗಳು ನೀಲ್‌ಕಮಲ್ ಅಮೇರಿಕಾದಲ್ಲಿದ್ದಾಳೆ. (ಅಮೃತ್ ಬಾಜಾರ್ ಪತ್ರಿಕೆಯ ಸಂಪಾದಕರಾದ ತುಷಾರ್ ಕಾಂತಿ ಘೋಷ್ ಅವರ ಸ್ನೇಹದ ದ್ಯೋತಕವಾಗಿ ಮಗನಿಗೆ ಅದೇ ಹೆಸರಿಟ್ಟಿದ್ದಂತೆ).

**ಅಭಿಮತ :** ವಕೀಲರಾಗಿ ನಿಮ್ಮ ಜೀವನದ ಹಾದಿ?

**ಎಂ. ವೀರಪ್ಪ :** ಸುಪ್ರಿಂಕೋರ್ಟಿನಲ್ಲಿ ಶ್ರೀ ಬಿಆರ್‌ಎಲ್ ಐಯ್ಯಂಗಾರ್ ಅಂತ ಒಬ್ರು ಕನ್ನಡದವರಿದ್ರು. ಬಹಳ ಉನ್ನತ ವ್ಯಕ್ತಿ. ಒಂದಿನ ಅವ್ರೇ ಹೇಳಿದ್ರು ಅಲ್ಲೊಂದು ಪತ್ರ ಇದೆ, ನಿನಗಾಗಿ ಅಂತ. ಅಲ್ಲಿ ನೋಡಿದಾಗ ಅದರಲ್ಲಿ ಸರಕಾರದ ಪರ ವಕೀಲರಾಗಲು ಕೇಳಿಕೊಳ್ಳಲಾಗಿತ್ತು. ನನ್ನ ಅದೃಷ್ಟ ಚೆನ್ನಾಗಿತ್ತು. ಕರ್ನಾಟಕ ಸರಕಾರದ ಕೌನ್ಸಿಲರ್ ಆಗಿ ಸರಕಾರದ ಸೇವೆ ಆರಂಭವಾಗಿದ್ದು ಸತತ 30ವರ್ಷಗಳ ಕಾಲ ಮುಂದುವರೆಯಿತು. ತುರ್ತು ಪರಿಸ್ಥಿತಿಯ ಸಮಯದಲ್ಲಿ ನಾನು ಬಾರ್ ಅಸೋಸಿಯೇಶನ್‌ನ ಕಾರ್ಯದರ್ಶಿ ಆಗಿದ್ದೆ. ಆಗ ನನ್ನ ನೇರ ನಿಲುವು ಕಂಡ ಇಂದಿರಾಗಾಂಧಿ ನನ್ನನ್ನ ವಜಾಗೊಳಿಸಿದ್ದರು. ನನ್ನದೇನಿದ್ದರೂ ನೇರ ಮಾತು. ಇದು ಬಹಳಷ್ಟು ಮಂದಿಗೆ ಹಿಡಿಸಿರಲಿಲ್ಲ. ತುರ್ತು ಪರಿಸ್ಥಿತಿ ಮುಗಿದ ನಂತರ ನಾನು ಅದೇ ಇಂದಿರಾಗಾಂಧಿಯವರಿಂದ ಪುನಃ ಸ್ಥಾಪಿಸಲ್ಪಟ್ಟೆ.

**ಅಭಿಮತ :** ಕರ್ನಾಟಕ ಸಂಘದ ಜೊತೆ ನಿಮ್ಮ ಸಹಯೋಗ? ನಿಮ್ಮ ಸಂದೇಶ?

**ಎಂ. ವೀರಪ್ಪ :** ಸಾವಿರಾರು ಮೈಲಿ ದೂರದಿಂದ ಬಂದಿರೋ ನಮಗೆ ನಮ್ಮ ಸಂಸ್ಕೃತಿಯನ್ನು ಜೀವಂತ ಉಳಿಸಿಕೊಳ್ಳೋದೇ ಒಂದು ಸಂತೋಷದ ಮಾತು. ಹೀಗಾಗಿ ನಾನು 1986–87ರ ಅವಧಿಗೆ ಉಪಾಧ್ಯಕ್ಷನಾಗಿ ಸೇವೆ ಸಲ್ಲಿಸಿದೆ. ಆಗ ಗೋಪಾಲ ಶಾಸ್ತ್ರಿ ಅಧ್ಯಕ್ಷರಾಗಿದ್ದರು, ಕೆ.ಆರ್. ನಾಗರಾಜರು ಕಾರ್ಯದರ್ಶಿಗಳಾಗಿದ್ದರು. ನಮ್ಮಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಕೆಲಸ ಮಾಡುವಾಗ ಮಾತ್ರ ನಾವೆಲ್ಲ ಸೇರಿ ದುಡಿದಿದ್ದೇವೆ. ಕನ್ನಡ ಶಾಲೆಯಲ್ಲೂ 1989–91ರ ಸಾಲಿನಲ್ಲಿ ಅಧ್ಯಕ್ಷನಾಗಿ ಸೇವೆ ಸಲ್ಲಿಸಿದ್ದೇನೆ. ನನ್ನ ಸಂದೇಶ ಇಷ್ಟೇ ಸಾರ್ವಜನಿಕ ಸೇವೆಗಳಲ್ಲಿರುವಾಗ ನಾವು ಪ್ರಾಮಾಣಿಕರಾಗಿರಬೇಕು. ಪರಿಶ್ರಮಿಗಳಾಗಿರಬೇಕು. ಸಮಾಜಕ್ಕಾಗಿ ನಾವು, ನಮಗಾಗಿ ಸಮಾಜ.

❑ *ಸಂತೋಷ್ ಕುಮಾರ್ ಉಪಾಧ್ಯಾಯ*

# ದೆಹಲಿ ಜೀವನ–ಕನ್ನಡ ಸ್ಪಂದ

63 ವರ್ಷಗಳ ಸುದೀರ್ಘ ಚರಿತ್ರೆಯ ದೆಹಲಿ ಕರ್ನಾಟಕ ಸಂಘದ ಪುಟಗಳಲ್ಲಿ ಹಲವಾರು ಗಣ್ಯರ ಅನುಪಮ ಸೇವೆ, ಕೊಡುಗೆ, ಕಾಣಿಕೆ ಈಗಾಗಲೇ ದಾಖಲಾಗಿದೆ. ಸಂಸ್ಥಾಪಕ ಅಧ್ಯಕ್ಷೆ ಡಾ. ಸರೋಜಿನಿ ಮಹಿಷಿ, ಜಿ.ವೈ. ಕೃಷ್ಣನ್, ಗೋಪಾಲ ಶಾಸ್ತ್ರಿ, ಎನ್.ಪಿ. ಭಟ್, ರಾಮಮೋಹನ್ ರಾವ್, ಎ.ಪಿ. ಕುಮಟಾಕರ್, ಕೆ.ಆರ್. ನಾಗರಾಜ ಮೊದಲಾದ ಪ್ರಾತಃಸ್ಮರಣೀಯರ ಪರಿಶ್ರಮದ ಫಲವಾಗಿ ಇಂದು ದೆಹಲಿ ಕರ್ನಾಟಕ ಸಂಘ ರಾಷ್ಟ್ರದ ರಾಜಧಾನಿಯಲ್ಲಿ ಭವ್ಯ ಕಟ್ಟಡದೊಂದಿಗೆ ಹೊರನಾಡ ಕನ್ನಡಿಗರ ಹೆಮ್ಮೆಯ ಪ್ರತೀಕವಾಗಿದೆ. ಈ ಹಾದಿಯಲ್ಲಿ ಹಲವಾರು ಕನ್ನಡಿಗರ ಸೇವೆ ಅವಿಸ್ಮರಣೀಯ. ದೆಹಲಿಗೆ ವೃತ್ತಿಯ ಸಲುವಾಗಿ ಬಂದ ಕನ್ನಡಿಗರಲ್ಲದೇ, ಇಲ್ಲಿಯೇ ನೆಲೆಯೂರಿ ನಿಂತ ಹಲವು ಕನ್ನಡ ಕುಟುಂಬಗಳ ಕಾಣಿಕೆಯೂ ಕೂಡ ಅಪಾರವಾದದ್ದು. ಅಂತಹ ಹಲವಾರು ಹಿರಿಯ ದೆಹಲಿ ಕನ್ನಡಿಗರಲ್ಲಿ ಒಬ್ಬರು ಶ್ರೀಮತಿ ಸುಮಿತ್ರಾ ರಾವ್ ಅವರು. ಸುಮಾರು ಮೂರುವರೆ ದಶಕಗಳಿಗೂ ಮಿಗಿಲಾಗಿ ದೆಹಲಿಯಲ್ಲಿಯೇ ವಾಸ್ತವ್ಯ ಹೂಡಿದ ಶ್ರೀಮತಿ ಸುಮಿತ್ರಾ ರಾವ್ ಅವರ ಪತಿ ಶ್ರೀ ಬಿ.ಕೆ. ಆರ್. ರಾವ್ ಅವರು ನಾಗರಿಕ ವಿಮಾನ ಯಾನ ಇಲಾಖೆಯಲ್ಲಿ ವೃತ್ತಿಯ ಸಲುವಾಗಿ ಬಂದವರು. ಮುಂಬೈ, ಇಂದೋರ್, ಮದ್ರಾಸ್, ಪಾಟ್ನಾ ನಗರಗಳಲ್ಲಿ ಸೇವೆ ಸಲ್ಲಿಸಿದ ರಾವ್ ಅವರು ದೆಹಲಿಗೆ ಬಂದ ನಂತರ ಇಲ್ಲಿಯೇ ನೆಲೆಸಿದರು.

1938ರಲ್ಲಿ ಹೊಳೆ ನರಸೀಪುರದಲ್ಲಿ ಜನಿಸಿದ ಸುಮಿತ್ರಾ ಅವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೊಳೆ ನರಸೀಪುರದಲ್ಲಿ ಪಡೆದರು. ನಂತರ ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಪದವಿ ಪಡೆದ ಸುಮಿತ್ರಾ ಅವರು ತಮ್ಮ ಕಾಲೇಜಿನ ದಿನಗಳಲ್ಲಿ ಉತ್ತಮ ಕ್ರೀಡಾ ಪಟು. ಥ್ರೋ ಬಾಲ್ ಮತ್ತು ಬ್ಯಾಸ್ಕೆಟ್ ಬಾಲ್ ಪಂದ್ಯಗಳಲ್ಲಿ ಅಂತರ ಕಾಲೇಜು ಹಾಗೂ ಅಂತರ ರಾಜ್ಯ ಮಟ್ಟದಲ್ಲಿ ಹಲವಾರು ಬಹುಮಾನಗಳನ್ನು ಪಡೆದಿದ್ದಾರೆ. ಅಲ್ಲದೆ ಬೆಂಗಳೂರಿನ ಪ್ರಪ್ರಥಮ ಮಹಿಳಾ ಎನ್.ಸಿ.ಸಿ. ತಂಡದ ಸದಸ್ಯೆಯೆಂಬ ಹೆಗ್ಗಳಿಕೆ ಇವರದ್ದು. 53 ವರ್ಷಗಳ ಸುಖೀ ದಾಂಪತ್ಯ ಜೀವನವನ್ನು ನಡೆಸುತ್ತಿರುವ ರಾವ್ ದಂಪತಿಗಳ ಮಗ ದೀಪಕ್ ರಾವ್ ದುಬೈನಲ್ಲಿ, ಹಿರಿಯ ಮಗಳು ಕಲ್ಪನಾ ಮುಂಬೈನಲ್ಲಿ ಹಾಗೂ ಕಿರಿಯ ಮಗಳಾದ ಸಾಧನಾ ರಾವ್ ದೆಹಲಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.



ಸುಮಿತ್ರಾರಾವ್

1958ರಲ್ಲಿ ರಾವ್ ಅವರನ್ನು ವಿವಾಹವಾದ ಸುಮಿತ್ರಾ ಅವರು ಪತಿಯೊಡನೆ ದೇಶದ ಹಲವಾರು ಪ್ರಮುಖ ನಗರಗಳಲ್ಲಿ ವಾಸಿಸಿದರು. ಅವರ ತಾಯಿ ಜಯಮ್ಮನವರು ಶಿಶು ವಿಹಾರ ಹಾಗೂ ಮಹಿಳಾ ಸೇವಾ ಸಮಾಜಗಳನ್ನು ಸ್ಥಾಪಿಸಿ ಸೇವೆ ಮಾಡಿದವರು. ತಾಯಿಯವರ ಸಮಾಜ ಸೇವೆಯ ಸ್ಫೂರ್ತಿಯ ಫಲವೆಂಬಂತೆ ಸುಮಿತ್ರಾ ಅವರೂ ಕೂಡಾ ಮೊದಲಿನಿಂದಲೂ ತಾವಿದ್ದ ಕಡೆಯಲ್ಲೆಲ್ಲಾ ಸಮಾಜ ಸೇವೆ ಹಾಗೂ ಕನ್ನಡ ಸಂಘಟನೆಗೆ ಎಂದೆಂದೂ ಮುಂದು. ಕನ್ನಡಿಗರನ್ನೆಲ್ಲಾ ಒಂದುಗೂಡಿಸಿ ಕನ್ನಡದ ವಾತಾವರಣವನ್ನು ಸೃಷ್ಟಿಸಿಕೊಳ್ಳುವ ಪ್ರವೃತ್ತಿವುಳ್ಳ ಸುಮಿತ್ರಾ ಅವರಿಗೆ ದೆಹಲಿ ಅಪರಿಚಿತವೆನಿಸಲೇ ಇಲ್ಲ.

ಕಳೆದ 30 ವರ್ಷಗಳಿಂದಲೂ ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಾಲೆ ಅಲ್ಲದೇ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಜೊತೆಗೆ ನಿಕಟ ಸಂಪರ್ಕ ಹೊಂದಿದ್ದಾರೆ. ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನ



ಜ್ಞಾನಪೀಠ ಪುರಸ್ಕೃತ ಗಿರೀಶ್ ಕಾರ್ನಾಡ್ ಅವರೊಡನೆ ಸುಮಿತ್ರಾರಾವ್ ಮತ್ತು ಜ್ಯೋತ್ಸ್ನಾರಾವ್



ಚಲನಚಿತ್ರ ರಂಗದಲ್ಲಿ 50 ವರ್ಷ ಪೂರೈಸಿ
ಬೆಂಗಳೂರಿನ ನಿವಾಸದಲ್ಲಿ

# ನ–ಶ್ರೀಮತಿ ಸುಮಿತ್ರಾ ರಾವ್



ದಂಪತಿಗಳು

ಸ್ಥಾಪಕ ಸದಸ್ಯೆಯಾಗಿ 25ನೇ ವರ್ಷದ ರಜತ ಮಹೋತ್ಸವ ಹಾಗೂ 30ನೇ ವರ್ಷದ ವಾರ್ಷಿಕೋತ್ಸವ ಸಮಾರಂಭವನ್ನು ಅದ್ದೂರಿಯಾಗಿ ಆಯೋಜಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನಲ್ಲಿ ಸಕ್ರಿಯವಾಗಿ ಇಂದಿಗೂ ಪಾಲ್ಗೊಳ್ಳುತ್ತಾ ಎಲ್ಲರನ್ನೂ ಹುರಿದುಂಬಿಸುತ್ತಾ ಮಾರ್ಗದರ್ಶನ ನೀಡುತ್ತಾ ಬಂದಿರುವ ಉತ್ಸಾಹಿ ಸುಮಿತ್ರಾ ಅವರು ಇತರ ಮಹಿಳಾ ಸದಸ್ಯೆಯರಿಗೆ ಮಾದರಿಯಾಗಿದ್ದಾರೆ. ಲೇಡಿಸ್ ಅಸೋಸಿಯೇಶನ್‌ನ ಕಾರ್ಯದರ್ಶಿ, ಉಪಾಧ್ಯಕ್ಷೆ ಹಾಗೂ ಅಧ್ಯಕ್ಷೆಯಾಗಿ ಹಲವಾರು ಆರೋಗ್ಯ ಶಿಬಿರ, ಕ್ರೀಡೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿದ್ದಾರೆ.



ದ ದಿ. ಡಾ. ರಾಜ್‌ಕುಮಾರ್ ಅವರಿಗೆ ಸನ್ಮಾನಿಸಿದ ಸಂದರ್ಭ

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯೆ, ಜಂಟಿ ಕಾರ್ಯದರ್ಶಿ ಹಾಗೂ 1997–99 ಮತ್ತು 2002–2004ರಲ್ಲಿ 2 ಬಾರಿ ಉಪಾಧ್ಯಕ್ಷೆಯಾಗಿ, ಗೋಪಾಲ ಶಾಸ್ತ್ರಿ, ರಾಮಮೋಹನ್ ರಾವ್, ಎನ್.ಜೆ. ಕಾಮತ್, ಕೆ.ಆರ್. ನಾಗರಾಜ, ಜ್ಯೋತ್ಸ್ನಾ ರಾವ್, ಎಸ್.ಜಿ. ಹೆಗಡೆ, ವೆಂಕಟಾಚಲ ಹೆಗಡೆ ಮೊದಲಾದವರ ಜೊತೆಗೂಡಿ ಕನ್ನಡಕ್ಕಾಗಿ ಸೇವೆ ಸಲ್ಲಿಸಿದ್ದಾರೆ. ಅಂದಿನ ದಿನಗಳಲ್ಲಿ ವಿರಳವಾಗಿದ್ದ ಸದಸ್ಯರ ಸಂಖ್ಯೆಯನ್ನು ತಮ್ಮ ಬಿಡುವಿಲ್ಲದ ಸಮಯದ ನಡುವೆಯೂ ಅಧಿಕಗೊಳಿಸುವ ಮಹತ್ತರ ಕಾರ್ಯವನ್ನು ಸುಮಿತ್ರಾ ಅವರು ಮಾಡಿದ್ದಾರೆ. ಸಂಘದ ಸುವರ್ಣ ಮಹೋತ್ಸವದ ವೈಭವ ಸಮಾರಂಭದಲ್ಲಿ ಅತ್ಯುತ್ಸಾಹ, ಸಡಗರ, ಸಂಭ್ರಮದಿಂದ ಪಾಲ್ಗೊಂಡಿದ್ದನ್ನು ಸುಮಿತ್ರಾ ಅವರು ಇಂದಿಗೂ ಸಂತಸದಿಂದ ಸ್ಮರಿಸುತ್ತಾರೆ. "ವಾರ್ಷಿಕೋತ್ಸವ ಸಮಾರಂಭ ಅನ್ನೋದು ಮನೆಯ ಕಾರ್ಯಕ್ರಮವೇ ಅನ್ನೋವಷ್ಟು ಸಡಗರ, ಸಂಭ್ರಮ. ಸ್ಪರ್ಧೆಗಳನ್ನು ಏರ್ಪಡಿಸೋದು, ಸ್ವತಃ ಹೋಗಿ ಬಹುಮಾನ ತರೋದು, ಕಾರ್ಯಕ್ರಮದಲ್ಲಿ ಭಾಗವಹಿಸೋದು ನಿಜಕ್ಕೂ ಎರಡು ದಿನಗಳ ಮರೆಯಲಾರದ ಅನುಭವ. ಸಮಿತಿಯ ಪದಾಧಿಕಾರಿಗಳೇ ಅಲ್ಲದೇ ಬೇರೆಯವ್ರು ಕೂಡಾ ಹುಮ್ಮಸ್ಸಿನಿಂದ ಪಾಲ್ಗೊಳ್ಳುತ್ತಿದ್ದದ್ದು ಒಂದು ವಿಶೇಷವಾಗಿತ್ತು. ಯಾವುದೇ ಜಾತೀಯತೆ, ಪ್ರಾಂತೀಯತೆಯ ಬೇಧ ಭಾವವಿಲ್ಲದೇ ಆತ್ಮೀಯತೆಯಿಂದ ಒಗ್ಗಟ್ಟಾಗಿ ಒಂದೇ ಕುಟುಂಬದವರಂತೆ ಎಲ್ಲರೂ ಪಾಲ್ಗೊಳ್ಳುತ್ತಿದ್ರು" ಎನ್ನುತ್ತಾರೆ ಸುಮಿತ್ರಾ.

ನೂತನ ಸಾಂಸ್ಕೃತಿಕ ಸಮುಚ್ಚಯದ ಕನಸಿಗೆ ಮೂರ್ತ ಸ್ವರೂಪ ನೀಡುವ ನಿಟ್ಟಿನಲ್ಲಿ ಕೆ.ಆರ್. ನಾಗರಾಜರ ಜೊತೆಗೂಡಿ ತಮ್ಮಿಂದಾದ ಸೇವೆಯನ್ನು ಸಲ್ಲಿಸಿರುವ ಬಗ್ಗೆ ತಮಗೆ ತೃಪ್ತಿ ಇದೆ ಎನ್ನುವ ಸುಮಿತ್ರಾ ಅವರು ಇಂದಿನ ತಲೆಮಾರಿನವರಿಗೆ ಅನುಕರಣೀಯರು. ನಾಡಿನಿಂದ ಸಾವಿರಾರು ಮೈಲಿ ದೂರವಿರುವ ಎಲ್ಲ ಕನ್ನಡಿಗರು ಯಾವುದೇ ಗುಂಪುಗಾರಿಕೆಯಿಲ್ಲದೇ ಒಗ್ಗಟ್ಟಾಗಿ ಕನ್ನಡ ಸಂಸ್ಕೃತಿಯ ಹಿರಿಮೆಯನ್ನು ಉಳಿಸಿಕೊಂಡು ಹೋಗಬೇಕು ಎನ್ನುವುದೇ ಸುಮಿತ್ರಾ ಅವರ ಆಶಯ.

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಪರ ಚಟುವಟಿಕೆಗಳಲ್ಲಿ ನಿರಂತರವಾಗಿ ಪಾಲ್ಗೊಳ್ಳುತ್ತಿರುವ 73ರ ಹರೆಯದ ಉತ್ಸಾಹಿ ಮಹಿಳೆ ಸುಮಿತ್ರಾ ರಾವ್ ಅವರನ್ನು 2011ರ ಸಾಲಿನ ದೆಹಲಿ ಕರ್ನಾಟಕ ಸಂಘದ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಗಾಗಿ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕವಾಗಿ ಅಭಿನಂದಿಸುತ್ತೇವೆ.

❑ *ಉಷಾ ಭರತಾದ್ರಿ*



ಕರ್ನಾಟಕ ಸಂಘದ ಸುವರ್ಣ ಮಹೋತ್ಸವದಲ್ಲಿ ಗಣ್ಯರೊಡನೆ

# ಏಕೀಕರಣ ಎಂದರೇನು? ಅದು ಹೇಗಾಯಿತು?

ಕರ್ನಾಟಕ ಏಕೀಕರಣ ಎಂದರೇನು? ಇದು ಏಕಾಯಿತು, ಹೇಗಾಯಿತು? ನವೆಂಬರ್ 1 (1956) ಏಕೀಕರಣದ ಸಾಧನೆಯಾದ ದಿನ, ಇದಕ್ಕೆ ಐವತ್ತು ವರ್ಷಗಳ ಪ್ರಚಾರ, ದುಡಿಮೆ, ಹೋರಾಟ ಸಾಗಿತ್ತು. ಇಂದಿಗೆ 100 ವರ್ಷಗಳ ಹಿಂದೆ ಕರ್ನಾಟಕವೆಂಬ ಒಂದು ರಾಜ್ಯವಾದೀತೆಂದು ಊಹಿಸುವಂತಿರಲಿಲ್ಲ! ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮವಾಗಿ ಬ್ರಿಟಿಸರು ಈ ದೇಶ ಬಿಟ್ಟು ಹೋದಾರೆಂದು ಹೇಳುವ ಖಚಿತತೆ ಇರಲೇ ಇಲ್ಲ. ಬ್ರಿಟಿಷರು ದೇಶ ಬಿಟ್ಟು ಹೋದರೂ ಹಲವಾರು ಆಡಳಿತಗಳ ಸಿಕ್ಕುಗಳಿಂದ ಮುಕ್ತವಾಗಿ ಕರ್ನಾಟಕ ಒಂದೇ ರಾಜ್ಯವಾಗಿ ರೂಪುತಾಳಿ, ಏಕೀಕರಣದ ಸಾಧನೆಯಾಗುವುದು ಇನ್ನೂ ಕಷ್ಟದ ಕಲ್ಪನೆಯಾಗಿತ್ತು. ಕೇವಲ ಒಂದು ಕನಸಿನಂತೆ ಇತ್ತು.

ಕರ್ನಾಟಕದ ಶೇಕಡ 40 ರಷ್ಟು ಭಾಗ ಬ್ರಿಟಿಷರ ನೇರ ಆಡಳಿತಕ್ಕೆ ಒಳಪಟ್ಟು ಮೂರು ಘಟಕಗಳಲ್ಲಿ ಇತ್ತು. ಅವೆಂದರೆ ಮುಂಬೈ ಪ್ರೆಸಿಡೆನ್ಸಿ, ಮದ್ರಾಸ್ ಪ್ರೆಸಿಡೆನ್ಸಿ ಮತ್ತು ಕೊಡಗು, ಸುಮಾರು 18 ಭಾಗಗಳು ಬ್ರಿಟಿಷರಿಗೆ ಅಧೀನರಾದ ಸಂಸ್ಥಾನಿಕ (ರಾಜ)ರ ವಶದಲ್ಲಿದ್ದವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಮೈಸೂರು ಮತ್ತು ಹೈದರಾಬಾದ್. ಹೈದರಾಬಾದ್‌ನ 16 ಜಿಲ್ಲೆಗಳಲ್ಲಿ ಆಗಿನ ಮೂರು ಜಿಲ್ಲೆಗಳು ಕನ್ನಡಭಾಷಿಕವಾದವು. ಇದಲ್ಲದೆ, ರಾಮದುರ್ಗ, ಜಮಖಂಡಿ, ಮುಧೋಳ, ವಡಗಾಂವ್, ಸೊಂಡೂರು, ಸವಣೂರಿನಂಥ ಸಣ್ಣವಾದ ಇಡೀ ಸಂಸ್ಥಾನಗಳು, ಅಲ್ಲದೆ ಸಾಂಗಲಿಗೆ ಸೇರಿದ ಶಿರಹಟ್ಟಿ, ಷಾಪುರ, ಕೊಲ್ಲಾಪುರಕ್ಕೆ ಸೇರಿದ ರಾಯಭಾಗ, ಕಟಕೋಳ ಪ್ರದೇಶಗಳು, ಮಿರ್ಜಿಗೆ ಸೇರಿದ ಲಕ್ಷ್ಮೇಶ್ವರ, ಬುದಗಾಂವಿಗೆ ಸೇರಿದ ಗುಡಿಗೇರಿ, ಕಟಕೋಳ ಅಲ್ಲದೆ ಔಂಧ್‌ಗೆ ಸಂಸ್ಥಾನಕ್ಕೆ ಸೇರಿದ ಗುಣದಾಳು ಪರಿಸರ ಇತ್ಯಾದಿ. ಕುರಂದವಾಡ, ಜತ್ತ, ಅಕ್ಕಲಕೋಟೆ ಮುಂತಾದ ಸಂಸ್ಥಾನಗಳು ಕನ್ನಡ ಪ್ರದೇಶಗಳಾದರೂ ಮರಾಠಿಗೆ ಪ್ರಾಧಾನ್ಯವಿದ್ದ ಮುಂಬಯಿ ಪ್ರಾಂತದಲ್ಲಿ ಸೇರಿಹೋಗುವಂತಾಯಿತು. ಮೈಸೂರು ಸಂಸ್ಥಾನ ಬಿಟ್ಟು ಉಳಿದೆಲ್ಲ ಕಡೆ ಕನ್ನಡಿಗರು ಬಹು ಸಂಖ್ಯಾತರಾದರೂ ಆಡಳಿತ ಪರಭಾಷೆಗಳಲ್ಲಿ. ರಾಯೂರಿನಂಥ ಊರಿದ್ದ ಹೈದರಾಬಾದ್ ಸಂಸ್ಥಾನದಲ್ಲಿ ಉರ್ದುವಿಗೆ ಪ್ರಾಧಾನ್ಯ. ಜಮಖಂಡಿ, ಮುಧೋಳ, ರಾಮದುರ್ಗಗಳಲ್ಲಿ ಮರಾಠಿಗೇ ಪ್ರಾಧಾನ್ಯ. ಮುಂಬಯಿ ಪ್ರಾಂತ್ಯದಲ್ಲಿ ಮರಾಠಿ, ಗುಜರಾತಿಗಳದೇ ಮೇಲುಗೈ. ಮದ್ರಾಸ್ ಪ್ರಾಂತ್ಯದಲ್ಲಿ ತಮಿಳು, ತೆಲುಗರದೇ ಏರುಧ್ವನಿ. ಈ ಎರಡೂ ಪ್ರಾಂತ್ಯಗಳಲ್ಲಿ ಕನ್ನಡಿಗರು ಅಲ್ಪಸಂಖ್ಯಾತರು. ದೂರದ ರಾಣಿಬೆನ್ನೂರಿನ ಕೂಗು ಮುಂಬಯಿಯಲ್ಲಿರುವ ರಾಜ್ಯ ಕೇಂದ್ರಕ್ಕೆ ತಲುಪುವುದು ಬಲು ಕಷ್ಟ. ಅದೇ ರೀತಿ ದಕ್ಷಿಣ ಕನ್ನಡದ ಕುಂದಾಪುರ ಅಥವಾ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯ ಅಳಲು ಪ್ರಾಂತ್ಯ ಕೇಂದ್ರ ಮದ್ರಾಸಿಗೆ ತಲುಪುವುದು ತೊಡಕಿನ ಸಂಗತಿ.

ಅದೇ ರೀತಿ ಶಿರಹಟ್ಟಿಯ ಸಮಸ್ಯೆ ನೂರು ಮೈಲು ದೂರದ ಸಂಸ್ಥಾನ ಕೇಂದ್ರ ಸಾಂಗಲಿಗೆ, ಕುಂದಗೋಳದ ತಾಪತ್ರಯ ತಮ್ಮ ಆಡಳಿತ ಕೇಂದ್ರ ಜಮಖಂಡಿಗೆ, ಇಲ್ಲವೇ ಗುಣದಾಳುವಿನ ಕಷ್ಟ ಔಂಧ್‌ಗೆ ತಲುಪಲು ಸರಾಸರಿ ನೂರು ಮೈಲುಗಳ ಅಂತರ. ಈ ಭಾಗಗಳು ಮತ್ತು ತಮ್ಮ ಸಂಸ್ಥಾನಗಳ ಕೇಂದ್ರಗಳ ನಡುವೆ ಬೇರೆ ಆಡಳಿತಗಳಿಗೆ ಸೇರಿದ ಪ್ರದೇಶಗಳು. ಈಗಿನಂತೆ ಆಗ ಸಾರಿಗೆ ಅನುಕೂಲ ಇರಲಿಲ್ಲ. ಉದಾಃ ಕುಂದಗೋಳದಿಂದ ರೈಲಿನಲ್ಲಿ ಕುಡಚಿಗೆ, ಅಲ್ಲಿಂದ ಬಸ್ ಮೂಲಕ ಜಮಖಂಡಿಗೆ ಸಂಪರ್ಕ.

ಈ ಕನ್ನಡ ಪ್ರದೇಶಗಳಿಗೆ ಒಂದೇ ಆಖಂಡ ರಾಜ್ಯವಿರಬೇಕೆಂದು ಯೋಚಿಸಿದವರಾರು? ಯೋಚಿಸಿದರೂ ಕೇಳುವವರಾರು?

ಇಂಥ ಆಶಯಗಳನ್ನು (ಏಕೀಕರಣ) ಬೆನಗಲ್ ರಾಮರಾಯರು ಧಾರವಾಡದಲ್ಲಿ 1903ರಲ್ಲಿ, ಜಸ್ಟೀಸ್ ಸೆಟ್ಲೂರ್ ಅವರು ಅದೇ ರೀತಿ ಧಾರವಾಡದಲ್ಲೇ 1906ರಲ್ಲಿ ಭಾಷಣ ಮಾಡಿದ್ದರು. 1890ರಲ್ಲಿ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸ್ಥಾಪಿಸಿದ ರಾ.ಹ. ದೇಶಪಾಂಡೆ ಎಂಬ ಸರಕಾರಿ ಶಾಲೆಯ ಮಾಸ್ತರರನ್ನು ಆ ಭಾಗದಲ್ಲಿ ಪ್ರಭಾವಿಗಳಾಗಿದ್ದ ಮರಾಠಿ ಅಧಿಕಾರಿಗಳು ದೂರದ ಊರುಗಳಿಗೆ ವರ್ಗಾಯಿಸಿದ್ದರು! ಕನ್ನಡದ ಕೆಲಸ ಮಾಡುವವರಿಗೆ ಇಂಥ ತಾತ್ಸಾರ, ಹಿಂಸೆ.

ಇಡೀ ದೇಶದಲ್ಲಿ 1905ರಲ್ಲಿ ಬಂಗಾಲ ವಿಭಜನೆಯ ಬಗ್ಗೆ ಪ್ರತಿಭಟನೆ, ಸ್ವದೇಶೀ ಚಳವಳಿಗೆ ತಯಾರಿ ನಡೆಯಿತು. ಆಗ ತಮ್ಮ ವಕೀಲಿ ಶಿಕ್ಷಣ ಮುಗಿಸಿ, ಪುಣೆ, ಮುಂಬಯಿಯಂಥ ರಾಷ್ಟ್ರೀಯ ಚಳವಳಿಯ ಗಣ್ಯ ಕೇಂದ್ರಗಳಲ್ಲಿನ ರಾಷ್ಟ್ರೀಯ ಚಟುವಟಿಕೆಗಳನ್ನು ಕಣ್ಣಾರೆ ಕಂಡು, ಧಾರವಾಡದಲ್ಲಿ ನೆಲೆಸಿ ವಕೀಲಿ ಹಾಗೂ ರಾಷ್ಟ್ರೀಯ ಚಟುವಟಿಕೆ ಕೈಗೊಳ್ಳಲು ಬಂದ ತರುಣ ಆಲೂರು ವೆಂಕಟರಾಯರಿಗೆ ಕಾದಿತ್ತು ಆಘಾತ (ಶಾಕ್)!

ಲಾಲ್, ಬಾಲ್, ಪಾಲ್ ಎಂಬ ನಾಯಕರ ನೇತೃತ್ವದಲ್ಲಿ ಅನುಕ್ರಮವಾಗಿ ಪಂಜಾಬ್, ಮಹಾರಾಷ್ಟ್ರ, ಬಂಗಾಳಗಳಲ್ಲಿ ಉಗ್ರ ಸ್ವದೇಶಿ ಚಳವಳಿ ನಡೆದು ಮುಂದೆ ಜನರು ಲಾಟಿ ಏಟು, ಗುಂಡಿನೇಟು, ಜೈಲುವಾಸ ಅನುಭವಿಸಲು ಸಿದ್ಧರಾದ ವಾತಾವರಣ ಇರಲಿಲ್ಲ. ಕರ್ನಾಟಕ ಏಕೆ ಹೀಗೆ ತಣ್ಣಗಿದೆ? ದೀರ್ಘ ಕಾಲ ಈ ಬಗ್ಗೆ ಚಿಂತಿಸಿದ ಆಲೂರರು, ಒಮ್ಮೆ ಹೊಸಪೇಟೆಯಲ್ಲಿರುವ ನವವೃಂದಾವನ ಎಂಬ ಪುಣ್ಯಕ್ಷೇತ್ರಕ್ಕೆ ಯಾತ್ರೆಗೆ ಹೋಗಲು ಅಲ್ಲಿ ಕಂಡ ಹಂಪೆ ವಿರೂಪಾಕ್ಷನ ಗೋಪುರ ಕಂಡು ಅದೇನೆಂದು ಕೇಳಿ, ಅಲ್ಲಿ ನೆರೆದಿದ್ದ ಜನರ ನಗೆಗೀಡಾದರು! ವಿಜಯನಗರದ ವಿಶಾಲ ಸಾಮ್ರಾಜ್ಯ ಕನ್ನಡಿಗರ ಸಾಧನೆ, ರಾಜಧಾನಿ ವಿಜಯನಗರ ಕರ್ನಾಟಕದ ಹಂಪೆಯಲ್ಲಿದೆ ಎಂದು ಅವರಿಗೆ ತಿಳಿದೇ ಇರಲಿಲ್ಲ!

ಹಂಪೆಯನ್ನು ಸುತ್ತುಹಾಕಿ ಅದರ ಗತವೈಭವದಿಂದ ಅವರು ತೀರಾ ಉತ್‌ಸ್ಫೂರ್ತರಾದರು. ಅದು ಮೇ 5, 1905. ಇಡೀ ಭಾರತದ ಸೇವೆ ತನ್ನದಾಗದಿದ್ದರೂ ಕರ್ನಾಟಕದ ಸೇವೆ ಮಾಡಬೇಕೆಂದು ಕೊನೆಯ ನಿರ್ಣಯಕ್ಕೆ ಬಂದರು. 'ಕರ್ನಾಟಂತರ್ಯಾಮಿ ಭಾರತ ಮಾತೆಯ ಸೇವೆ' ಮಾಡಬೇಕೆಂದು ಅವರು ಕರ್ನಾಟಕದ ಇತಿಹಾಸ ಕನ್ನಡಿಗರಿಗೆ ತಿಳಿಸಿ ಹೇಳಲೆಂದು 12 ವರ್ಷ ಅಧ್ಯಯನ ಮಾಡಿ 'ಕರ್ನಾಟಕ ಗತವೈಭವ' (1917) ಬರೆದರು. ಆಗಲೇ 'ವಾಗ್ಭೂಷಣ' ಪತ್ರಿಕೆಯಲ್ಲಿ ಕನ್ನಡ ಭಾಷಿಕ ಪ್ರಾಂತ್ಯಗಳನ್ನು ಒಂದುಗೂಡಿಸಬೇಕೆಂದು 1907ರಲ್ಲಿ ಲೇಖನ ಬರೆದರು. ಅಲ್ಲದೆ 1907 ಮತ್ತು 1908ರಲ್ಲಿ ಧಾರವಾಡದಲ್ಲಿ ಕನ್ನಡ ಗ್ರಂಥಕರ್ತರ ಸಮ್ಮೇಳನ ಏರ್ಪಡಿಸಿ ಕರ್ನಾಟಕ ವಿಚಾರವಂತರನ್ನು ಒಗ್ಗೂಡಿಸಲು ವಿದ್ಯಾವರ್ಧಕ ಸಂಘದ ಮೂಲಕ ಯತ್ನಿಸಿದರು.

ಮೈಸೂರಲ್ಲಿ ಸರಕಾರದ ಎಂಜಿನಿಯರ್ ಆಗಿದ್ದ ಕರ್ಪೂರ ಶ್ರೀನಿವಾಸರಾಯರು ಹಾಗೂ ದಿವಾನ್ ಎಂ. ವಿಶ್ವೇಶ್ವರಯ್ಯ ಅವರ ನೆರವಿನಿಂದ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಆರಂಭಿಸಲು ಯತ್ನಿಸಿ, ಕನ್ನಡ ಸಾಹಿತ್ಯ ಸಮ್ಮೇಳನ ಪ್ರತಿವರ್ಷ ನಡೆಸುವಂತಾಗಿ (1915) ಬೆಂಗಳೂರು, ಮೈಸೂರು, ಧಾರವಾಡ ಹಾಗೂ ನಾಡಿನ ಮೂಲೆ ಮೂಲೆಗಳಲ್ಲಿ ಪ್ರತಿವರ್ಷ ಸಮ್ಮೇಳನಗಳು ನಡೆದು ಮಂಗಳೂರು, ಕಾಸರಗೋಡು, ಕಲ್ಯಾಣ, ಜಮಖಂಡಿ, ಗೋಕಾಕ್, ಉಡುಪಿ, ಮಡಿಕೇರಿ, ಕಲ್ಬುರ್ಗಿ, ಕೊಳ್ಳೆಗಾಲ, ಶಿವಮೊಗ್ಗ, ತೇರದಾಳ, ಶೇಡಬಾಳ, ಮುಧೋಳಗಳಂಥ ದೂರದೂರದ ಊರಿನ ಕನ್ನಡಾಭಿಮಾನಿಗಳೂ, ಸಾಹಿತಿಗಳೂ, ಪತ್ರಕರ್ತರೂ ಪ್ರತಿವರ್ಷ ಒಂದು ವೇದಿಕೆಯ ಮೇಲೆ ಬರುವಂತೆ ಆಯಿತು. ಬುದ್ಧಿಜೀವಿಗಳ ಮನದಲ್ಲಿ ಮೂಡಿದ ಕನ್ನಡ, ಕರ್ನಾಟಕತ್ವ, ಏಕೀಕರಣದ ಕೂಗು ರಾಜಕಾರಣಿಗಳೂ ಮೆಚ್ಚುವಂತಾಯಿತು. ರಾಮಕೃಷ್ಣ ಕಾರಂತ ಜಿನರಾಜ ಹೆಗ್ಗಡೆ, ಸಿದ್ದಪ್ಪಕಂಬಳಿ ಇಂಥವರಲ್ಲಿ ಕೆಲವರು.

ಟಿಳಕರು ಆರಂಭಿಸಿದ ಹೋಂ ರೂಲ್ ಲೀಗಿನ ಕರ್ನಾಟಕ ಪ್ರಾಂತೀಯ ಘಟಕ ಇರಬೇಕೆಂದು ಒತ್ತಾಯಿಸಿ ಆಲೂರರು ಯಶಸ್ವಿಯಾದರು. ಬೆಳಗಾವಿಯ ದತ್ತೋಪಂತ ಬೆಳವಿ ಈ ಘಟಕದ ಅಧ್ಯಕ್ಷರಾದರು (1916). ಕಾಂಗ್ರೆಸ್ ಪಕ್ಷದ ಕರ್ನಾಟಕ ಘಟಕ ಇರಬೇಕೆಂದು ನಾಗಪುರ ಅಧಿವೇಶನದಲ್ಲಿ (1920) ಒತ್ತಾಯಿಸಿ ಕೆ.ಸಿ.ಸಿ. ಸ್ಥಾಪನೆ ಆಗಿ ಬೆಳಗಾವಿಯ ಗಂಗಾಧರರಾವ್ ದೇಶಪಾಂಡೆ ಈ ಘಟಕದ ಅಧ್ಯಕ್ಷರಾದರು. ದೇಶದ ಗಣ್ಯ ರಾಜಕೀಯ ನಾಯಕರಿಗೆ ಪ್ರತ್ಯೇಕ ಕರ್ನಾಟಕದ ಬೇಡಿಕೆ ಇದರಿಂದ ಮನವರಿಕೆ ಆಯಿತು.

ಇದಲ್ಲದೆ 1914ರಲ್ಲಿ ಧಾರವಾಡದಲ್ಲಿ ಕರ್ನಾಟಕ ಇತಿಹಾಸ ಮಂಡಲ ಸ್ಥಾಪಿಸಿ, 1916ರಲ್ಲಿ ಏಕೀಕರಣಕ್ಕೆ ದುಡಿಯುವ ಕರ್ನಾಟಕ ಏಕೀಕರಣ ಸಭಾ ಆರಂಭಿಸಿ ಕನ್ನಡಿಗರಲ್ಲಿ ಕರ್ನಾಟಕದ ಜಾಗೃತಿಗೆ ನೆರವಾಗಿರುವ ಹಲವಾರು ಉತ್ಸವಗಳನ್ನು ಆಲೂರರು ಏರ್ಪಡಿಸಿದರು. ವಿದ್ಯಾರಣ್ಯರ ಉತ್ಸವ, ಬಸವೇಶ್ವರ, ನಿಜಗುಣ ಶಿವಯೋಗಿ, ಪಂಪ, ಕುಮಾರವ್ಯಾಸ ಇತ್ಯಾದಿ ಉತ್ಸವಗಳನ್ನು ಬೇರೆ ಬೇರೆ ಊರುಗಳಲ್ಲಿ ಸಂಘಟಿಸಲು ಕಾರಣರಾದರು. 1936ರಲ್ಲಿ ಹಂಪೆಯಲ್ಲಿ

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಷಟ್‌ಶತಮಾನ ಉತ್ಸವವಾಯಿತು. ಇದರಿಂದ 'ಕರ್ನಾಟಕ ಕುಲಪುರೋಹಿತ'ರೆನಿಸಿದರು. ವಾರ್ಷಿಕ ಸಾಹಿತ್ಯ ಸಮ್ಮೇಳನಗಳ ಜತೆಗೆ ಇತಿಹಾಸ ಸಮ್ಮೇಳನಗಳನ್ನೂ ನಡೆಸುವ ಕಾಯಕ ಮಾಡಿದರು. ಕನ್ನಡ ಸಾಹಿತ್ಯದ ಜತೆಗೆ ಕನ್ನಡ ಪತ್ರಿಕೆಗಳೂ ಕರ್ನಾಟಕತ್ವದ ಜಾಗೃತಿಗೆ ನೆರವಾದವು. ಇದರಲ್ಲಿ ಮೈಸೂರಿನ ಸಾಧ್ವಿ, ಬೆಂಗಳೂರಿನ ತಾಯಿನಾಡು, ವಿಶ್ವಕರ್ನಾಟಕ ಹಾಗೂ ಜನಜೀವನ, ವಿಜಾಪುರದ ಕರ್ನಾಟಕ ವೈಭವ, ಬಾಗಲಕೋಟದ ಕನ್ನಡಿಗ, ಸದ್ಬೋಧ ಚಂದ್ರಿಕೆ (ಮಾಸಿಕ), ಧಾರವಾಡದ ಚಂದ್ರೋದಯ, ವಿಜಯ ಕರ್ನಾಟಕ ವೃತ್ತ, ಹುಬ್ಬಳ್ಳಿಯ ಕರ್ಮವೀರ, ಆಲೂರರೇ ಆರಂಭಿಸಿದ ಜಯಕರ್ನಾಟಕ (ಮಾಸಿಕ), ಮಂಗಳೂರಿನ ಕಂಠೀರವ, ಉಡುಪಿಯ ನವಯುಗ, ಕುಮಟಾದ ಕಾನಡಾವೃತ್ತ ಇಂಥ ಕೆಲವು ಉಲ್ಲೇಖನೀಯ ಪತ್ರಿಕೆಗಳು.

ಏಕೀಕರಣದ ಕೂಗು ಸ್ವತಂತ್ರ್ಯ ಚಳವಳಿಯ ಜತೆಗೇ ಸಾಗಿತು. 1924ರಲ್ಲಿ ಕೆಪಿಸಿಸಿ ಏರ್ಪಡಿಸಿದ್ದ ಬೆಳಗಾವಿಯ ಅ.ಭಾ. ಕಾಂಗ್ರೆಸ್ ಅಧಿವೇಶನ ನಡೆದಾಗ ಪ್ರಥಮ ಏಕೀಕರಣ ಸಮ್ಮೇಳನವೂ ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆಯಲ್ಲಿ ಆಯಿತು.

1947ರಲ್ಲಿ ಸ್ವಾತಂತ್ರ್ಯ ಬಂತು. ಆದರೆ ಏಕೀಕರಣಕ್ಕೆ ಮತ್ತೆ ಹೋರಾಡಬೇಕಾಯಿತು. ಸಭೆ, ಸಮ್ಮೇಳನ, ಸತ್ಯಾಗ್ರಹ, ಜೈಲುಭರೋ ಆದವು. ಅದು ಇನ್ನೊಂದು ದೀರ್ಘಕತೆ, ನಮ್ಮದೇ ಕೇಂದ್ರ ಸರಕಾರದ ನಾಯಕರು ಸ್ವಾತಂತ್ರ್ಯ ಚಳವಳಿ ಉದ್ದಕ್ಕೂ ಬೆಂಬಲಿಸಿದ ಭಾಷಾವಾರು ಪ್ರಾಂತ್ಯ ರಚನಾ ಚಳವಳಿಯನ್ನು ಆಗ ಬೆಂಬಲಿಸಲಿಲ್ಲ. ಇದು ನಮ್ಮ ಸಾರ್ವಜನಿಕ ಜೀವನದ ವಿಪರ್ಯಾಸ! ಈಗಿನ ತೆಲಂಗಾಣ ಚಳವಳಿ ಕಡೆ ನೋಡಿ.

❑ *ಡಾ. ಸೂರ್ಯನಾಥ ಕಾಮತ್*

*ಕೃಪೆ : ವಿಜಯ ಕರ್ನಾಟಕ*

# ಹತ್ತೂರಲ್ಲೂ ಹಬ್ಬಲಿ ಕಿತ್ತೂರು ರಾಣಿ ಚೆನ್ನಮ್ಮಳ ಸಾಹಸಗಾಥೆ

ಉತ್ತರ ಭಾರತದಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ದಿಟ್ಟವಾಗಿ ಹೋರಾಡಿದ ಪ್ರಥಮ ಮಹಿಳೆಯೆಂದರೆ ಝಾನ್ಸಿ ರಾಣಿ ಲಕ್ಷ್ಮೀ ಬಾಯಿ ಎಂಬ ಅಭಿಪ್ರಾಯ ಹೆಚ್ಚಾಗಿ ಪ್ರಚಲಿತದಲ್ಲಿದೆ. ಆದರೆ ವಾಸ್ತವ ಈ ಅಭಿಪ್ರಾಯಕ್ಕೆ ವಿರುದ್ಧವಾಗಿದ್ದು ಬ್ರಿಟಿಷರ ವಿರುದ್ಧ ಮೊದಲ ಬಾರಿಗೆ ಕತ್ತಿ ಝಳಪಿಸಿದ ಮಹಿಳೆ ಎಂಬ ಗೌರವ ಕನ್ನಡದ ಹೆಮ್ಮೆಯ ವೀರ ಮಹಿಳೆ ಕಿತ್ತೂರು ಚೆನ್ನಮ್ಮಳದ್ದಾಗಿದೆ ಎಂಬುದನ್ನು ಇತಿಹಾಸ ಸಾರಿ ಸಾರಿ ಹೇಳುತ್ತದೆ.

ಝಾನ್ಸಿ ರಾಣಿ ಲಕ್ಷ್ಮೀ ಬಾಯಿ ಹುಟ್ಟುವ ಮೊದಲೇ (1835ರ ನವೆಂಬರ್ 19) ಚೆನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಡಿದ್ದಳು! ಆದರೆ ಲಕ್ಷ್ಮೀ ಬಾಯಿಯ ಹೋರಾಟ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857)ದ ಜೊತೆಗೆ ತಳುಕು ಹಾಕಿಕೊಂಡ ಕಾರಣ ಮತ್ತು ಆ ಸಂಧಿ ಕಾಲದ ಬಳಿಕ ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಹೊಸ ದಿಸೆ ಪ್ರಾಪ್ತವಾದುದ್ದರಿಂದ ಲಕ್ಷ್ಮೀ ಬಾಯಿಗೆ ಹೆಚ್ಚಿನ ಪ್ರಚಾರ ಮತ್ತು ಮಹತ್ವ ಸಿಕ್ಕಿತು. ಇದೇ ಸಂದರ್ಭದಲ್ಲಿ ಸ್ವರಾಜ್ಯ ಮತ್ತು ಸ್ವಾತಂತ್ರ್ಯದ ಕಿಡಿ ಹೊತ್ತಿಸಿದ ಕಿತ್ತೂರು ಚೆನ್ನಮ್ಮಳಿಗೆ ಸಲ್ಲಬೇಕಾದ ಪ್ರಾಮುಖ್ಯತೆ ಸಲ್ಲದೆ ಹೋದದ್ದು ವಿಪರ್ಯಾಸವೇ ಸರಿ.

ರಾಣಿ ಚೆನ್ನಮ್ಮ ಕಿತ್ತೂರಿನ ಪ್ರಸಿದ್ಧ ದೇಸಾಯಿ ಮಲ್ಲಸರ್ಜನ ಹೆಂಡತಿ.



ಗಾಜಿಯಾಬಾದ್‌ನ ಇಂದಿರಾಪುರಂನಲ್ಲಿರುವ ಸ್ವರ್ಣಜಯಂತಿ ಪಾರ್ಕಿನಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮರ ಪ್ರತಿಮೆ

ಆಕೆ ಹುಟ್ಟಿದ್ದು 1778ರಲ್ಲಿ ಬೆಳಗಾವಿಯಿಂದ ಸುಮಾರು 6 ಕಿ ಮೀ ದೂರದ ಕಾಕತಿಯಲ್ಲಿ. ಆಕೆ ಬಾಲ್ಯದಲ್ಲೇ ಯುದ್ಧ ಕಲೆಗಳಲ್ಲಿ ನಿಪುಣತೆ ಸಂಪಾದಿಸಿದ್ದಳು. ಮಲ್ಲಸರ್ಜನನ್ನು 'ಮೈಸೂರಿನ ಹುಲಿ' ಟಿಪ್ಪು ಸುಲ್ತಾನ್ ಸೆರೆ ಹಿಡಿದಿದ್ದ. ಆದರೆ ಆ ಸೆರೆಯಿಂದ ತಪ್ಪಿಸಿಕೊಳ್ಳುವಲ್ಲಿ ಮಲ್ಲಸರ್ಜ ಯಶಸ್ವಿಯಾಗುತ್ತಾನೆ. ಆ ಬಳಿಕ ಪೇಶ್ವೆಗಳು ಮೋಸದಿಂದ ಮಲ್ಲಸರ್ಜನನ್ನು ಬಂಧಿಸಿ ಸೆರೆಯಲ್ಲಿಡುತ್ತಾರೆ. ಈ ಬಂಧನದಿಂದ ಬಿಡುಗಡೆ ಹೊಂದಿ (1816ರಲ್ಲಿ) ಕಿತ್ತೂರಿಗೆ ಬರುವ ದಾರಿಯಲ್ಲಿ ಆತ ಮರಣ ಹೊಂದುತ್ತಾನೆ. ಈ ಸಂದರ್ಭದಲ್ಲಿ ರಾಜ್ಯ ಭಾರದ ಜವಾಬ್ದಾರಿಯನ್ನು ಆತನ ಮಗ ಶಿವಲಿಂಗ ರುದ್ರಸರ್ಜ ವಹಿಸಿಕೊಂಡಿರುತ್ತಾನೆ. ಶಿವಲಿಂಗ ರುದ್ರಸರ್ಜ 1824ರ ಸೆಪ್ಟೆಂಬರ್ 11 ರಂದು ಪುತ್ರ ಸಂತಾನವಿಲ್ಲದೆ ತೀರಿಕೊಳ್ಳುತ್ತಾನೆ. ಆದರೆ ಆತ ಶಿವಲಿಂಗಪ್ಪ ಎಂಬಾತನನ್ನು ದತ್ತು ತೆಗೆದುಕೊಂಡಿರುತ್ತಾನೆ. ಆದರೆ ಧಾರವಾಡದ ಕಲೆಕ್ಟರ್ ಥ್ಯಾಕರೆ ಈ ದತ್ತು ಪ್ರಕ್ರಿಯೆಯನ್ನು ಅಸಿಂಧುಗೊಳಿಸುತ್ತಾನೆ. ಬ್ರಿಟಿಷ್ ಪ್ರಭುತ್ವಕ್ಕೆ ಸಡ್ಡು ಹೊಡೆದು ವಜ್ರ ಸದೃಶ ಧೈರ್ಯದಿಂದ ಶಿವಲಿಂಗ ರುದ್ರಸರ್ಜನನ ಮಲತಾಯಿ ಚೆನ್ನಮ್ಮ ಥ್ಯಾಕರೆಗೆ ಪಾಠ ಕಲಿಸಲೇ ಬೇಕು ಎಂದು ನಿರ್ಧರಿಸುತ್ತಾಳೆ. ಅದೇ ವರ್ಷದ ಅಕ್ಟೋಬರ್ 23ರಂದು ಕಿತ್ತೂರಿನ ಕೋಟೆಯ ಮೇಲೆ ಅಕ್ರಮಣ ಮಾಡಲು ಥ್ಯಾಕರೆ ಅಪ್ಪಣೆ ಕೊಡುತ್ತಾನೆ. ಆದರೆ ಇದೆಲ್ಲದಕ್ಕೂ ಸಿದ್ಧವಾಗಿಯೇ ಇದ್ದ ಕಿತ್ತೂರಿನ ವೀರ ಪಡೆ ಬ್ರಿಟಿಷ್ ಸೈನ್ಯದ ಹೆಡೆಮುರಿ ಕಟ್ಟಿ ಹಾಕುತ್ತದೆ. ಕಿತ್ತೂರಿನ ಸೈನಿಕರ ಗುಂಡಿಗೆ ಥ್ಯಾಕರೆ ಬಲಿಯಾಗುತ್ತಾನೆ. ಮೊದಲ ಯುದ್ಧದಲ್ಲಿ ಕಿತ್ತೂರು ಪಡೆ ಅಮೋಘ ಜಯ ಸಂಪಾದಿಸುತ್ತದೆ.

ಆದರೆ ಈ ವಿಜಯದ ಸಿಹಿ ಬಹುಕಾಲ ಉಳಿಯುವುದಿಲ್ಲ. ಅದೇ ವರ್ಷದ ಕೊನೆಗೆ ಬೃಹತ್ ಸೈನ್ಯ ಕಟ್ಟಿಕೊಂಡು ಕಿತ್ತೂರಿನ ಮೇಲೆ ದಾಳಿ ನಡೆಸಿದ ಬ್ರಿಟಿಷರು ರಾಣಿ ಚೆನ್ನಮ್ಮರನ್ನು ಬಂಧಿಸುತ್ತಾರೆ. ಚೆನ್ನಮ್ಮ ಬ್ರಿಟಿಷರಿಂದ ಬಂಧನಕ್ಕೊಳಗಾದರೂ ಅವಳು ಹುಟ್ಟಿಸಿದ ದೇಶಪ್ರೇಮದ ಕಿಡಿ, ಸ್ಫೂರ್ತಿ ಯಾವ ಬಂಧನಕ್ಕೂ ಸಿಗದೆ ದೇಶವ್ಯಾಪಿಯಾಗಿ ಹಬ್ಬಿ ಆಕೆ ಅಜರಾಮರಳಾಗುತ್ತಾಳೆ.

ಚೆನ್ನಮ್ಮ ಬ್ರಿಟಿಷರ ವಿರುದ್ಧ ಜಯಗಳಿಸಿ ಕಳೆದ ಅಕ್ಟೋಬರ್‌ಗೆ 186 ವರ್ಷಗಳು ಸಂದು ಹೋದವು. ಬ್ರಿಟಿಷರ ಕುಟಿಲತೆಯನ್ನು ಮೊದಲೇ ಮನಗಂಡು ಹಂಗಿನರಮನೆಯಲ್ಲಿ ಬಾಳಲು ಒಪ್ಪದೆ ಬ್ರಿಟಿಷರ ವಿರುದ್ಧ ಪ್ರಾಣವನ್ನು ಒತ್ತೆಯಿಟ್ಟು ಹೋರಾಡಿದ ಚೆನ್ನಮ್ಮಳ ಸಾಹಸ, ಸಾಧನೆಯನ್ನು ದೇಶಾದ್ಯಂತ ಪ್ರಚುರ ಪಡಿಸಬೇಕಾದ ಕೆಲಸ ಇನ್ನಷ್ಟು ಪರಿಣಾಮಕಾರಿಯಾಗಿ ನಡೆಯ ಬೇಕಿದೆ. ಚೆನ್ನಮ್ಮಳ ಕೀರ್ತಿ ಪತಾಕೆ ರಾಜ್ಯದ ಹೊರ ಊರುಗಳಲ್ಲೂ ಹಬ್ಬಬೇಕಿದೆ.

ಆ ನಿಟ್ಟಿನಲ್ಲಿ ಉತ್ತರ ಪ್ರದೇಶ ಸರ್ಕಾರ ಗಾಜಿಯಾಬಾದ್‌ನ ಇಂದಿರಾಪುರಂನಲ್ಲಿರುವ ಸುಮಾರು 25 ಎಕರೆ ವಿಸ್ತೀರ್ಣದ ಸ್ವರ್ಣ ಜಯಂತಿ ಪಾರ್ಕಿನಲ್ಲಿ ಕಿತ್ತೂರು ಚೆನ್ನಮ್ಮಳ ಪ್ರತಿಮೆ ಸ್ಥಾಪಿಸಿರುವುದು, ನಮ್ಮ ರಾಜ್ಯ ಸರ್ಕಾರ ಮತ್ತು ಕನ್ನಡಿಗರಾದ ನಮಗೆ ಸ್ಫೂರ್ತಿ ತುಂಬಲಿ.

❑ *ರಾಕೇಶ್ ಎನ್ ಎಸ್*

# ಸಾಗಲಿ ಕನ್ನಡ ರಥ. . .

ಕನ್ನಡಿಗರಾದ ನಾವೆಲ್ಲ ಒಂದು ವಿದ್ಯಮಾನವನ್ನು ಪ್ರತಿ ರಾಜ್ಯೋತ್ಸವದ ಸಂದರ್ಭದಲ್ಲಿ ಗಮನಿಸುತ್ತ ಬಂದಿದ್ದೇವೆ. ಕನ್ನಡ ಮಾಧ್ಯಮದ ಪರವಾಗಿ, ಕನ್ನಡದ ಹಿರಿದಾದ ಪಾತ್ರವನ್ನು ಕುರಿತಂತೆ, ಕನ್ನಡಿಗರಿಗೆ ಕರ್ನಾಟಕದಲ್ಲಿ ಉದ್ಯೋಗವಕಾಶಗಳು ಹೆಚ್ಚಬೇಕು– ಮೀಸಲಾಗಿರಬೇಕು ಎಂಬ ಹಕ್ಕೊತ್ತಾಯದ ಪರವಾಗಿ ನವೆಂಬರ್‌ನಲ್ಲಿ ಎಲ್ಲೆಲ್ಲೂ ಭಾಷಣಗಳು, ಹೇಳಿಕೆಗಳು, ಘೋಷಣೆಗಳು ಕೇಳಿಬರುತ್ತವೆ. ಇದು ಕರ್ನಾಟಕಕ್ಕೆ ಮಾತ್ರ ಸೀಮಿತವಲ್ಲ. ಕಳೆದ ಹದಿನೆಂಟು ವರ್ಷಗಳನ್ನು ನಾನು ತಮಿಳುನಾಡು, ಆಂಧ್ರಪ್ರದೇಶ, ಮುಂಬೈ, ಮಹಾರಾಷ್ಟ್ರಗಳಲ್ಲಿ ಕಳೆದಿದ್ದೇನೆ. ಈ ರಾಜ್ಯಗಳಲ್ಲೂ ಪ್ರಾದೇಶಿಕ ಭಾಷೆಗಳ ಬಗ್ಗೆ , ಮಣ್ಣಿನ ಮಕ್ಕಳಿಗೆ ಕೆಲಸ ಸಿಗುವುದು– ಕುರಿತಂತೆ ಇದರ ಜೊತೆಗೆ ಈಚಿನ ವರ್ಷಗಳಲ್ಲಿ ಜಾಗತೀಕರಣದ ವಿರುದ್ಧ ಕೂಡಾ ಕರ್ನಾಟಕದಲ್ಲಿ ಕೇಳಿ ಬರುವ ಮಾತುಗಳೇ ಮತ್ತೆ ಮತ್ತೆ ಕೇಳಿ ಬರುತ್ತವೆ. ತಾತ್ಪರ್ಯವಿಷ್ಟು : ಕನ್ನಡದ ಪ್ರಶ್ನೆಯಾಗಲಿ, ಉಳಿದ ಭಾಷೆಗಳ ಪ್ರಶ್ನೆಯಾಗಲಿ ಈಗ ಕೇವಲ ಭಾಷೆಯ ಪ್ರಶ್ನೆಯಾಗಿ ಉಳಿದಿಲ್ಲ. ಈ ಪ್ರಶ್ನೆ ಈಗ ನಮ್ಮೆಲ್ಲರಿಗೆ ಇರುವ ಜೀವನ ಶೈಲಿಯ ಕಲ್ಪನೆ, ಲೌಕಿಕ ಆಸೆ, ಆಕಾಂಕ್ಷೆಗಳೊಡನೆ ತಳುಕು ಹಾಕಿಕೊಂಡು ಕೂತಿದೆ. ಇದನ್ನು ನಾವು ಮರೆತು ಕನ್ನಡ ಭಾಷೆ ಅಥವಾ ಮಾಧ್ಯಮದ ಪ್ರಶ್ನೆಯನ್ನು ಕೇವಲ ಸಾಂಸ್ಕೃತಿಕ ಅಥವಾ ಭಾಷಿಕ ಪ್ರಶ್ನೆಯನ್ನಾಗಿ ನೋಡಿದರೆ ನಮಗೆ ನಾವೇ ದ್ರೋಹ ಮಾಡಿಕೊಳ್ಳುತ್ತೇವಷ್ಟೇ...

ಕರ್ನಾಟಕವನ್ನೂ ಸೇರಿಸಿಕೊಂಡು ಇಡೀ ಭರತ ಖಂಡದ ಚಲನೆ ಸಾಮಾಜಿಕವಾಗಿ –ಸಾಂಸ್ಕೃತಿಕವಾಗಿ– ಆರ್ಥಿಕವಾಗಿ ಒಂದು ನಿರ್ದಿಷ್ಟ ದಿಕ್ಕಿನಲ್ಲಿದೆ. ಈ ದಿಕ್ಕಿಗನುಗುಣವಾಗಿ ನಮ್ಮ ತಕ್ಷಣದ ಬದುಕಿನ ಆಸೆ ಆಕಾಂಕ್ಷೆಗಳು , ನಾಳಿನ ಕನಸುಗಳು. ಈ ದಿಕ್ಕು– ಜಾಗತೀಕರಣ, ನಗರೀಕರಣ ಮತ್ತು ಇಂಗ್ಲಿಷ್ ಮಾಧ್ಯಮದ ಪರವಾಗಿದೆ. ಜೊತೆಗೆ ತಂತ್ರಜ್ಞಾನ, ವಿಶೇಷವಾಗಿ ಮಾಹಿತಿ ತಂತ್ರಜ್ಞಾನವೇ ನಮ್ಮೆಲ್ಲ ಸಮಸ್ಯೆಗಳಿಗೆ ಉತ್ತರವಾಗಿ ಕಾಣುತ್ತಿದೆ. ಇದು ಒಂದೆರಡು ದಿನದ ಕನಸಲ್ಲ. ಕಳೆದೆರಡು ದಶಕಗಳಿಂದ ನಮ್ಮ ಮಧ್ಯಮವರ್ಗ ಬಹು ಪ್ರೀತಿಯಿಂದ ಪೋಷಿಸಿಕೊಂಡು ಬಂದ ಕನಸು. ಈ ದಿಕ್ಕಿಗೆ, ಈ ಕನಸಿಗೆ ಪ್ರತಿರೋಧವಿಲ್ಲವೆಂದಲ್ಲ. ಇದೆ ಮತ್ತು ಈ ಕನಸಿನಲ್ಲಿ ಭಾಗವಹಿಸುತ್ತಿರುವವರಿಗೂ ಕನಸುಗಳೆಲ್ಲವೂ ಪ್ರತಿಶತ ಸಾಕ್ಷಾತ್ಕಾರವಾಗುತ್ತದೆಂಬ ಭ್ರಮೆಯೂ ಕೂಡ ಇಲ್ಲ. ಆದರೂ ನಮ್ಮಲ್ಲಿ ಬಹುಪಾಲು ಜನ ಈ ಕನಸಿನಲ್ಲಿ ಮನಃಪೂರ್ವಕವಾಗಿ ಭಾಗವಹಿಸುತ್ತಿದ್ದಾರೆ. ಹೀಗೆಂದಾಗ ನಮ್ಮ ಜನರಿಗೆ ಕನ್ನಡ ಭಾಷೆಯ ಮೇಲಾಗಲಿ, ಸ್ಥಳೀಯ ಸಂಸ್ಕೃತಿಯ ಮೇಲಾಗಲೀ ಪ್ರೀತಿ, ಗೌರವವಿಲ್ಲ ಎಂದು ಭಾವಿಸಬಾರದು. ಹಾಗಾಗಿ, ಒಟ್ಟಾರೆಯಾಗಿ ಇದೊಂದು ಸಂಕೀರ್ಣ ಸ್ವರೂಪದ ಸಮಸ್ಯೆಯಾಗಿ ನಮ್ಮೆದುರು ನಿಂತಿದೆ.

ಚೀನಾ, ಜಪಾನ್, ಕೊರಿಯಾ ದೇಶಗಳಲ್ಲಿ...

ಪ್ರತಿಯೊಬ್ಬ ವಯಸ್ಕನು, ಪೋಷಕನು ಜೀವನದಲ್ಲಿ ಒಂದು ಪ್ರಶ್ನೆ ಕೇಳಿಕೊಳ್ಳುತ್ತಲೇ ಇರುತ್ತಾನೆ. ನಾನು ಈ ರೀತಿಯ ಶಿಕ್ಷಣ ಪಡೆದರೆ, ಇಂಥ ಮಾಧ್ಯಮದಲ್ಲಿ ಓದಿದರೆ ಇಂತಹ ಜೀವನ ಮೌಲ್ಯಗಳನ್ನು ನಂಬಿದರೆ, ನಾಳೆ ನನಗೆ, ನನ್ನ ಮಕ್ಕಳಿಗೆ ಉದ್ಯೋಗ ಸಿಗುತ್ತದೆಯೆ, ಜೀವನಾವಕಾಶ ಹಸನಾಗುತ್ತದೆಯೆ? ಈ ಪ್ರಶ್ನೆಗೆ ಸಕಾರಾತ್ಮಕವಾಗಿ ಉತ್ತರ ಸಿಗುವ ಸಮಾಜದಲ್ಲಿ ನೆಮ್ಮದಿ, ಪ್ರಗತಿ, ಸಮಾನತೆ ಹೆಚ್ಚಾಗಿರುತ್ತದೆ. ಭ್ರಷ್ಟತೆ ಕಡಿಮೆಯಿರುತ್ತದೆ. ಇದನ್ನು ಸಮಾಜಶಾಸ್ತ್ರಜ್ಞರು ಸಮಾಜವು ತನ್ನ ಸದಸ್ಯರಿಗೆ ನೀಡುವ Answering Services' ಎನ್ನುತ್ತಾರೆ. ಈ ಆನ್ಸರಿಂಗ್ ಸರ್ವಿಸ್ ನಮ್ಮ ಸಮಾಜದಲ್ಲಿ ಸಕಾರಾತ್ಮಕ ಉತ್ತರವನ್ನು , ಬಡವರಿಗೆ ಮಾತ್ರವಲ್ಲ ಮಧ್ಯಮ ವರ್ಗ, ಮೇಲ್ವರ್ಗದವರಿಗೂ ನೀಡಲಾರರು. ನೀಡುವ ಸ್ಥಿತಿಯಲ್ಲಿಲ್ಲ. ಈ ಸಕಾರಾತ್ಮಕ ಉತ್ತರದ ಕೊರತೆಯಿಂದಾಗಿಯೇ ಬಹುಪಾಲು ಶಿಕ್ಷಿತ ಮಧ್ಯಮ ವರ್ಗದಲ್ಲಿ ಒಂದು ರೀತಿಯ ಮಾನಸಿಕ ಖಿನ್ನತೆ ,ಅಭದ್ರತೆ, ಆತಂಕ. ಈ ಮನೋಭೂಮಿಕೆಯೇ ಈವತ್ತಿನ ಭ್ರಷ್ಟಾಚಾರ, ದುಂದುವೆಚ್ಚ, ಸಡಿಲ ನೈತಿಕತೆಗೆ ಕಾರಣವಾಗಿರುವುದು. ಇದು ಸಮಸ್ಯೆಯ ಒಂದು ಮುಖ ಮಾತ್ರ. ಭವಿಷ್ಯದ ಬಗ್ಗೆ ಸಕಾರಾತ್ಮಕ ಉತ್ತರವು ಸಿಗದೇ ಹೋದಾಗ ಜನರು ಸಿಕ್ಕಿದ್ದರಲ್ಲೇ ಆಸರೆ ಪಡೆಯಲು ನೋಡುತ್ತಾರೆ.

ಭಾಷೆ ಮತ್ತು ಶಿಕ್ಷಣ ಕುರಿತಂತೆ ಕಳೆದೆರಡು ದಶಕಗಳಲ್ಲಿ ಈ ರೀತಿಯ “ಮಾನಸಿಕ ಪಲಾಯನ ವಾದ' ಇದೆ. ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ದೊರೆತರೆ ಹಿಂದುಳಿದವರಿಗೆ ಉದ್ಯೋಗವಕಾಶಗಳು ಸಲೀಸಾಗುತ್ತವೆ, ಎಲ್ಲರಿಗೂ ಜಾಗತೀಕರಣದ ಕನಸಿನಲ್ಲಿ ಪಾಲು ಸಿಗುತ್ತದೆ ಎನ್ನುವುದು ಇಂತಹದೊಂದು ಪಲಾಯನವಾದ. ಈಗ ಇಂಗ್ಲಿಷ್ ಶಿಕ್ಷಣ ಮಾಧ್ಯಮದಲ್ಲಿ ಕಲಿಯುವ ಮಕ್ಕಳು ಉದ್ಯೋಗಕ್ಕೆ ಸಿದ್ಧರಾಗುವುದು ಇನ್ನೂ ಹದಿನೆಂಟು ಇಪ್ಪತ್ತು ವರ್ಷಗಳ ಆನಂತರ. ಆವಾಗ ಮಾಹಿತಿ ಜ್ಞಾನ, ಇಂಗ್ಲಿಷ್ ಭಾಷೆಗೆ ಇಷ್ಟು ಪ್ರಾಮುಖ್ಯವಿರುತ್ತದೆಯೆ ? ಇಲ್ಲದೆ ಹೋದರೆ ಮಕ್ಕಳು ಏನು ಮಾಡಬೇಕು? ತಂತ್ರಜ್ಞಾನ , ಮಾಹಿತಿಜ್ಞಾನದಲ್ಲಿ ಮುಂದುವರೆಯಲು ಈಗಲೂ ಕೂಡಾ ಇಂಗ್ಲಿಷ್ ಬೇಕಿಲ್ಲವೆಂದು ಚೀನಾ, ಜಪಾನ್,ಕೊರಿಯಾ ಇಂತಹ ದೇಶಗಳ ಉದಾಹರಣೆಗಳ ಮೂಲಕ ನಮಗೇಕೆ ಕಾಣುವುದಿಲ್ಲ? ಈ ಬಗ್ಗೆ ನಾವು ಯೋಚಿಸೇ ಇಲ್ಲ.

ಹೀಗಾಗಿ, ನಮ್ಮ ಮೂಲಭೂತ ಆಯ್ಕೆಯಲ್ಲೇ ಎಲ್ಲೋ ತಪ್ಪಿದೆ. ನಮ್ಮ ಒಟ್ಟು ಆರ್ಥಿಕ ಸಾಮಾಜಿಕ ವ್ಯವಸ್ಥೆಯೇ ಕೇಂದ್ರೀಕರಣ, ಜಾಗತೀಕರಣ ಮತ್ತು ಇಂಗ್ಲಿಷ್ ಭಾಷೆಯ ಪರವಾಗಿ ಚಲಿಸುತ್ತಿರುವಾಗ ಕೇವಲ ಭಾಷೆಯ, ಮಾಧ್ಯಮದ ವಿಷಯದಲ್ಲಿ ನಾವು ಕನ್ನಡ ಅಥವಾ ಪ್ರಾದೇಶಿಕ ಭಾಷೆಗಳ ಪರವಾಗಿರುವುದು ಕೇವಲ ಭಾವುಕ ಪ್ರತಿಕ್ರಿಯೆಯಾಗಿರುತ್ತದೆ. ಈ ಬರಹವನ್ನು ಮಾಡುವುದಕ್ಕಾಗಿ ನಾನು ಬೇರೆ ಬೇರೆ ರಾಜ್ಯಗಳಲ್ಲಿ ವೃತ್ತಿ ಶಿಕ್ಷಣ ಮತ್ತು ಶಿಕ್ಷಣ ಮಾಧ್ಯಮದ ಬಗ್ಗೆ ಮಾಹಿತಿ ಸಂಗ್ರಹಿಸಿದೆ. ಹತ್ತನೆಯ ತರಗತಿಯ ತನಕ ಹೇಗೋ ಏನೋ ಮಾತೃಭಾಷೆಯಲ್ಲಿ ಶಿಕ್ಷಣ ನಡೆಯುತ್ತದೆ. ಹಳ್ಳಿಗಾಡಿನಲ್ಲಿ ಸಣ್ಣಪುಟ್ಟ ಪಟ್ಟಣಗಳಲ್ಲಿ, ನಗರಪ್ರದೇಶಗಳಲ್ಲಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಈ ಆಯ್ಕೆ ಹತ್ತನೆಯ ತರಗತಿ ತನಕ ಕೂಡ ಇಂಗ್ಲಿಷ್ ಪರವಾಗಿಯೇ ಇರುತ್ತದೆ. ಇಂಜಿನಿಯರಿಂಗ್, ವೈದ್ಯಕೀಯ ಕ್ಷೇತ್ರಗಳಂಥ ವೃತ್ತಿ ಶಿಕ್ಷಣದ ವಲಯಗಳಿಗೆ ಪ್ರವೇಶಿಸಲು ಬೇಕಾದ ಕೋಚಿಂಗ್ ತಮಿಳುನಾಡು, ಮಹಾರಾಷ್ಟ್ರ,



ಆಂಧ್ರಪ್ರದೇಶಗಳಲ್ಲಿ ಕರ್ನಾಟಕದಂತೆಯೇ ಇಂಗ್ಲಿಷ್‌ನಲ್ಲಿಯೇ ನಡೆಯುತ್ತದೆ. ಉತ್ತರ ಭಾರತದ ಹಿಂದಿ ಮಾತನಾಡುವ ಬಹುಪಾಲು ಯುವಕರು ಇಂತಹ ಕೋಚಿಂಗ್‌ಗಳಿಗಾಗಿ ದೆಹಲಿಯಂತಹ ದೊಡ್ಡದೊಡ್ಡ ನಗರಗಳಿಗೆ ಹೋಗುತ್ತಾರೆ. ಇಷ್ಟು ಮಾತ್ರವಲ್ಲ ದಕ್ಷಿಣದ ಯಾವ ರಾಜ್ಯಗಳಲ್ಲೂ ವೈದ್ಯಕೀಯ ಶಿಕ್ಷಣ ಪ್ರಾದೇಶಿಕ ಭಾಷೆಗಳಲ್ಲಿ ಸಿಗುವುದಿಲ್ಲವಂತೆ. ಇಂಜಿನಿಯರಿಂಗ್ ಕ್ಷೇತ್ರದಲ್ಲಿ ತಮಿಳುನಾಡಿನಲ್ಲಿ ಮಾತ್ರ ಒಂದೆರಡು ಕಾಲೇಜುಗಳು ತಮಿಳು ಮಾಧ್ಯಮದಲ್ಲಿ ಕಲಿಸುತ್ತಿದ್ದರೂ ಈ ಕಾಲೇಜುಗಳಿಗೆ ಬೇಡಿಕೆಯಿಲ್ಲವಂತೆ. ಮಾತ್ರವಲ್ಲ ಇನ್ನೊಂದೆರಡು ವರ್ಷಗಳಲ್ಲಿ ಈಗಿರುವ ತಮಿಳು ಮಾಧ್ಯಮಗಳ ಕಾಲೇಜು ಕೂಡಾ ಮುಚ್ಚಬಹುದೆಂದು ನನ್ನ ಸ್ನೇಹಿತರು ತಿಳಿಸಿದರು. ಸಮಾಜದಲ್ಲಿ ಬಹುಪಾಲು ಜನ ಇತರರಂತೆ, ಎಲ್ಲರಂತೆ ಜೀವನ ಸಾಗಿಸಲು ಇಷ್ಟಪಡುತ್ತಾರೆ. ಹೀಗಾಗಿ ಕನ್ನಡ ಭಾಷೆ, ಶಿಕ್ಷಣ ಮಾಧ್ಯಮದ ಪ್ರಶ್ನೆ ಕೇವಲ ಭಾಷೆಯ ಪ್ರಶ್ನೆಯಾಗಿ ಉಳಿಯದೆ ನಾವು ಬಯಸುತ್ತಿರುವ ಸಾಮಾಜಿಕ ಆರ್ಥಿಕ ವ್ಯವಸ್ಥೆಯ ಸ್ವರೂಪದೊಡನೆ ತೆಕ್ಕೆ ಹಾಕಿಕೊಂಡಿದೆ.

ನಮ್ಮ ಆಯ್ಕೆ ಹೇಗೆ?

ನಮ್ಮ ಆಯ್ಕೆಯ ಪರಿಣಾಮಗಳು ನಮಗೇ ಗೊತ್ತಿಲ್ಲದೆ ಇರಬಹುದು, ಏಕೆಂದರೆ ಇವತ್ತು ನಾವಿರುವ ಸ್ಥಿತಿಯಲ್ಲಿ ನಮ್ಮ ದೂರದೃಷ್ಟಿ ಕಿಂಚಿತ್ತೂ ಸಾಧ್ಯವಿಲ್ಲ. ಹತ್ತು ಹದಿನೈದು ವರ್ಷಗಳ ನಂತರ ಪರಿಸ್ಥಿತಿ ಹೇಗಿರಬಹು ದೆಂದು ಕೂಡಾ ಯೋಚಿಸಲು ನಾವು ಸಿದ್ಧರಿಲ್ಲ. ಕೇವಲ ನಾಲ್ಕೈದು ವರ್ಷಗಳಲ್ಲಿ ಯುರೋಪು, ಅಮೆರಿಕಗಳ ಆರ್ಥಿಕ ವ್ಯವಸ್ಥೆಯಲ್ಲಿ ಎಷ್ಟೊಂದು ಏರುಪೇರಾಗಿ ಹೋಯಿತು? ಚೀನಾ ಆರ್ಥಿಕವಾಗಿ ದೃಢವಾ ದರೆ ಯುರೋಪು– ಅಮೆರಿಕಗಳ ಗತಿಯೇನು? ಈ ಸಂಗತಿಗಳ ಬಗ್ಗೆ ಯೋಚಿಸದೆ ನಾವು ನಮ್ಮ ಮಕ್ಕಳಿಗೆ ಯುವಕರಿಗೆ ಕೇವಲ ಮಾಹಿತಿ ತಂತ್ರಜ್ಞಾನ ಶಿಕ್ಷಣ, ಇಂಗ್ಲಿಷ್ ಮಾಧ್ಯಮದಲ್ಲೇ ಶಿಕ್ಷಣ ಎಂದು ಹೊರಟರೆ ಏನಾಗಬೇಡ?

ಕನ್ನಡ ಮಾಧ್ಯಮದಲ್ಲಿ ಜ್ಞಾನ ಕ್ಷೇತ್ರದ ಉನ್ನತ ಸ್ತರಗಳಲ್ಲಿ ಕಲಿಸುವುದು ಸಾಧ್ಯವಿಲ್ಲ. ಇದಕ್ಕಾಗಿ ಬೇಕಾದ ಸಿದ್ಧತೆ , ಪಠ್ಯ ಪುಸ್ತಕಗಳು ನಮ್ಮಲ್ಲಿ ತಯಾರಾಗಲೇ ಇಲ್ಲ ಎಂಬ ಮಾತು ಯಾವಾಗಲೂ ಕೇಳಿಬರುತ್ತದೆ. ಇದು ಆತ್ಮವಂಚನೆಯ ಮಾತು. ಕುವೆಂಪು ಅವರು ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದಾಗ ಮತ್ತು ಆನಂತರದ ವರ್ಷಗಳಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಸಾಮಾಜಿಕ ವಿಜ್ಞಾನ ಮತ್ತು ಶಾಸ್ತ್ರ–ಆನ್ವಯಿಕ ವಿಜ್ಞಾನ ಕ್ಷೇತ್ರಗಳಲ್ಲಿ ಪ್ರಕಟವಾದ ಪುಸ್ತಕಗಳನ್ನು, ವಿಶೇಷವಾಗಿ ಪಠ್ಯಪುಸ್ತಕಗಳನ್ನು , ಜೊತೆಗೆ ಅದರಲ್ಲಿರುವ ಕುವೆಂಪು ಅವರ ಮುನ್ನುಡಿಯನ್ನೂ ಗಮನಿಸಬೇಕು. ಈ ಪುಸ್ತಕಗಳಲ್ಲಿ ಬಳಕೆಯಾಗಿರುವ ಕನ್ನಡಕ್ಕೆ ಯಾವುದೇ ಜ್ಞಾನ ಕ್ಷೇತ್ರದ ಯಾವುದೇ ರೀತಿಯ ಬೆಳವಣಿಗೆ–ವಿದ್ಯಮಾನವನ್ನಾದರೂ ನಿರ್ವಹಿಸುವ ಶಕ್ತಿಯಿದೆ. ಕನ್ನಡ ಮಾಧ್ಯಮದ ಪರವಾಗಿರುವವರು , ಇದನ್ನು ವಿರೋಧಿಸುವವರು ಇಬ್ಬರೂ ಕೂಡಾ ಕುವೆಂಪು ಅವರ ಬಳಿಕ ನಂತರ ಯಾಕೆ ಈ ವಿದ್ಯಮಾನ ಮುಂದುವರೆಯಲಿಲ್ಲ ಎಂಬುದನ್ನು ಕುರಿತುಯೋಚಿಸಬೇಕು. ಹಾಗೆ ನೋಡಿದರೆ ಮಾಹಿತಿ ಜ್ಞಾನದಲ್ಲಿ ಶಿಕ್ಷಣ ನೀಡಲು ಯಾವುದೇ ಭಾಷೆಯ ಅಗತ್ಯ ತುಂಬಾ ಇರಲಾರದು.

ನಮಗೆ ಕನ್ನಡ ಮಾಧ್ಯಮದ ಬೆಳವಣಿಗೆಯಲ್ಲಿ ಭಾಷೆಯ ಸಾಮರ್ಥ್ಯದಲ್ಲಿ ಸ್ವಲ್ಪವಾದರೂ ನಂಬಿಕೆಯಿದ್ದರೆ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುವುದು ಅಥವಾ ಕೇಳಿಕೊಳ್ಳುವುದು ಒಳ್ಳೆಯದು.

1. ಉನ್ನತ ಶಿಕ್ಷಣ ಮತ್ತು ವೃತ್ತಿ ತರಬೇತಿಯು ಕನ್ನಡದಲ್ಲೇ ಜರಗುವಂತೆ ಕರ್ನಾಟಕ ಸರಕಾರವು ಯಾವುದಾದರೂ ಕಾಲಬದ್ಧ ಯೋಜನೆಗಳನ್ನು ರೂಪಿಸಿದೆಯೆ? ಹೀಗೆ ರೂಪಿಸದೆ ಹೋಗುವುದಕ್ಕೆ ಕಾರಣಗಳೇನು?
2. ಕೇಂದ್ರ ಸರಕಾರ ಮತ್ತು ಇತರ ರಾಜ್ಯಗಳ ಸರ್ಕಾರಗಳೊಡನೆ ಮಾತ್ರವಲ್ಲ, ಕರ್ನಾಟಕದ ಒಳಾಡಳಿತದಲ್ಲೂ ಉನ್ನತ ಸ್ತರಗಳಲ್ಲಿ ಇಂಗ್ಲಿಷ್ ಭಾಷೆಯ ಬಳಕೆ ಇನ್ನೂ ಏಕೆ ಹೆಚ್ಚಿನ ಮಟ್ಟದಲ್ಲಿದೆ?
3. ಕನ್ನಡ ವಿಶ್ವವಿದ್ಯಾಲಯವು ಸೇರಿದಂತೆ ಎಲ್ಲ ವಿಶ್ವವಿದ್ಯಾಲಯಗಳು ಸಾಹಿತ್ಯ ಕ್ಷೇತ್ರದಿಂದಾಚೆಗೆ ಪ್ರಕಟಿಸಿರುವ ಪ್ರೌಢ, ಪ್ರಮಾಣಗ್ರಂಥಗಳು ಎಷ್ಟು? ಈ ಗ್ರಂಥಗಳಿಂದಾಗಿ ವೃತ್ತಿಶಿಕ್ಷಣ ಮತ್ತು ಉನ್ನತ ಶಿಕ್ಷಣವನ್ನು ಕನ್ನಡದಲ್ಲಿ ನೀಡಲು ಸಾಧ್ಯವಾಗಿದೆಯೆ?
4. ಹೈಸ್ಕೂಲು ತಲುಪುವ ಹೊತ್ತಿಗೆ ಮಕ್ಕಳಿಗೆ ಕನ್ನಡದಲ್ಲಿ ಆಸಕ್ತಿ ಕಡಿಮೆಯಾಗಲು ಕಾರಣವೇನು?
5. ಈಗಿರುವ ಪಠ್ಯ ಪುಸ್ತಕಗಳು ಮಕ್ಕಳಿಗೆ ಕನ್ನಡ ಸಾಹಿತ್ಯದ ಸಮೃದ್ಧತೆ ಮತ್ತು ಸಾಧ್ಯತೆಯ ಬಗ್ಗೆ ಹೆಮ್ಮೆ ಮೂಡಿಸಲು ನೆರವಾಗುತ್ತಿದೆಯೆ?
6. ಇದುವರೆಗೂ ಕರ್ನಾಟಕ ಸರಕಾರಕ್ಕೆ ಏತಕ್ಕೆ ಕೊನೆಯ ಪಕ್ಷ ಜಿಲ್ಲಾ ಮಟ್ಟದಲ್ಲಿ ಮಾದರಿ ಕನ್ನಡ ಪ್ರೌಢಶಾಲೆ – ಕಾಲೇಜುಗಳನ್ನು ತೆರೆಯಲು ಸಾಧ್ಯವಾಗಿಲ್ಲ?
7. ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಮಾತ್ರ ಈ ರಾಜ್ಯದಲ್ಲಿ ಉದ್ಯೋಗ ಎಂಬ ಆದೇಶ ಹೊರಡಿಸುವುದಾದರೆ , ಫೆಡರಲ್ ವ್ಯವಸ್ಥೆಯಲ್ಲಿ ಈ ಆದೇಶಕ್ಕೆ ಮಾನ್ಯತೆ ಸಿಗುವುದೆ?
8. ಕನ್ನಡ ಮಾಧ್ಯಮಗಳ ಶಾಲೆಗಳ ಮಾತು ಹಾಗಿರಲಿ, ಈಗಿರುವ ಶಾಲೆಗಳಲ್ಲಿ ಕನ್ನಡದಲ್ಲಿ ಕಲಿಸುವ ರೀತಿ ಸರಿಯಿದೆಯೇ? ಸಾಹಿತ್ಯಕ ಶಿಷ್ಟಭಾಷೆ ಕಲಿಸಿದರೆ ಸಾಕೆ? ಜೀವನಾನುಭವ , ವೃತ್ತಿಯ ಅಗತ್ಯ ಮತ್ತು ದಿನನಿತ್ಯದ ಮಾತಿನ ವರಸೆಗಳಿಂದಲೂ ಕಲಿಯ ಬೇಕು.ಈ ಕಲಿಕೆಯನ್ನು ಈಗಿರುವ ಕನ್ನಡ ಪಠ್ಯ ಪುಸ್ತಕಗಳು ಪ್ರೇರೇಪಿಸುತ್ತಿವೆಯೇ?
9. ನಿಘಂಟು ಕುರಿತು ಮಾತನಾಡುವಾಗ ನಾವು ಸಾಮಾನ್ಯ ಪದಕೋಶಗಳ ಬಗ್ಗೆಯೇ ಮಾತನಾಡುತ್ತೇವೆ. ಕರ್ನಾಟಕದಲ್ಲಿ ಇದುವರೆಗೆ ಯಾವ ಯಾವ ವೃತ್ತಿಗಳಿಗೆ ಸಂಬಂಧಿಸಿದಂತೆ ಕನ್ನಡದಲ್ಲಿ ನಿಘಂಟು ರಚನೆಯಾಗಿದೆ?
10. ಜಗತ್ತು ಈಗ ಬದಲಾಯಿಸುತ್ತಿರುವ – ಬೆಳೆಯುತ್ತಿರುವ ರೀತಿಯಲ್ಲಿ ಮಕ್ಕಳಿಗೆ ಒಂದು ಭಾಷೆಗಿಂತ ಹೆಚ್ಚಿಗೆ ಕಲಿಯುವುದು ಅಗತ್ಯವೆ? ಈ ಅಗತ್ಯವನ್ನು ನಾವು ಮಕ್ಕಳಿಗೆ ಕಲಿಸಬೇಕಾದ ಕನ್ನಡ ಮತ್ತು ಇಂಗ್ಲಿಷ್ ಸ್ವರೂಪ ಯಾವ ರೀತಿಯದಿರಬೇಕು?

ಮೇಲಿನದು ಕೆಲವು ಮುಖ್ಯ ಪ್ರಶ್ನೆಗಳು ಮಾತ್ರ. ಭಾಷೆ ಮತ್ತು ಮಾಧ್ಯಮದ ಪ್ರಶ್ನೆಗಳನ್ನು ನಾವು ದುರದೃಷ್ಟವಶಾತ್ ಕೇವಲ ಉದ್ಯೋಗಾವಕಾಶ ಪ್ರಶ್ನೆಯ ಹಿನ್ನೆಲೆಯಲ್ಲಿ ಮಾತ್ರ ನೋಡುತ್ತೇವೆ. ಇದು ನಮ್ಮ ಸಂಕುಚಿತ ದೃಷ್ಟಿ. ಒಂದು ಭಾಷೆಯನ್ನು ಕಲಿಯುವುದೆಂದರೆ ಅಥವಾ ಮರೆಯುವುದೆಂದರೆ ಆ ಭಾಷೆಯೊಳಗಡಗಿರುವ ಸಂಸ್ಕೃತಿ, ಕನಸು, ಜನಜೀವನದ ರೀತಿ ನೀತಿ ಎಲ್ಲವನ್ನು ತಿಳಿಯುವುದು ಅಥವಾ ಮರೆಯುವುದೆಂದೇ ಅರ್ಥ. ಇದನ್ನು ನಾವು ಸೂಕ್ಷ್ಮವಾಗಿ ಗ್ರಹಿಸದೆ ಹೋದರೆ ನಮ್ಮ ಮಕ್ಕಳು –ಮೊಮ್ಮಕ್ಕಳ ವೈಯಕ್ತಿಕ ಕೌಟುಂಬಿಕ ಜೀವನದ ಮೇಲಾಗುವ ದುಷ್ಪರಿಣಾಮ ತೀವ್ರವಾದದ್ದು. ನಮ್ಮ ಇಂಗ್ಲಿಷ್– ಡಾಲರ್ ಕನಸುಗಳು ಈ ದುಃಸ್ವಪ್ನವನ್ನು ಕುರಿತು ಯೋಚಿಸಿದಂತಿಲ್ಲ. ಪರ್ಯಾಯವಾಗಿ ನಮ್ಮ ಸಂಸ್ಕೃತಿ, ಸ್ಮೃತಿಗಳನ್ನು ಉಳಿಸಿಕೊಂಡು, ವೃತ್ತಿಯ ಲೌಕಿಕ ಜೀವನದ ಅಗತ್ಯಗಳಿಗಾಗಿ ಎಷ್ಟು ಭಾಷೆಗಳನ್ನು ಕಲಿಯಬೇಕು, ಯಾವ ಹಂತದಲ್ಲಿ ಕಲಿಯಬೇಕು, ಎಷ್ಟು ಕಲಿಯಬೇಕು ಎಂಬುದನ್ನು ಕುರಿತು ಕೂಡಾ ನಾವು ಯೋಚಿಸಬಹುದು. ಪಯಣ ಯಾವುದೇ ದಿಕ್ಕಿನಲ್ಲಿರಲಿ, ಭಾಷೆ–ಮಾಧ್ಯಮದ ಪ್ರಶ್ನೆಗಳನ್ನು ಎದುರಿಸುವಾಗ ಜೊತೆಜೊತೆಯಲ್ಲೆ ಸಾಮಾಜಿಕ ಆರ್ಥಿಕ ಪ್ರಶ್ನೆಗಳನ್ನು ಎದುರಿಸಲು ನಾವು ಮನಸ್ಸು ಮಾಡಬೇಕಷ್ಟೇ.

❑ *ಕೆ. ಸತ್ಯನಾರಾಯಣ*

*ಕೃಪೆ : ಉದಯವಾಣಿ*

## ಓದುಗರ ಅನಿಸಿಕೆ

ಇಪ್ಪತ್ತೊಂದನ್ನು ಹಿಂದಿಟ್ಟು ಮುಂದಿರುವ ಇಪ್ಪತ್ತೆರಡಂಕೆಯೊಳು ಸೇರಿಕೊಂಬ ಅಭಿಮತದ ಅಕ್ಟೋಬರ್ ಸಂಚಿಕೆ–ಕನ್ನಡದ ಕಂಪಿನ ಸಿರಿ ಸಂಪಿಗೆ ಒಂದಿಗೆ ಜ್ಞಾನಪೀಠವನ್ನೇರಿಸಿಕೊಂಡ ಕನ್ನಡಿಗರೆಲ್ಲರ ಕಣ್ಮಣಿ ಎಂದು ಆಚಾರ ವಿಚಾರದಲ್ಲೂ ಜನ ಮನಸೂರೆಗೊಂಡ ಚಂದ್ರಶೇಖರ ಕಂಬಾರರ ಸಾಹಿತ್ಯ ಜೀವನ, ಲಾಲಿತ್ಯ ವಿಚಾರಗಳಿಗೆ ಸಣ್ಣದೊಂದು ಕೈಪಿಡಿಯಾಗಿ ಸಹಕರಿಸಿದುದು ನಿಜ. ಡಾ. ಎಚ್. ಎಸ್. ಶಿವಪ್ರಕಾಶ್, ಡಾ. ಪುರುಷೋತ್ತಮ ಬಿಳಿಮಲೆ ಅವರ ವಿಸ್ತೃತ ಬರಹಗಳು ಲೇಖಕರಿಗೆಲ್ಲಾ ಸ್ಫೂರ್ತಿದಾಯಕವೇ ಆಗಿದ್ದವು.

ರೇಣುಕಾ ನಿಡಗುಂದಿಯವರ ಸಂಸ್ಕೃತಿ ಬಾಗಿನ ಸಮಾರಂಭಗಳ ದಾಖಲೀಕೃತ ಲಿಖಿತ ವರದಿ ಸಭಾ ಕಾರ್ಯಕ್ರಮಗಳಲ್ಲಿ ಸ್ವತಃ ಪಾಲುಗಾರಿಕೆ ಪಡೆದಂತೆ ಭಾಸವಾದುದೂ ಸುಳ್ಳಲ್ಲ. ಬಹುಮುಖ ಪ್ರತಿಭಾ ಸಂಪನ್ನ ಕನ್ನಡಿಗ ಎಂ.ಸಿ. ವೆಂಕಟೇಶ್ ನಿಜಕ್ಕೂ ಒಬ್ಬ ಸಹಜ ಕಲಾವಿದ ಹೌದೆಂಬುದು ಉಷಾ ಭರತಾದ್ರಿಯವರ ಸುಸಂಸ್ಕೃತವಾದ ಪಾಂಡಿತ್ಯ ವರದಿ, ಕೆತ್ತನೆಯ ಕಲಾಕೃತಿ ಎಲ್ಲವೂ ಮನಸೂರೆಗೊಂಡುದು ನಿಜ. ಹಾಗೆಯೇ ಕರ್ನಾಟಕದ ನೂತನ ಸಾರಥ್ಯ ಸ್ವೀಕರಿಸಿದ ಸುಳ್ಯದ ಹಳ್ಳಿಯ ರೈತ ಕುಟುಂಬಿಕ ಶ್ರೀ ದೇವರ ಗುಂಡ ವೆಂಕಪ್ಪ ಸದಾನಂದ ಗೌಡರಿಗೆ ಅಭಿಮತ ನೀಡಿದ ಅಭಿನಂದನಾ ದಾಖಲೆ ಕೂಡಾ.

❑ **ಕೀರಿಕ್ಕಾಡು ವನಮಾಲ ಕೇಶವ ಭಟ್ಟ, ಕಾಸರಗೋಡು**

# ನವದೆಹಲಿಯಲ್ಲಿ 22ನೇ ಸಮಾಜ ಸುಧಾರಕರ ದಿನಾಚರಣೆ

ದಿವಂಗತ ಶ್ರೀ ಈಶ್ವರಪ್ಪ ಮುರಗೋಡರ 74ನೆಯ ಜನ್ಮ ದಿನವನ್ನು ಅಕ್ಟೋಬರ್ 8 ಮತ್ತು 9, 2011ರಂದು "ಸನಾತನ ಧರ್ಮ ಮಂದಿರ" ಲೋಧಿ ಕಾಲೋನಿಯಲ್ಲಿ ನಡೆಸಲಾಯಿತು. ಇವರ ಹೆಸರಿನಲ್ಲಿ ನಡೆಯುವ 22ನೆಯ ಸಮಾಜ ಸುಧಾರಕರ ದಿನಾಚರಣೆಯನ್ನು "ಸಾಮಾಜಿಕ ಪ್ರಗತಿಶೀಲ ಸಂಸ್ಥೆ (ರಿ)"ಯ ಅಧ್ಯಕ್ಷರಾದ ಶ್ರೀ ಭೀಮರಾವ್ ಮುರಗೋಡರು ಹಾಗೂ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ವಿ.ವಿ. ಬಿರಾದಾರ ಏರ್ಪಡಿಸಿದ್ದರು.

ಈ ಬಾರಿ ಕಾರ್ಯಕ್ರಮದ ವಿಶೇಷತೆಯೆಂದರೆ ಜಗದ್ವಿಖ್ಯಾತ ಬಸವಣ್ಣನವರ ಹೆಸರಿನಲ್ಲಿ ದೆಹಲಿಯಲ್ಲಿ ಒಂದು ರಸ್ತೆಯನ್ನು ನಿರ್ಮಿಸಲು




ದೆಹಲಿಯ ಮುಖ್ಯಮಂತ್ರಿ ಶ್ರೀಮತಿ ಶೀಲಾ ದೀಕ್ಷಿತ್ ಅವರಿಗೆ ಸಾಮಾಜಿಕ ಸುಧಾರಕ ಪ್ರಗತಿಶೀಲ ಸಂಸ್ಥೆಯವರು ಮನವಿ ಪತ್ರ ನೀಡಿದರು. ಈ ಮನವಿಯನ್ನು ಸಲ್ಲಿಸಲು ಹಾಗೂ ಕಾರ್ಯಕ್ರಮದಲ್ಲಿ ಭಾಗವಹಿಸಲು ಬೆಳಗಾವಿ, ಜಮಖಂಡಿ, ರಾಮದುರ್ಗ ಹಾಗೂ ಹುಬ್ಬಳ್ಳಿಯಿಂದ ಸುಮಾರು 80 ಜನರು ದೆಹಲಿಗೆ ಬಂದಿದ್ದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದ ಈ ಜನ ಸಾಮಾನ್ಯರಿಗೆ ಎರಡು ದಿನ ಉಚಿತ ವಸತಿ ಊಟ ಏರ್ಪಡಿಸಲಾಗಿತ್ತು.

ಬೆಳಗಾವಿಯ ಪರಮೇಶ್ವರ ದೊಡಮನಿ, ಸಂತೋಷ್ ಹೊಂಗಲ್, ಜಮಖಂಡಿಯ ಅಪ್ಪಾಸಾಹೇಬ ಮನಗೂಳಿಯವರು ಹಾಗೂ ದೆಹಲಿಯ "ಸಂಯಕ್ ಭಾರತ" ಪತ್ರಿಕೆಯ ಸಂಪಾದಕ ಕೆ.ಪಿ. ಮೌರ್ಯರವರು ವಿಶೇಷ ಅತಿಥಿಗಳಾಗಿದ್ದರು.

ಬೆಳಗಾವಿಯ ಶ್ರೀಮತಿ ಮಾಲಾ ಪರಮೇಶ್ವರ ದೊಡಮನಿಯವರು ಬುದ್ಧ, ಬಾಬಾ ಸಾಹೇಬ ಹಾಗೂ ಅಂಬೇಡ್ಕರರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು. ಶ್ರೀ ಪರಮೇಶ್ವರ ದೊಡಮನಿ, ಹಾಗೂ ಅಪ್ಪಾಸಾಹೇಬ ಮನಗೂಳಿಯವರು ದೀಪ ಬೆಳಗಿಸಿ ತಮ್ಮ ಭಾಷಣದಲ್ಲಿ ಈಶ್ವರಪ್ಪ ಮುರಗೋಡರನ್ನು ಸ್ಮರಿಸಿ ತಮ್ಮ ಹಳೆಯ ದಿನಗಳನ್ನು ಮೆಲುಕು ಹಾಕಿದರು.

ಪ್ರತಿವರ್ಷದಂತೆ ರಾತ್ರಿ ಪೂರ್ತಿ ಬುದ್ಧ, ಬಸವ, ಬಾಬಾಸಾಹೇಬ ಹಾಗು ಜೈನರ ವಚನಗಳನ್ನು ಹಾಡಲಾಯಿತು. ನಂತರ ಬೆಳಿಗ್ಗೆ ಸುಮಾರು 5.30ಕ್ಕೆ ಶೋಭಾಯಾತ್ರೆ ನೆರವೇರಿಸಿದರು.

ಈ ಕಾರ್ಯಕ್ರಮದಲ್ಲಿ ಬೆಳಗಾಂನ ಮಲ್ಲಿಕಾರ್ಜುನ ತಾಳಿಕೋಟಿ, ರವಿ ಹೊಂಗಲ್, ಹುಬ್ಬಳ್ಳಿಯ ಪ್ರಶಾಂತ ಭಾನಾವಾಲಿಕರ್ ರಾಮದುರ್ಗದ ಶಿವಪ್ಪ ಬೆಳಗಲಿ ಹಾಗೂ ಬೆಂಗಳೂರಿನಿಂದ ಸ್ವರೂಪ್ ಮುರಗೋಡ ಮೊದಲಾದವರು ಭಾಗವಹಿಸಿದ್ದರು.

❑ *ಸುಮಿತಾನಂದ್*

# ಇದ್ದರೂ–ಇಲ್ಲದಿರುವಂತಾದಲ್ಲಿ ಪರಿಣಾಮ ಏನಾದೀತು?–ಒಂದು ಸೂಕ್ಷ್ಮ ಚಿಂತನೆ

ಕೆಲವೊಮ್ಮೆ ಎಲ್ಲವೂ ಇದ್ದರೂ ಇಲ್ಲದಂತೆ, ಎಲ್ಲವನ್ನೂ ಕಳೆದುಕೊಂಡಂತೆಯೇ ಆದಾಗ ಉಳಿಯುವುದಾದರೂ ಏನು? ಎಲ್ಲವೂ ಶೂನ್ಯವಾದಂತಾಗುವುದಿಲ್ಲವೇ?–ಇದುವೇ ಜೀವನದ ರಹಸ್ಯ.

ಆದರೆ ಶೂನ್ಯದಲ್ಲಿ ಸರ್ವಸ್ವವನ್ನು ಕಂಡು–ಅನುಭವಿಸುವವನೇ ಶ್ರೇಷ್ಠನು! ಇದುವೇ ಜೀವನದ ಮಹತ್ವ–ಜೀವನದ ಮಹಿಮೆ!! ಈಗಿನ ಜೀವನದಲ್ಲಿ ಸಾಮಾನ್ಯವಾಗಿ ಕಂಡು ಬರುವ ಕೆಲವೊಂದು ಇದ್ದರೂ–ಇಲ್ಲದಂತಾಗುವ ಸನ್ನಿವೇಶಗಳನ್ನು ಪರಿಶೀಲಿಸೋಣ:

- ನಮ್ಮ ನೆಲ–ನಮಗಿಲ್ಲದ ನೆಲ!
  ನೆಲವೇ ಇಲ್ಲದ ಮೇಲೆ ನಮ್ಮ ನೆಲೆಯಾದರೂ ಎಲ್ಲಿ ಬಂತು? ನೆಲೆ ಇಲ್ಲದವನ ಪರಿಸ್ಥಿತಿಯಾದರೂ ಏನು?
- ನಮ್ಮ ಜನ–ನಮಗಿಲ್ಲದ ಜನ!
  ಜನರೇ ಜನಾಂಗದ ಆಧಾರಸ್ಥಂಭ. ಜನರೇ ಇಲ್ಲದಿರುವಾಗ ಜನಾಂಗ ಉಳಿಯುವುದಾದರೂ ಹೇಗೆ? ಜನಾಂಗದ ಮತ್ತು ಸಮಾಜದ ಗತಿ ಏನು?
- ನಮ್ಮ ಊರು–ನಮಗಿಲ್ಲದ ಊರು!
  ನಮಗೆ ಊರೇ ಇಲ್ಲವಾದರೆ ನಮ್ಮ ನೆಲೆ ಎಲ್ಲಿ? ನಾವು ಯಾವ ಊರವರೆಂದು ಸಂಭೋದಿಸಲಿ?
- ನಮ್ಮ ದೇಶ–ನಮಗಿಲ್ಲದ ದೇಶ!
  ನಮಗೆ ದೇಶ ಇಲ್ಲದ ಮೇಲೆ ನಮ್ಮನ್ನು ಏನೆಂದು ಎಣಿಸುವರು? ಪರದೇಶಿಗಳೆಂದಾ? ಇಲ್ಲವೆ ದೇಶದ್ರೋಹಿಗಳೆಂದಾ? ಈ ಪರಿಸ್ಥಿತಿ ತುಂಬಾ ಗಂಭೀರವೇ?
- ನಮ್ಮ ಸಂಘ–ನಮಗಿಲ್ಲದ ಸಂಘ!
  ಸಂಘಟನೆಯಿಂದ ಸಂಘವಾಗುತ್ತದೆ; ಸಂಘವೇ ಇಲ್ಲವಾದಲ್ಲಿ ಸಂಘಟನೆಗೆ ಏನು ಅರ್ಥ? ಆದರೂ ಮುಂದೆ ಬರಬಹುದಾದ ದುರ್ಘಟನೆಯನ್ನು ತಡೆಯಲಾದರೂ ಸಂಘಟನೆ ಮಾಡುವುದು ಉಪಯುಕ್ತವಲ್ಲವೇ?
- ನಮ್ಮ ಶಾಲೆ–ನಮಗಿಲ್ಲದ ಶಾಲೆ!
  ಶಾಲೆಯೇ ಇಲ್ಲದಿದ್ದರೆ ವಿದ್ಯಾಭ್ಯಾಸ ಮಾಡುವುದಾದರೂ ಹೇಗೆ? ಸರಿಯಾದ ವಿದ್ಯಾಭ್ಯಾಸ ಒದಗದಿದ್ದರೆ ನಮ್ಮ ಯುವ ಪೀಳಿಗೆಯ ಭವಿಷ್ಯವಾದರೂ ಏನು?
- ನಮ್ಮ ಮನೆ–ನಮಗಿಲ್ಲದ ಮನೆ!
  ನೆಲೆಸಲು ಮನೆಯೇ ಇಲ್ಲದಿರುವಾಗ ನಮ್ಮ ನೆಲೆ ಬೀದಿ ಪಾಲಲ್ಲವೆ?
- ನಮ್ಮ ಹಣ–ನಮಗಿಲ್ಲದ ಹಣ!
  ಈಗಿನ ಕಾಲದಲ್ಲಿ ಹಣ ಇಲ್ಲದವ ಹೆಣಕ್ಕೆ ಸಮಾನ. ಹಾಗಾದರೆ ನಾವು ಜೀವ ಇದ್ದರೂ ಸತ್ತಂತೆ ಅಲ್ಲವೇ?
- ನಮ್ಮ ಸರಕಾರ–ನಮಗಿಲ್ಲದ ಸರಕಾರ!
  ಸರಕಾರವೇ ಸರಿ ಇಲ್ಲದ ಮೇಲೆ ನಮಗೆ ಯಾರ ಸಹಕಾರ ದೊರಕೀತು? ಉಳಿದಿರುವುದು ಅಸಹಕಾರವೇ–ಅಸಹಾಯಕತೆಯೇ!
- ನಮ್ಮ ರಾಜಕಾರಣಿಗಳು–ನಮಗಿಲ್ಲದ ರಾಜಕಾರಣಿಗಳು!
  ರಾಜಕಾರಣಿಗಳು ನಮಗಿಲ್ಲವೆಂದ ಮೇಲೆ ನಮ್ಮ ರಾಜ ಕಾರ್ಯಗಳಿಗೆ ಸ್ಪಂದಿಸಿ ನಮಗೆ ಸಹಕರಿಸುವವರಾದರೂ ಯಾರು? ರಾಜಕಾರ್ಯಗಳು ನಡೆಯುವುದಾದರೂ ಹೇಗೆ? ನಮಗಿಲ್ಲದ ರಾಜಕಾರಣಿಗಳು ಕೇವಲ ಅವರ ರಾಜಕೀಯತೆಯಲ್ಲಿ ಮಾತ್ರ ತೊಡಗಿಕೊಂಡರೆ ಸಾಮಾನ್ಯ ಪ್ರಜೆಗಳ ಪಾಡೇನು?

ನಮ್ಮ ಮಿತ್ರ–ನಮಗಿಲ್ಲದ ಮಿತ್ರರಾದರೆ ಜೀವನ ದುಃಖವಾಗುವುದು. ಆದರೆ ನಮ್ಮ ಶತ್ರು–ನಮಗಿಲ್ಲದ ಶತ್ರುಗಳಾದರೆ ಜೀವನ ಕಠಿಣವಾಗಬಹುದು. ಅಂದರೆ ಇದ್ದದ್ದು–ಇಲ್ಲದಂತಾಗದೆ, ಅಳಿಯದೆ–ಉಳಿದರೆ, ಎಲ್ಲೆಡೆ ಸಂತೋಷ, ಸಂಭ್ರಮ, ಶಾಂತಿ ಮತ್ತು ಸಂವೃದ್ಧಿಯಾಗಬಹುದಲ್ಲವೆ?

❑ *ನಿ.ಅ. ಮಾಧವ*

# ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಹಣದ ಸುರಿಮಳೆ ! ! !



ಅಕ್ಟೋಬರ್ 22 ರಂದು ಕರ್ನಾಟಕ ಸಂಘದಲ್ಲಿ ನೆರೆದಿದ್ದ ದೆಹಲಿ ಕನ್ನಡಿಗರ ಕಣ್ಣೆದುರು ಹಣದ ಸುರಿಮಳೆಯಾಗಿತ್ತು! ! ! ಗಾಬರಿಯಾಗಬೇಡಿ, ಇದು ವಿಶ್ವವಿಖ್ಯಾತ ಜಾದೂಗಾರ ಪ್ರೊ. ಶಂಕರ್, ಜೂನಿಯರ್ ಶಂಕರ್ ಹಾಗೂ ಅವರ ತಂಡದವರು ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆಸಿದ 'ಗಿಲಿ ಗಿಲಿ ಮ್ಯಾಜಿಕ್' ಕಾರ್ಯಕ್ರಮದ ಅಂಗವಾಗಿ ನಡೆದ ಜಾದೂ ಪ್ರದರ್ಶನದಲ್ಲಿ ಈ ಹಣದ ಸುರಿಮಳೆಯಾದದ್ದು.

ತಮ್ಮ ಎಳೆಯ ವಯಸ್ಸಿನಲ್ಲಿ (14ನೇ ವರ್ಷದಲ್ಲಿ) ಜಾದೂ ಪ್ರದರ್ಶನವನ್ನು ಪ್ರಪ್ರಥಮ ಬಾರಿಗೆ ಸಾರ್ವಜನಿಕವಾಗಿ ಪ್ರಸ್ತುತಪಡಿಸಿರುವ ಪ್ರೊ.ಶಂಕರ್ ಅವರು ಇದುವರೆಗೆ ವಿಶ್ವದಾದ್ಯಂತ ನೂರಾರು ಪ್ರದರ್ಶನಗಳನ್ನು ನೀಡಿರುವರು. ಅವರ ಪುತ್ರ ಶಂಕರ್ ಜ್ಯೂನಿಯರ್ ತನ್ನ ನಾಲ್ಕನೇ ವಯಸ್ಸಿನಲ್ಲಿ ಮೊತ್ತ ಮೊದಲ ಸಾರ್ವಜನಿಕ ಪ್ರದರ್ಶನ ನೀಡಿ ತನ್ನ ತಂದೆಯ ಹಾದಿಯಲ್ಲಿ ನಡೆದಿದ್ದಾರೆ. 1982ರಲ್ಲಿ ಜ್ಯೂನಿಯರ್ ಶಂಕರ್ ಅವರಿಗೆ ಅಮೇರಿಕದ ಹೂಸ್ಟನ್ ನಲ್ಲಿ ನಡೆದ ಸಮಾರಂಭವೊಂದರಲ್ಲಿ ಸೊಸೈಟಿ ಆಫ್ ಅಮೇರಿಕನ್ ಮ್ಯಾಜಿಷಿಯನ್ಸ್ ಸಂಸ್ಥೆಯು ವಿಶ್ವದ ಅತೀ ಕಿರಿ ವಯಸ್ಸಿನ ಮ್ಯಾಜಿಷಿಯನ್ ಎಂದು ಗೌರವಿಸಿತ್ತು.

ಸಂಘದಲ್ಲಿ ಸುಮಾರು ಎರಡು ತಾಸು ನೀಡಿದ ಜಾದೂ ಪ್ರದರ್ಶನದಲ್ಲಿ ತಮ್ಮ ಪ್ರಖ್ಯಾತ ಜಾದೂಗಳಾಗಿರುವ ಕೈಕಾಲುಗಳನ್ನು ಬಂಧಿಸಿಟ್ಟರೂ ಅವುಗಳಿಂದ ಹೊರಬರುವುದು ಮತ್ತು ಪುನಃ ಬಂಧನಕ್ಕೆ ಒಳಗಾಗುವುದು, ಬಾಕ್ಸ್‌ನಲ್ಲಿ ಮಾಯವಾಗುವುದು, ಟಿವಿಯನ್ನೇ ಸಂಪೂರ್ಣವಾಗಿ ಇಲ್ಲದಂತೆ ಮಾಡುವುದು, ರಿಂಗ್ ಕೈಚಳಕ, ಹಣದ ಸುರಿಮಳೆ, ಮುಂತಾದ ಪ್ರದರ್ಶನಗಳನ್ನು ನೀಡಿ ದೆಹಲಿ ಕನ್ನಡಿಗರನ್ನು ಮಂತ್ರಮುಗ್ದರನ್ನಾಗಿಸಿದರು. ತಾವು ಜಾದೂ ಮಾಡುವುದಲ್ಲದೇ ಸಭಿಕರಿಂದಲೂ ಜಾದೂ ಮಾಡಿಸಿ ತೋರಿಸಿದರು.

ಇಡೀ ಶಂಕರ್ ಕುಟುಂಬವೇ ಈ ಜಾದೂ ಪ್ರದರ್ಶನದಲ್ಲಿ ತೊಡಗಿಸಿಕೊಂಡಿದೆ. ಇವರಿಗೆ ಹೆಚ್ಚಿನ ಅಂತರರಾಷ್ಟ್ರೀಯ ಮಟ್ಟದಲ್ಲಿ ಯಶಸ್ಸು ಸಿಗಲಿ ಎಂಬುದು ದೆಹಲಿ ಕನ್ನಡಿಗರ ಹಾರೈಕೆ.

❑ *ಕೆ.ಆರ್. ರಾಮಮೂರ್ತಿ*



## ಅರವಿಂದ ಕನ್ನಡ ಪ್ರಶಸ್ತಿಗೆ ಬಾ. ಸಾಮಗ ಆಯ್ಕೆ



'ದೆಹಲಿ ಕನ್ನಡಿಗ' ಪತ್ರಿಕೆ ಸಂಪಾದಕ ಬಾ. ಸಾಮಗ ಅವರು ಬೆಳಗಾವಿಯ ನಾಡೋಜ ಪ್ರತಿಷ್ಠಾನ ಸ್ಥಾಪಿಸಿರುವ ಈ ವರ್ಷದ ಪ್ರತಿಷ್ಠಿತ ಅರವಿಂದ ಕನ್ನಡ ಪ್ರಶಸ್ತಿಗೆ ಆಯ್ಕೆ ಆಗಿದ್ದಾರೆ. ಬೆಳಗಾವಿಯಲ್ಲಿ ಡಿಸೆಂಬರ್ 4ರಂದು ನಡೆಯುವ ಸಮಾರಂಭದಲ್ಲಿ ಹೊರನಾಡಿನಲ್ಲಿ ಕನ್ನಡಾಭಿವೃದ್ಧಿಗೆ ಗಣನೀಯ ಸೇವೆ ಸಲ್ಲಿಸಿದ ಬಾ. ಸಾಮಗ ಅವರಿಗೆ ಪ್ರಶಸ್ತಿ ನೀಡಲಾಗುವುದು.

## ಉಚಿತ ವೈದ್ಯಕೀಯ ತಪಾಸಣೆ

ನವೆಂಬರ್ ತಿಂಗಳ 27ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿ ವಿನಂತಿ.




# ಕರ್ನಾಟಕ ಸರ್ಕಾರದಿಂದ ದೆಹಲಿ ಕನ್ನಡ ಶಾಲೆಯ ಮಕ್ಕಳಿಗೆ ಸಾರಿಗೆ ಸೌಲಭ್ಯ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಸುವರ್ಣ ಸಂಭ್ರಮ. ಇದು ದೆಹಲಿಯಲ್ಲಿ ಕನ್ನಡಿಗರ ಹೆಮ್ಮೆಯ ಸಂಸ್ಥೆ. ಭಾಷಾ ಅಲ್ಪಸಂಖ್ಯಾತರಾಗಿರುವ ಕನ್ನಡಿಗರು ಬಹಳ ಎಚ್ಚರಿಕೆಯಿಂದ ಮುಂದಿನ ಪೀಳಿಗೆಗಾಗಿ ಉಳಿಸಿ ಬೆಳೆಸಬೇಕಾದ ಗುರುತರ ಜವಾಬ್ದಾರಿ ಇದೆ. ದೆಹಲಿಯ ಅತ್ಯಂತ ಪ್ರಸಕ್ತವಾದ, ಹಾಗೂ ಪ್ರತಿಷ್ಠಿತ ಜಾಗದಲ್ಲಿ ಸುಮಾರು ಎರಡು ಎಕರೆ ವಿಸ್ತೀರ್ಣದಲ್ಲಿ ವಿಶಾಲವಾದ ಆಟದ ಮೈದಾನದೊಂದಿಗೆ ಸಾಕಷ್ಟು ವಿಸ್ತಾರದ ಕಟ್ಟಡ, 1000ಕ್ಕೂ ಹೆಚ್ಚು ಮಕ್ಕಳು, ನುರಿತ ಶಿಕ್ಷಕರು, ಶಾಲೆ ನಡೆಸಲು ಬೇಕಾದ ಆರ್ಥಿಕ ವ್ಯವಸ್ಥೆ, ರಾಜ್ಯ ಸರಕಾರದ ಅನುದಾನ ಎಲ್ಲವೂ ಇವೆ. ಹಾಗೆಂದು ಆಗಬೇಕಾದ ಕೆಲಸಗಳಿಗೇನೂ ಕಡಿಮೆಯಿಲ್ಲ. ಮೂಲ ಸೌಲಭ್ಯಗಳ ಕೊರತೆ ಇನ್ನೂ ಇದೆ. ದೆಹಲಿಯ ಸ್ಪರ್ಧಾತ್ಮಕ ಶಿಕ್ಷಣ ವ್ಯವಸ್ಥೆಯಲ್ಲಿ ಸಂಸ್ಥೆ ತನ್ನನ್ನು ತಾನು ಗಟ್ಟಿಗೊಳಿಸಬೇಕಾಗಿದೆ. ದೂರದ ಪ್ರದೇಶಗಳ ಕನ್ನಡಿಗರು ಇದರ ಪ್ರಯೋಜನ ಪಡೆಯಬೇಕಾಗಿದೆ. ಅಷ್ಟೊಂದು ದೂರದಿಂದ ಮಕ್ಕಳು ಶಾಲೆಗೆ ಬರಬೇಕಾದರೆ, ಸಂಚಾರ ವ್ಯವಸ್ಥೆ ಬೇಕು. ಅದಕ್ಕಾಗಿ ತಗಲುವ ಖರ್ಚು–ವೆಚ್ಚ ಇವೆರಡೂ ಬಿಡಿಸಲಾರದ ಕಗ್ಗಂಟಾದ ಸಮಯದಲ್ಲಿಯೇ, ಕರ್ನಾಟಕ ಸರಕಾರ, ಕನ್ನಡದ ಮಕ್ಕಳ ಸವಲತ್ತಿಗಾಗಿ 50 ಲಕ್ಷ ರೂಪಾಯಿಗಳನ್ನು ನೀಡಿ 2 ಬಸ್ಸುಗಳನ್ನು ಒದಗಿಸುವ ಅನುಕೂಲ ಮಾಡಿಕೊಡುವುದರ ಮೂಲಕ, ದೆಹಲಿಯ ಕನ್ನಡಿಗರಲ್ಲಿ ಮತ್ತೆ ಹೊಸ ಆಶಾಕಿರಣವನ್ನು ಮೂಡಿಸಿದೆ.

ಪ್ರಸ್ತುತ ಆಡಳಿತ ಮಂಡಳಿಯ ಕಾಲಾವಧಿ ಮುಗಿಯುತ್ತಾ ಬಂದಿದೆ. ಸುವರ್ಣ ವರ್ಷವೂ ಮುಗಿದಿದೆ. ಸಾಧನೆಯ ಹೊಸ ಮೆಟ್ಟಿಲನ್ನು ಏರಿಲ್ಲವೇನೋ ಎಂದು ನಮಗೆ ಅನಿಸುತ್ತಿರುವಾಗಲೇ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಶ್ರೀ ಆಂಜನಿ ಗೌಡರು, ನಮ್ಮ ಸಂಸ್ಥೆಗೆ ಕರ್ನಾಟಕ ಸರಕಾರದಿಂದ ಈಗಾಗಲೇ 50 ಲಕ್ಷ ರೂಪಾಯಿಗಳ (2 ಬಸ್ಸುಗಳಿಗಾಗಿ) ಅನುದಾನ ಬಂದಿದೆ ಎಂದು ಘೋಷಿಸಿ ಸಂತೋಷದ ಸುದ್ದಿಯನ್ನು ಹಂಚಿಕೊಂಡಿದ್ದಾರೆ. ಜೊತೆಗೆ ಜವಾಬ್ದಾರಿಯ ಇನ್ನೊಂದು ಹೊರೆಯನ್ನು ತಮ್ಮ ಹೆಗಲ ಮೇಲೇರಿಸಿಕೊಂಡಿದ್ದಾರೆ. ಶಿಕ್ಷಣ ಸಂಸ್ಥೆಯ ಬೋರ್ಡಿನಲ್ಲಿರುವ ಕಾರ್ಯಕಾರಿ ಪದಾಧಿಕಾರಿಗಳ ಶ್ರಮ ಇಲ್ಲಿರುವುದು ವೇದ್ಯವಾಗಿದೆ. ಅಭಿನಂದನೆಗಳು. ಗೌರವ ಕಾರ್ಯದರ್ಶಿ ಮತ್ತು ಖಜಾಂಚಿಯವರ ಜವಾಬ್ದಾರಿ ಈಗ ಮತ್ತಷ್ಟು ಹೆಚ್ಚಿದೆ. ಏಕೆಂದರೆ, 50 ಲಕ್ಷ ರೂಪಾಯಿಗಳನ್ನು ಕೊಡುವುದರ ಜೊತೆಗೆ ಕನ್ನಡದ ಮಕ್ಕಳಿಗೆ ಸಾರಿಗೆಯನ್ನು ಒದಗಿಸಬೇಕು ಎಂದು ಕರ್ನಾಟಕ ಸರಕಾರ ಆದೇಶ ಮಾಡಿದೆ. 15–16 ಬಸ್ಸುಗಳಲ್ಲಿ 2 ಬಸ್‌ಗಳನ್ನು ಸರಕಾರ ಒದಗಿಸಿದೆಯಾದರೂ, ಹೆಚ್ಚುತ್ತಿರುವ ಇಂಧನ ಬೆಲೆಯ ನಡುವೆ ಸಮತೂಗಿಸಿಕೊಂಡು ಹೋಗುವುದು ಸುಲಭದ ಕೆಲಸವೇನಲ್ಲ.

ಸುವರ್ಣ ಮಹೋತ್ಸವವದ ಅಂಗವಾಗಿ ಬರಬೇಕಾಗಿದ್ದ ಬಹು ಉದ್ದೇಶಿತ ಶೈಕ್ಷಣಿಕ ಸಮುಚ್ಚಯ–ಮಲ್ಟಿ ಪರ್ಪಸ್ ಎಜ್ಯುಕೇಶನಲ್ ಕಾಂಪ್ಲೆಕ್ಸ್ (MPEC) ಯೋಜನೆ ಹಿಂದುಳಿದಂತೆ ತೋರುತ್ತದೆ. ಕರ್ನಾಟಕ ಸರಕಾರ ಇದಕ್ಕಾಗಿ 1 ಕೋಟಿ ರೂಪಾಯಿಗಳ ಅನುದಾನ ನೀಡುವುದಾಗಿ ಸೂಚಿಸಿದೆ. ಆಡಳಿತ ಮಂಡಳಿ ಇದನ್ನು ತರುವುದಕ್ಕಾಗಿ ಎಲ್ಲಾ ಕೆಲಸಗಳನ್ನೂ ಸಹ ಮಾಡುತ್ತಿದೆ ಎಂಬುದು ಶ್ರೀ ಆಂಜನಿ ಗೌಡರ ಅಂಬೋಣ. ಈ ಹಿನ್ನೆಲೆಯಲ್ಲಿ, ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರಾದ ಶ್ರೀ ಕೆ. ಜಿ. ಬೋಪಯ್ಯ, ಇಂದಿನ ವಿಧಾನ ಮಂಡಲದ ಕಾರ್ಯದರ್ಶಿ ಶ್ರೀ ಓಂಪ್ರಕಾಶ್, ಸರಕಾರದ ವಿಶೇಷ ಪ್ರತಿನಿಧಿಗಳಾದ ಶ್ರೀ ವಿ. ಧನಂಜಯ ಕುಮಾರ್, ಶ್ರೀ ಬೈಕೆರೆ ನಾಗೇಶ್, ಕರ್ನಾಟಕ ಭವನದಲ್ಲಿರುವ ನಮ್ಮವರೇ ಆದ ಶ್ರೀ ಬಿ. ಪ್ರದೀಪ್ ರಾವ್, ಇವರೆಲ್ಲರೂ ಸಹಾಯ ಮಾಡಿದ್ದಾರೆಂದು ಗೌಡರು ಮತ್ತೆ ಮತ್ತೆ ಸ್ಮರಿಸಿಕೊಳ್ಳುತ್ತಾರೆ. ಅವರೆಲ್ಲರಿಗೆ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

ಹಣಕಾಸಿನ ಬಗ್ಗೆ ಹೇಳುವುದಾದರೆ, ದೆಹಲಿ ಶಿಕ್ಷಣ ಸಂಸ್ಥೆ ಹಿಂದೆಂದಿಗಿಂತಲೂ ಹೆಚ್ಚು ಸಮರ್ಥವಾಗಿದ್ದು, ನಾಲ್ಕು ಕೋಟಿ ರೂಪಾಯಿಗಳ ಸಮುಚ್ಚಯ ನಿರ್ಮಾಣದ ನನಸಾಗಿಸಬಹುದಾದ ಕನಸನ್ನು ಈಗ ಕಾಣುವಂತಾಗಿದೆ ಎನ್ನುತ್ತಾರೆ ಖಜಾಂಚಿ ಶ್ರೀ ಬಸವರಾಜ್ ಮೇಟಿಯವರು.

ಆಡಳಿತ ಮಂಡಳಿ ಸಕ್ರಿಯವಾಗಿದ್ದರೆ, ಸಹಾಯ ಬಂದೇ ಬರುತ್ತದೆ. ಆಡಳಿತ ಮಂಡಳಿ ಒಳ್ಳೆಯ ಕೆಲಸಗಳನ್ನು ಮಾಡಿದಾಗ ಗುರುತಿಸಿ ಶ್ಲಾಘಿಸಬೇಕಾದ್ದು ನಮ್ಮ ಕರ್ತವ್ಯ. ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಶಿಕ್ಷಣ ಸಂಸ್ಥೆ, ಇಂದೋರ್‌ನ ಕನ್ನಡ ಸಂಘ–ಹೀಗೆ ಹೊರನಾಡ ಕನ್ನಡ ಸಂಘ ಸಂಸ್ಥೆಗಳ ಆಶೋತ್ತರಗಳಿಗೆ ಕರ್ನಾಟಕದ ಪ್ರಸ್ತುತ ಸರಕಾರ, ಹಿಂದಿನ ಎಲ್ಲಾ ಸರಕಾರಗಳಿಗಿಂತ ಸ್ಪಂದಿಸಿದೆ ಎನ್ನುವುದು ಗಮನಾರ್ಹ ಅಂಶವಾಗಿದೆ.

❑ *ಸರವು ಕೃಷ್ಣ ಭಟ್ಟ*

# ಅಂತರಾಷ್ಟ್ರೀಯ ಸಾರ್ವಜನಿಕ ಸಂಪರ್ಕ ಅಧಿವೇಶನದಲ್ಲಿ ಭಾರತದ ಪ್ರತಿನಿಧಿಯಾಗಿ ಜಯಪ್ರಕಾಶ್ ಪುತ್ತೂರು



ಕರ್ನಾಟಕ ರಾಜ್ಯದ ಹಿರಿಯ ಸಾರ್ವಜನಿಕ ಸಂಪರ್ಕ ತಜ್ಞ ಶ್ರೀ ಕೆ.ಜಯಪ್ರಕಾಶ್ ರಾವ್ ಅಮೆರಿಕಾದ ಓರ್ಲಂಡೋದಲ್ಲಿ ಅಕ್ಟೋಬರ್ 15ರಿಂದ 18ರವರೆಗೆ ಜರುಗಿದ ಅಂತರಾಷ್ಟ್ರೀಯ ಸಾರ್ವಜನಿಕ ಸಂಪರ್ಕ ಮಹಾ ಅಧಿವೇಶನದಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಪ್ರಸ್ತುತ ಕೇಂದ್ರ ರಕ್ಷಣಾ ಇಲಾಖೆಯ ಸಂಶೋಧನೆ ಹಾಗೂ ಅಭಿವೃದ್ಧಿ ವಿಭಾಗದ ದಕ್ಷಿಣ ಭಾರತದ ಪ್ರಾದೇಶಿಕ ಸಾರ್ವಜನಿಕ ಸಂಪರ್ಕಾಧಿಕಾರಿ ಆಗಿ ಬೆಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿರುವ ರಾವ್ ಭಾರತೀಯ ಸಾರ್ವಜನಿಕ ಸಂಪರ್ಕ ಪರಿಷತ್ತಿನ ರಾಷ್ಟ್ರೀಯ ನಿರ್ದೇಶಕರಾಗಿದ್ದಾರೆ. ಜೂನಿಯರ್ ಛೇಂಬರ್ ಇಂಟರ್‌ನ್ಯಾಶನಲ್ ಸಂಸ್ಥೆಯ ಅಂತರಾಷ್ಟ್ರೀಯ ತರಬೇತುದಾರರಾಗಿರುವ ರಾವ್ ಕಳೆದ 2 ದಶಕದಲ್ಲಿ 600ಕ್ಕೂ ಹೆಚ್ಚು ತರಬೇತಿ ಕಾರ್ಯಕ್ರಮಗಳನ್ನು ನಾಡಿನ ಯುವ ಜನತೆಗಾಗಿ ನಡೆಸಿಕೊಟ್ಟಿದ್ದಾರೆ. ಮಾತ್ರವಲ್ಲದೆ ಹಲವಾರು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದಾರೆ. ಈ ವರ್ಷ ಚಂಡೀಗಢದಲ್ಲಿ ಜರುಗಿದ ರಾಷ್ಟ್ರೀಯ ಅಧಿವೇಶನದಲ್ಲಿ ಸಾರ್ವಜನಿಕ ಸಂಪರ್ಕ ಕ್ಷೇತ್ರದ ಅತ್ಯುನ್ನತ ಗೌರವವಾಗಿರುವ 'ಹಾಲ್ ಆಫ್ ಫೇಮ್' ಪ್ರಶಸ್ತಿ ಸ್ವೀಕರಿಸಿರುವ ರಾವ್ ಸಿಂಡಿಕೇಟ್ ಬ್ಯಾಂಕ್, ಎ.ಡಿ.ಎ. ಅಂತಹ ಖ್ಯಾತ ಸಂಸ್ಥೆಗಳಲ್ಲಿ ಅಧಿಕಾರಿ ಆಗಿ ಸ್ತುತ್ಯಾರ್ಹ ಸೇವೆ ಸಲ್ಲಿಸಿದ್ದಲ್ಲದೇ 2008ರಲ್ಲಿ ಅತ್ಯುತ್ತಮ ಕಾರ್ಯಕ್ಷಮತೆಗಾಗಿ ರಾಷ್ಟ್ರೀಯ ಪ್ರಶಸ್ತಿ ಪಡೆದಿದ್ದಾರೆ. ಕನ್ನಡದ ಲೇಖಕರಾಗಿ ಹಲವಾರು ಲೇಖನಗಳನ್ನು ಪ್ರಕಟಿಸಿರುವ ರಾವ್, ಡಾ. ಅಬ್ದುಲ್ ಕಲಾಂ ಅವರ ಜೀವನ ಚರಿತ್ರೆ 'ಅಗ್ನಿಯ ರೆಕ್ಕೆಗಳು' ಕೃತಿಯನ್ನು ಕನ್ನಡಕ್ಕೆ ಅನುವಾದಿಸಿ ತಮ್ಮ ಪ್ರೌಢಿಮೆ ಮೆರೆದಿದ್ದಾರೆ. ಹಲವಾರು–ಸಂಘ ಸಂಸ್ಥೆಗಳ ಕಾರ್ಯಕರ್ತರಾಗಿ ದುಡಿದ ರಾವ್ ಗೌರವ ಉಪನ್ಯಾಸಕರಾಗಿಯೂ ಹೆಸರುಗಳಿಸಿದ್ದಾರೆ. ಮುಖ್ಯವಾಗಿ ರಕ್ಷಣಾ ಇಲಾಖೆಯ ಪ್ರತಿಷ್ಠೆ ವೃದ್ಧಿಸುವ ಕಾರ್ಯಕ್ರಮಗಳ ಸಂಯೋಜನೆಯಲ್ಲಿ ಶ್ರೀ ರಾವ್ ಗಣನೀಯವಾದ ಕೊಡುಗೆ ನೀಡಿದ್ದಾರೆ. ತಮ್ಮ ಕಾರ್ಯಕ್ಷೇತ್ರದಲ್ಲಿ ಸಾಧನೆ ಮಾಡಿರುವ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿರುವ ಜಯಪ್ರಕಾಶ್ ರಾವ್ ಅವರಿಗೆ ದೆಹಲಿ ಕನ್ನಡಿಗರ ಪರವಾಗಿ ಅಭಿನಂದಿಸುತ್ತೇವೆ.

## ದೆಹಲಿ ಕನ್ನಡಿಗರಿಗೊಂದು –ಬ್ರೇಕಿಂಗ್ ನ್ಯೂಸ್

ಕರ್ನಾಟಕದ ಹೆಮ್ಮೆಯ ಡೆಕ್ಕನ್ ಹೆರಾಲ್ಡ್ ಪತ್ರಿಕೆ ಇದೀಗ ದೆಹಲಿಗೂ ಕಾಲಿಡುತ್ತಿದೆ.

ಕನ್ನಡಿಗರ ಮನೆ–ಮನದಲ್ಲಿ ಶಾಶ್ವತ ಸ್ಥಾನ ಪಡೆದಿರುವ ಪ್ರಜಾವಾಣಿ ಬಳಗದ ಡೆಕ್ಕನ್ ಹೆರಾಲ್ಡ್ ದೆಹಲಿ ಆವೃತ್ತಿಯ ಚೊಚ್ಚಲ ಸಂಚಿಕೆ ಡಿಸೆಂಬರ್ 11ರಂದು ಓದುಗರಿಗೆ ಸಮರ್ಪಣೆ ಆಗಲಿದೆ.

ದಿ ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್ ಸಂಸ್ಥೆಯ ಡೆಕ್ಕನ್ ಹೆರಾಲ್ಡ್ ಈಗಾಗಲೇ ಏಕ ಕಾಲಕ್ಕೆ ಬೆಂಗಳೂರು, ಮೈಸೂರು, ದಾವಣಗೆರೆ, ಹುಬ್ಬಳ್ಳಿ–ಧಾರವಾಡ, ಗುಲ್ಬರ್ಗಾ ಮತ್ತು ಮಂಗಳೂರಿನಲ್ಲಿ ಪ್ರಕಟವಾಗುತ್ತಿದೆ. 63 ವರ್ಷಗಳಿಂದ ಪ್ರಕಟವಾಗುತ್ತಿರುವ ಡೆಕ್ಕನ್ ಹೆರಾಲ್ಡ್ ದೇಶದ ರಾಜಧಾನಿಗೂ ಪಾದಾರ್ಪಣೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ. ಓದುಗರ ತುಂಬು ಹೃದಯದ ಸಹಕಾರ, ಬೆಂಬಲ ದೊರೆಯಲಿದೆ ಎಂಬ ನಂಬಿಕೆ ನಮ್ಮದು.

❑ **ಡೆಕ್ಕನ್ ಹೆರಾಲ್ಡ್ ಬಳಗ**

ಕವನ

# ಪ್ರಾರ್ಥನೆ

ಬನ್ನಿ ಕೈ ಜೋಡಿಸುವ ನಾವು
ಪ್ರಾರ್ಥನೆಯ ಸಂಪ್ರದಾಯ ಮರೆತಿರುವ ನಾವು
ಪ್ರೇಮದ ನೋವಿನ ಹೊರತು ನಮಗೆ
ನೆನಪಿಲ್ಲ ಯಾವುದೆ ವಿಗ್ರಹ, ಯಾವುದೆ ದೇವರು

ಬನ್ನಿ ಪ್ರಾರ್ಥಿಸೋಣ, ಸಂದ ದಿನಗಳ ಕಹಿಯಲ್ಲಿ
ಈ ಪ್ರಪಂಚ ತುಂಬಲಿ ಭವಿಷ್ಯದ ಸಿಹಿ
ಕಾಲದ ಬಿಸಿ ಭಾರವಾಗುತಿದೆ ಅವರಿಗೆ
ಅವರ ಕಣ್ಣಿನ ಮೇಲಿನ ಹಗಲಿರುಳಿನ ಹೊರೆ ತಗ್ಗಲಿ

ಯಾರ ಕಣ್ಣಿಗೆ ಮುಂಜಾವಿನ ದಿಕ್ಕಿನ ಸ್ನೇಹವಿಲ್ಲವೋ
ಅವರ ರಾತ್ರಿಗಳಲಿ ದೀಪವೊಂದು ಬೆಳಗಲಿ
ಯಾರ ಹೆಜ್ಜೆಗೆ ಇಲ್ಲವೊ ಯಾವುದೆ ಹಾದಿಯ ಆಧಾರ
ಅವರ ಕಣ್ಣೆದುರು ದಾರಿಯೊಂದು ಬೆಳಗಲಿ

ಸುಳ್ಳು ಕಪಟತನದ ದೇವರನ್ನು ಪಾಲಿಸುವವರಿಗೆ
ಧರ್ಮ ತಿರಸ್ಕರಿಸುವ ಧೈರ್ಯ, ಅನ್ವೇಷಣೆಯ ಎದೆಗಾರಿಕೆ ಬರಲಿ
ದಮನದ ಖಡ್ಗ ಎದುರಿಸುತ್ತಿರುವ ತಲೆಗಳಿಗೆ
ಕೊಲೆಗಾರನ ಕೈಗಳ ಕಿತ್ತೆಸೆಯುವ ಪ್ರೇರಣೆ ಸಿಗಲಿ

ಯಾರ ಪ್ರೀತಿಯ ಕಾವು ಅಡಗಿದೆಯೋ ಅವನೆದುರು
ಬಹಿರಂಗವಾಗಲಿ ಪ್ರೀತಿ, ಬಿಸಿ ತಣ್ಣಗಾಗಲಿ
ಸತ್ಯದ ಮಾತು ಚುಚ್ಚುತ್ತದೆ ಎದೆಯಲಿ ಮುಳ್ಳಿನಂತೆ
ಪ್ರಕಟವಾಗಲಿಂದು ಸತ್ಯ, ಎದೆಯ ಚುಚ್ಚುವಿಕೆ ನಿಲ್ಲಲಿ

❑ *ಅನುವಾದ : ಎಲ್.ಕೆ. ಅತೀಕ್*

(ಉರ್ದು ಕವಿ ಫೈಝ್  ಅಹ್ಮದ್ ಫೈಝ್ ಅವರ ಕವಿತೆಯ ಅನುವಾದ

# ಆಶಯ

ಕಾವ್ಯ ಹಾಡಾಗಲಿ
ಕಾವ್ಯ ದನಿಯಾಗಲಿ.
ಕಾವ್ಯ ಕನ್ನಡದ
ಸಿಹಿ ನುಡಿಯಾಗಲಿ ॥
ಕಾವ್ಯ ಹಸಿರಾಗಲಿ
ಕಾವ್ಯ ಹೂವಾಗಲಿ.
ಕಾವ್ಯ ಕಂಪಿನ
ಕಸ್ತೂರಿಯಾಗಲಿ ॥
ಕಾವ್ಯ ಹಾಲಾಗಲಿ
ಕಾವ್ಯ ಜೇನಾಗಲಿ.
ಕಾವ್ಯ ಬಾಂಧವ್ಯದ
ಮಧುರತೆಯಾಗಲಿ ॥
ಕಾವ್ಯ ನೀರಾಗಲಿ
ಕಾವ್ಯ ನದಿಯಾಗಲಿ.
ಕಾವ್ಯ ಈ ಭುವಿಯ
ಜೀವನವಾಗಲಿ ॥
ಕಾವ್ಯ ಬಾನಾಗಲಿ
ಕಾವ್ಯ ಭಾನುವಾಗಲಿ.
ಕಾವ್ಯ ಬದುಕಿನ
ಚೈತನ್ಯವಾಗಲಿ ॥
ಕಾವ್ಯ ನೀನಾಗಲಿ
ಕಾವ್ಯ ನಾನಾಗಲಿ.
ಕಾವ್ಯ ಭಾವವಾಗಿ
ಜೀವ ಮಾಗಲಿ ॥

❑ *ನೂತನ್ ಆರ್. ಕುಲಕರ್ಣಿ*

ಮಕ್ಕಳ ದಿನಾಚರಣೆಯ ಶುಭಾಶಯಗಳು



ಪುಟಾಣಿ ವಾಸುಕಿ

# ಯಾವ ಕತ್ತೆಯ ಮುಂದೆ....?!

ಇಂಟರ್‌ನೆಟ್‌ನಲ್ಲಿ ಕನ್ನಡ ವಾರ್ತಾ ಪತ್ರಿಕೆಯೊಂದನ್ನು ಓದುತ್ತಿದ್ದೆ. "ಉಚಿತ ಕ್ಷೌರ-ಕತ್ತೆಗಳ ಅಭಿವೃದ್ಧಿ" ಎಂಬ ಶೀರ್ಷಿಕೆಯೊಂದಿಗೆ ವಾರ್ತೆಯೊಂದು ಕಣ್ಣಿಗೆ ಬಿತ್ತು. ಶೀರ್ಷಿಕೆಯನ್ನು ಓದಿ ಸ್ವಲ್ಪ ಹೊತ್ತು ಮಂಕಾದೆ. ಏನೀ ಶೀರ್ಷಿಕೆ? ಕ್ಷೌರಕ್ಕೂ ಕತ್ತೆಗೂ ಎತ್ತಣ ಸಂಬಂಧ? ಏನಾದರೂ ಮುದ್ರಣ ದೋಷವಿರಬಹುದೇ? ಎಂದು ತಲೆಯನ್ನು ಕೆರೆದುಕೊಂಡೆ. ತಲೆಯ ತುಂಬಾ ಕೂದಲು ಬೆಳೆದಿದ್ದು ಕ್ಷೌರ ಮಾಡಿಸಿಕೊಳ್ಳುವ ಅಗತ್ಯ ಕಂಡುಬಂದಿತು.

ಈಗಲೇ ಕ್ಷೌರ ಮಾಡಿಸಿಕೊಳ್ಳಬೇಕೆ, ಸರ್ಕಾರದ ಮೇಲಿನ ಸ್ಕೀಮ್ ಬರುವವರೆಗೂ ಕಾಯಬೇಕೆ ಎಂದು ಆಲೋಚಿಸುವುದರಲ್ಲಿ ಮುಂದಿನ ವಾರ್ತೆಯನ್ನು ಓದಲೇ ಇಲ್ಲ. ಸರ್ಕಾರದ ಸ್ಕೀಮ್ ಬಂದರೆ ಉಚಿತ ಕ್ಷೌರ ಮಾಡಿಸಿಕೊಳ್ಳಬಹುದು-ಸ್ವಲ್ಪ ದಿವಸಗಳು ಕಾದರಾಯಿತು ಅಂದುಕೊಂಡೆ. ಕೋತಿ ಮನಸ್ಸು! ಕೂಡಲೇ "ಅಯ್ಯಯ್ಯೋ ಬೇಡ...ಕತ್ತೆಗಳ ಅಭಿವೃದ್ಧಿ ಅನ್ನುತ್ತಿದ್ದಾರೆ_ಕತ್ತೆಗಳ ಕೈಗೇನಾದರೂ ಕತ್ತಿ, ಕತ್ತರಿಗಳನ್ನು ಕೊಟ್ಟು ನಮ್ಮ ಮೇಲೆ ಪ್ರಯೋಗ ಮಾಡಬಹುದು" ಎಂದು ಹೇಳಿತು.

ಉಚಿತ ಕ್ಷೌರಕ್ಕೂ, ಕತ್ತೆಗಳ ಅಭಿವೃದ್ಧಿಗೂ ಸಂಬಂಧವಿದೆಯೋ ಇಲ್ಲವೋ ತಿಳಿಯದಾಗಲೀ, ನನ್ನ ಮಟ್ಟಿಗೆ ಹೇಳುವುದಾದರೆ ಕ್ಷೌರಕ್ಕೂ ಕತ್ತೆಗೂ ಸಂಬಂಧವಿದೆ! ಅದನ್ನು ತಿಳಿಸಲು ನಿಮ್ಮನ್ನು ಐವತ್ತೊಂದು ವರ್ಷಗಳಷ್ಟು ಹಿಂದಕ್ಕೆ ಕರೆದೊಯ್ಯುತ್ತಿದ್ದೇನೆ.

1959 ನೇ ಇಸವಿಯ ಜೂನ್ ತಿಂಗಳು. ಒಂಬತ್ತು ತುಂಬಿದ್ದ ನನ್ನನ್ನು ಬಳ್ಳಾರಿಯ ಮುನಿಸಿಪಲ್ ಹೈಸ್ಕೂಲಿನಲ್ಲಿ ಆರನೇ ತರಗತಿಗೆ ಸೇರಿಸಿದ್ದರು. ಬಾಲಕೃಷ್ಣ ಎಂಬ ನನ್ನ ಹೆಸರಿನಲ್ಲಿ ಬಾಲವನ್ನು ಕಟ್ ಮಾಡಿ ಮೂರ್ತಿ ಎಂಬ ವಿಗ್ರಹವನ್ನು ಜೋಡಿಸಿ ಕೃಷ್ಣಮೂರ್ತಿ ಎಂದು ಮತ್ತೊಮ್ಮೆ ನಾಮಕರಣ ಮಾಡಿದ್ದರು ಸೇರಿಸುವಾಗ. ಮೇಲೆ ಮಂಗಳೂರು ಹೆಂಚುಗಳು_ಕೆಳಗೆ ಕಡಪ ಕರಿ ಬಂಡೆಗಳು-ಗುರುಗಳಿಗೆ ಮಾತ್ರ ಒಂದು ಮೇಜು ಮತ್ತು ಒಂದು ಕುರ್ಚಿ ಎಲ್ಲ ಸೇರಿ ಕನ್ನಡ ಮೀಡಿಯಂನ 'ಡಿ' ಸೆಕ್ಷನ್ ಆದಾಗಿತ್ತು. ಮುಖ್ಯ ಗುರುಗಳು ಶ್ರೀ ಜೆ. ಶ್ರೀನಿವಾಸಾಚಾರ್ ಅವರು. ಕಪ್ಪು ಬಿಳಿ ಮಿಶ್ರಿತ ಸಣ್ಣ ಕೂದಲುಗಳು. ಹಣೆಯ ಮೇಲೆ ರಾರಾಜಿಸುವ ಅಕ್ಷತೆ, ಅರ್ಧ ತೋಳಿನ ಅಂಗಿ, ಧೋತ್ರ,, ಸ್ವಲ್ಪ ಬಾಗಿದಂತಿದ್ದ ಕಾಲುಗಳಿಂದ ನಡೆಯುತ್ತಿದ್ದ ಅವರು ನಮಗೆ ಆಂಗ್ಲ ಭಾಷೆಯೊಡನೆ ಹೈಜಿನ್ ಸಹ ಹೇಳಿಕೊಡುತ್ತಿದ್ದರು. ಪಕ್ಕದ ಬಿಸಿಲಹಳ್ಳಿ, ಕಕ್ಕಬೇವಿನಹಳ್ಳಿಗಳಿಂದ ಬರುತ್ತಿದ್ದ ಹುಡುಗರಿಗೆ ತಾವು ಹಲ್ಲುಜ್ಜಲು ಬೇವಿನ ಕಡ್ಡಿಗಳನ್ನು ತರಲು ಹೇಳುವುದನ್ನೂ ಮರೆಯುತ್ತಿರಲಿಲ್ಲ. ಹೈಜಿನ್ ತರಗತಿಯಲ್ಲಿ ಅಂದು ಅವರು ಕೊಟ್ಟ ಸೂಚನೆಗಳನ್ನು ನಾವು ಇಂದಿಗೂ ಪಾಲಿಸಿಕೊಂಡು ಬರುತ್ತಿದ್ದೇವೆ.

ಒಂದು ದಿನ ಪಾಠ ಮಾಡುತ್ತಿದ್ದಾಗ, ಹಾಗೆಯೇ ಕಣ್ಣಾಡಿಸುತ್ತಾ, ಆ ಕಣ್ಣುಗಳನ್ನು ನನ್ನತ್ತ ನಿಲ್ಲಿಸಿ "ಯಾವ ಕತ್ತೆ ಮುಂದೆ ಕೂತಿದ್ದಿ?" ಎಂದು ಕೇಳಿದರು. ಅವರು ಕೇಳಿದ್ದೇನು ಎಂದು ಅರ್ಥವಾಗದೆ ಕಕ್ಕಾಬಿಕ್ಕಿಯಾಗಿ ಎದ್ದು ನಿಂತೆ. ಅವರು "ಯಾವ ಕತ್ತೆ ಮುಂದೆ ಕೂತಿದ್ದಿ?" ಎಂದು ಮತ್ತೆ ಕೇಳಿದರು. ನಾನು ಪಿಳಿಪಿಳಿ ಕಣ್ಣುಗಳನ್ನು ಬಿಡುತ್ತಾ ಅವರನ್ನೂ, ಉಳಿದ ವಿದ್ಯಾರ್ಥಿಗಳನ್ನೂ ನೋಡಹತ್ತಿದೆ. ಕೆಲವು ಹುಡುಗರು ಮುಸಿಮುಸಿ ನಕ್ಕದ್ದು ಕೇಳಿಸಿತು.

ನನ್ನ ಪರಿಸ್ಥಿತಿ ಅವರಿಗೆ ಅರ್ಥವಾಗಿ "ಯಾವ ಕತ್ತೆ ಹರಿದುಕೊಂಡು ತಿಂದಿದೆಯೋ ನಿನ್ನ ತಲೆಯಲ್ಲಿಯ ಕೂದಲುಗಳನ್ನು?" ಎಂದು ಬಿಡಿಸಿ ಹೇಳಿದರು. ನಾನು ಇನ್ನೂ ಅಮಾಯಕವಾಗಿಯೇ ನಿಂತಿದ್ದೆ. ಈ ಬಾರಿ ಉಳಿದ ಹುಡುಗರು ಸ್ವಲ್ಪ ಜೋರಾಗಿಯೇ ನಕ್ಕಿದ್ದರು. "ಅಲ್ಲೋ, ನಿನಗೆ ಕ್ಷೌರ ಮಾಡಿದ್ದು ಯಾರು? ಕತ್ತೆ ಹರಿದುಕೊಂಡು ತಿಂದ ಹಾಗಿದೆ?" ಎಂದರು ನಗೆಯೊಂದಿಗೆ. ತಲೆಯ ಮೇಲೆ ಕೈ ಆಡಿಸುತ್ತಾ ಅವರನ್ನೂ, ಉಳಿದ ಹುಡುಗರನ್ನೂ ನೋಡಿದೆ. "ಆಯ್ತು, ಕೂಡು" ಎಂದರು. ಎಲ್ಲ ವಿದ್ಯಾರ್ಥಿಗಳತ್ತ ನೋಡುತ್ತಾ ಕುಳಿತೆ.

ನಮ್ಮದು ಸಂಪ್ರದಾಯಸ್ಥ ಕುಟುಂಬ. ವಾರ,ತಿಥಿ,ನಕ್ಷತ್ರ,,ಹಬ್ಬ-ಹರಿದಿನಗಳು, ಅಮಾವಾಶ್ಯೆ-ಹುಣ್ಣಿಮೆಗಳು ಇತ್ಯಾದಿಗಳನ್ನು ಗಮನಿಸಿ ಕ್ಷೌರ ಮಾಡಿಸಿಕೊಳ್ಳಬೇಕು. ಅದು ನಮ್ಮ ಮನೆಗೆ ಬರುತ್ತಿದ್ದ ವಯಸ್ಸಾಗಿದ್ದ ಪರ್ಮನೆಂಟ್ ನಾಪಿತ ಜಾಗಂಟಿಗೂ ಗೊತ್ತಿತ್ತು. ಬೆಳಿಗ್ಗೆ ಬೆಳಿಗ್ಗೆ ಸರಿಯಾಗಿ ಹಾಜರಾಗುತ್ತಿದ್ದ. ಮೇಲಿನವುಗಳಿಗೆ ಅನ್ವಯವಾಗಿ ಯಾರು ಕ್ಷೌರ ಮಾಡಿಸಿಕೊಳ್ಳಬೇಕು ಎಂಬುದು ಟೈಮ್ ಟೇಬಲ್‌ನಂತೆ ಮೊದಲೇ ನಿರ್ಣಯವಾಗಿರುತಿತ್ತು. ಅಪ್ಪ, ಅಜ್ಜಿ, ನಾವು ಅಣ್ಣತಮ್ಮಂದಿರುಗಳಲ್ಲಿ ಒಬ್ಬರು-ಅಂದರೆ ಕೇವಲ ಮನೆಯಲ್ಲಿ ಒಬ್ಬರು ಮಾತ್ರ ಜಾಗಂಟಿಯ ಎದುರಿಗೆ ಹೋಗಿ ಕೂಡುತ್ತಿದ್ದೆವು. ಕೇವಲ ನಿಕ್ಕರ್ ಮಾತ್ರ ಧರಿಸಿರಬೇಕು. ಯಾವ ರೀತಿ ಕ್ಷೌರ ಮಾಡಿಸಿಕೊಳ್ಳಬೇಕು ಎಂಬ ಸ್ವಾತಂತ್ರ್ಯ ನಮಗಿರುತ್ತಿರಲಿಲ್ಲ. ಅವು ಯಾವೂ ನಮಗೆ ಗೊತ್ತಿರಲೂ ಇಲ್ಲ. ಎಡಗೈಯಲ್ಲಿ ಮಿಷಿನ್ ಹಿಡಿದು ಬಲಗೈಯಿಂದ ತಲೆಯ ಮೂರು ದಿಕ್ಕುಗಳಲ್ಲಿ ಆಡಿಸುತ್ತಾ ಕಿವಿಯ ಮೇಲಿನವರೆಗೂ ಕೂದಲುಗಳನ್ನು ಉದುರಿಸುತ್ತಿದ್ದ. ಅವು ಬೆನ್ನಿನ ಮೇಲೆ ಬಿದ್ದಾಗ ಬುಳು ಬುಳು ಎಂದೆನಿಸಿ ನಗು ಬರುತ್ತಿತ್ತು. ಆದರೆ ನಗುವ ಹಾಗಿಲ್ಲ. ಜಾಗಂಟಿಗೆ ಸಿಟ್ಟು ಬರುತ್ತಿತ್ತು. ಕಾರಣ ನಕ್ಕರೆ ಅಲ್ಲಾಡುತ್ತೇವೆ. ಅಲ್ಲಾಡಿದರೆ ಆತನ ಕೆಲಸಕ್ಕೆ ಧಕ್ಕೆಯಾಗುತ್ತದೆ. ತನಗೆ ಹೇಗೆ ಬೇಕೋ ಹಾಗೆ ನಮ್ಮ ತಲೆಯನ್ನು ಚೆಂಡಿನಂತೆ ತಿರುಗಿಸುತ್ತಿದ್ದ. ಆತನು ಹೇಳಿದ ಹಾಗೆ ತಲೆಯನ್ನು ನಾವು ತಿರುಗಿಸದಿದ್ದರೆ ಅಥವಾ ಕ್ಷೌರ ಮಾಡುವಾಗ ನಾವು ತಲೆಯನ್ನು ಸ್ವಲ್ಪವಾದರೂ ಅತ್ತಿತ್ತ ಮಾಡಿದರೆ ಕೂಡಲೇ ಕೂಗಾಡುತ್ತಾ ಕೈಯಲ್ಲಿದ್ದ ಮೆಷಿನ್ನಿನಿಂದಲೋ, ಕತ್ತರಿಯಿಂದಲೋ ಬೆನ್ನಿಗೆ ತಿವಿಯುತ್ತಿದ್ದ.

ಮೆಷಿನ್ ಆಡಿಸಿಯಾದ ಮೇಲೆ ತೋಟಗಳಲ್ಲಿ ಹೆಚ್ಚಿಗೆ ಬೆಳೆದ ಬಳ್ಳಿಗಳನ್ನು ಕತ್ತರಿಸುವವರಂತೆ ಮೇಲಿನ ಕೂದಲುಗಳನ್ನು ಕತ್ತರಿಯಿಂದ ಕಟ್ ಮಾಡುತ್ತಿದ್ದ. ಆತನು ಕೂದಲುಗಳನ್ನು ಕಟ್ ಮಾಡುತ್ತಿರುವನೋ ಅಥವಾ ಬೇರು ಸಹಿತ ಕಿತ್ತುತ್ತಿರುವನೋ ತಿಳಿಯುತ್ತಿರಲಿಲ್ಲ. ಸಾಣೆ ಹಿಡಿಸಿ ಎಷ್ಟು ಕಾಲವಾಗಿರುತ್ತಿತ್ತೋ ಆ ಮೆಷಿನ್‌ಗೆ ಮತ್ತು ಕತ್ತರಿಗೆ! ನಂತರ ಕತ್ತಿಯಿಂದ ಕಿವಿಯ ಸುತ್ತಲೂ ಮತ್ತು ಕತ್ತಿನ ಹಿಂಭಾಗದಲ್ಲಿಯೂ ಕೆತ್ತುತ್ತಿದ್ದ. ಹಾಗೆ ಮಾಡುವಾಗ ಆತನು ಹಚ್ಚಿದ ನೀರು ಮೈಮೇಲೆ ಇಳಿದು ನಗು ಬರುತ್ತಿತ್ತು. ಆದರೆ ಉಸಿರು, ಮನಸ್ಸನ್ನು ಬಿಗಿ ಹಿಡಿದು ನಾವು ನಗುವ ಪ್ರಯತ್ನವನ್ನು ಕಂಟ್ರೋಲ್ ಮಾಡಿಕೊಳ್ಳುತ್ತಿದ್ದೆವು. ಏಕೆಂದರೆ ಆಗ ಆತನ ಕೈಯಲ್ಲಿ ಇರುತ್ತಿದ್ದುದು ಕತ್ತಿ! ಅಂತೂ ಕ್ಷೌರ ಆಯಿತು ಅಂದಾಗ "ಹಮ್ಮಯ್ಯ! ಬರುವ ತಿಂಗಳವರೆಗೂ ನಾವು ಫ್ರೀ" ಎಂದು ನಿಟ್ಟುಸಿರು ಬಿಡುತ್ತಿದ್ದೆವು. ಒಟ್ಟಾರೆ, ಚಿಕ್ಕಂದಿನಲ್ಲಿ ನಾಪಿತ ಜಾಗಂಟಿಯು ನಮಗೆ ದೊಡ್ಡ ವಿಲನ್! ಮಿಲಿಟರಿ ಎಂದರೆ ಏನೋ ತಿಳಿಯದ ವಯಸ್ಸಿನಲ್ಲೇ ನಾವು ಮಿಲಿಟರಿ ಕಟಿಂಗ್‌ಗೆ ಒಗ್ಗಿಕೊಂಡು ಬಿಟ್ಟಿದ್ದೆವು.

ಕ್ಷೌರ ಆದ ನಂತರ ಸೀದಾ ನಾವು ಬಚ್ಚಲು ಮನೆಗೆ ಹೋಗಬೇಕು. ತಲೆಗೆ ಸವರಿಕೊಳ್ಳಲು ಕೊಬ್ಬರಿ ಎಣ್ಣೆ ಕೈಗೆ ಹಾಕಿ ಮನೆಯಲ್ಲಿ ಬಿಡುವಿದ್ದ ಅಕ್ಕ ತಂಗಿಯರಾರೋ ಸ್ವಲ್ಪ ದೂರ ನಿಂತೇ ತಲೆಯ ಮೇಲೆ ನೀರು ಹೊಯ್ಯುತ್ತಿದ್ದರು. ನಿಕ್ಕರನ್ನು ಬಚ್ಚಲಲ್ಲಿಯೇ ಬಿಟ್ಟು ನೀರು ಪಂಚೆ ಸುತ್ತಿಕೊಂಡು, ಟೆಂಗಿನ ಚಿಪ್ಪಿನಲ್ಲಿದ್ದ ಮನೆಯಲ್ಲಿಯೇ ತಯಾರಿಸಿದ ಸಾದನ್ನು ಬೆರಳಿಗೆ ತೆಗೆದುಕೊಂಡು ದುಂಡಗೆ ಮಾಡಿಕೊಂಡು ಹಣೆಗೆ ಹಚ್ಚಿಕೊಳ್ಳುವಾಗ ಕನ್ನಡಿಯಲ್ಲಿ ನೋಡಿಕೊಂಡರೆ ಒಳ್ಳೇ ಮುಳ್ಳು ಹಂದಿಯ ಮೈಮೇಲಿನ ಕೂದಲುಗಳ ಹಾಗೆ ಗಿಡ್ಡನಾದ ಕೂದಲುಗಳು ನಿಟಾರಾಗಿ ತಲೆಯ ಮೇಲೆ ನಿಂತಿರುತ್ತಿದ್ದವು. ಕೈ ಆಡಿಸಿದರೆ ಕಂಬಳಿಯ ಮೇಲೋ, ಒಣಗಿದ ಹುಲ್ಲುಗಳ ಮೇಲೋ ಕೈ ಆಡಿಸಿದಂತೆ ಭಾಸವಾಗುತ್ತಿತ್ತು.

ಆ ಅವತಾರದಲ್ಲಿ ಅಂದು ತರಗತಿಯಲ್ಲಿ ನೋಡಿದ್ದ ಜೆ. ಶ್ರೀನಿವಾಸಾಚಾರ್ಯ ಮಾಸ್ತರರು ನನಗೆ "ಯಾವ ಕತ್ತೆಯ ಮುಂದೆ ಕೂತಿದ್ದೆಯೋ?" ಎಂದು ಪ್ರಶ್ನಿಸಿದ್ದರು. ಅವರ ಸಮಯ ಪ್ರಜ್ಞೆಗೆ, ಅವರಲ್ಲಿದ್ದ ಹಾಸ್ಯ ದೃಷ್ಟಿಗೆ ಮನಸೋತು ನಾನೂ ಮನಸಾರೆ ನಕ್ಕೆ! ಅದು ಬೇರೆ ವಿಷಯ!

ಐವತ್ತೊಂದು ವರ್ಷಗಳು ಕಳೆದು ಹೋಗಿವೆ. ತಲೆಯಲ್ಲಿ ಅಳಿದುಳಿದಿರುವ ಕೂದಲುಗಳೂ ಬೆಳ್ಳಗಾಗಿ ಹೋಗಿವೆ. ಆದರೂ ಕ್ಷೌರಕ್ಕೆ ಷಾಪಿಗೆ ಹೋದಾಗ ಮಾಸ್ತರರ ಮಾತುಗಳು ಪ್ರತಿಸಲವೂ ಜ್ಞಾಪಕಕ್ಕೆ ಬಂದು "ಸರಿಯಾಗಿ ಮಾಡಪ್ಪಾ-ಒಂದೇ ಲೆವೆಲ್ ಇರುವಂತೆ ನೋಡಿಕೋ" ಎಂದು ಹೇರ್ ಸ್ಟೈಲಿಸ್ಟ್‌ಗೆ ಹೇಳುತ್ತಿರುತ್ತೇನೆ.

ಆಯಿತು. ನಾನಾವ ಕತ್ತೆಯ ಮುಂದೆ ಕುಳಿತಿದ್ದೆನೋ ನಿಮಗೆ ಈಗಾಗಲೇ ಮನದಟ್ಟಾಗಿರಬೇಕು. ಆದರೆ ನನಗೆ ಮುಂಜಾನೆ ವಾರ್ತಾ ಪತ್ರಿಕೆಯಲ್ಲಿ ಓದಿದ "ಉಚಿತ ಕ್ಷೌರ-ಕತ್ತೆಗಳ ಅಭಿವೃದ್ಧಿ" ಶೀರ್ಷಿಕೆಯ ಅರ್ಥ ಆಗಿಲ್ಲ. ನಿಮಗಾರಿಗಾದರೂ ಅರ್ಥವಾಗಿದ್ದಲ್ಲಿ ಬೇಗನೆ ತಿಳಿಸಿ ನಾನು ತಲೆ ಕೆರೆದು ಕೊಳ್ಳುತ್ತಿರುವುದನ್ನು ನಿಲ್ಲಿಸುವಂತೆ ಮಾಡುವಿರಾ!?

***

❑ *ಕೃಷ್ಣಮೂರ್ತಿ ಕಲುಮಂಗಿ*

# ಜಗದ್ವಿಖ್ಯಾತ ಮನಮೋಹಕ ಮೈಸೂರು ಅರಮನೆ



ನ್ಯೂಯಾರ್ಕ್ ಟೈಮ್ಸ್‌ನ ಸಮೀಕ್ಷೆಯ ಪ್ರಕಾರ ವಿಶ್ವದ ನೋಡಲೇ ಬೇಕಾದಂತಹ 31 ಪ್ರಮುಖ ಸ್ಥಳಗಳಲ್ಲಿ ಮೈಸೂರು ಅರಮನೆಗೆ ದ್ವಿತೀಯ ಸ್ಥಾನ


# Saujanya Printing Press

**A HOUSE OF QUALITY PRINTING**

C-95, Okhla Industrial Area, Phase-I,
New Delhi - 110 020
Phone : 26815778, 41611143
Mobile : 9811104398, 9811604398
e-mail : saujanyapp2010@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

**ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ**

**Delhi Karnataka Sangha's Abhimatha Monthly,**
**Nov -2011, Price Rs.1/- RNI Regn. No. 53405/91, DL-SW-15/4016/10-11-12**
**Printout Date : Nov 8th / 9th, Postal Date :10th / 11th, Total Pages-24**




**Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press, C-95, Okhla Industrial Area, Phase-I, New Delhi-110020, Tel: 26815778, 41611143,**